ಅಖಿಲ
ಭಾರತ
ಪತ್ರಿಕೆ

ಮಾರ್ಚ್ 2017



# ಹಣದ ಮೌಲ್ಯ

ಬೆಲೆ : 15/–



*Peace and stillness are*
*the great remedy for disease.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### "ಹಣದ ಮೌಲ್ಯ"

**ಅನು : ಡಾ. ಕೆ.ಎಸ್. ಆಮೂರ**
ಹಣ ಹಾಗೂ ರಹಸ್ಯ ದೈವೀ ಸತ್ಯಗಳು 3
ಹಣದ ಶಕ್ತಿಯನ್ನು ನಿರ್ವಹಿಸುವುದು 28

**ಅನು : ಶ್ರೀ ಪುರುಷೋತ್ತಮ ಗಲಗಲಿ**
ಹಣ ಮತ್ತು ದೈವೀ ಕಾರ್ಯ 38


**ಅನು : ಡಾ. ಕೆ.ಎಸ್. ಆಮೂರ**
ಹಣ ಹಾಗೂ ಹೊಸ ಪ್ರಜ್ಞೆ 48

ವಾರ್ತಾಪತ್ರ 59

## (All India Magazine) ಸಂಪಾದಕೀಯ:

ಮಾನವ ಸ್ವಭಾವದ ಮೇಲೆ ಬಹಳ ದೊಡ್ಡ ಪ್ರಮಾಣದಲ್ಲಿ ಹಿಡಿತ ಹೊಂದಿರುವ ಶಕ್ತಿಗಳಲ್ಲಿ ಹಣವೂ ಒಂದು. ಹಣದ ಹಿಂದೆ ಒಂದು ಸಾಮರ್ಥ್ಯವಿದೆ. ಅದನ್ನು ಭಗವಂತನ ಸೇವೆಗಾಗಿ ಹಾಗೂ ಪೃಥ್ವಿಯ ಮೇಲೆ ದೈವೀ ಜೀವನದ ಪೂರ್ಣತೆಗಾಗಿ ಉಪಯೋಗಿಸಬೇಕು. ಜೀವನದ ಇತರ ಮುಖಗಳನ್ನು ಕುರಿತು ಇರುವ ಹಾಗೆ ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಹಣವನ್ನು ಕುರಿತು ಅನೇಕ ರಹಸ್ಯ ಸತ್ಯಗಳನ್ನು ತೆರೆದು ತೋರಿಸಿದ್ದಾರೆ. ಅದು ಒದಗಿಸಬಹುದಾದ ಸಾಧನ, ಬೀರುವ ಪ್ರಭಾವ, ಅದರ ಹಿಂದಿರುವ ಕಾರ್ಯ ಕೈಕೊಳ್ಳುವ ಶಕ್ತಿಗಳು ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ಹಣದೊಂದಿಗೆ ಯೌಗಿಕ ರೀತಿಯಲ್ಲಿ ವ್ಯವಹರಿಸುವುದು ಇವೆಲ್ಲ ವಿಷಯಗಳಿವೆ. ಈ ಸಂಚಿಕೆಯಲ್ಲಿ ಅವರ ಬರಹಗಳಿಂದ ಆಯ್ದು ಹಣ ಕುರಿತು ಇರುವ ವಿಷಯಗಳನ್ನು ಒಟ್ಟಿಗೆ ಸೇರಿಸಿ ಕೊಡಲಾಗಿದೆ.

*



ಎಲ್ಲ ಸಂಪತ್ತು ಭಗವಂತನಿಗೆ ಸೇರಿದುದಾಗಿದೆ. ಭಗವಂತನೇ ಆ ಸಂಪತ್ತನ್ನು ಜೀವಿಸುವ ಸತ್ತೆಗಳಿಗೆ ಕಡ ಕೊಡುತ್ತಾನೆ ಮತ್ತು ಅವರು ಸ್ವಾಭಾವಿಕವಾಗಿ ಅವನಿಗೇ ಅದನ್ನು ಮರಳಿ ಕೊಡಬೇಕು.

*

ಚೈತ್ಯಾತ್ಮಿಕ ಪ್ರಭಾವದಡಿಯಲ್ಲಿರುವ ಸಂಪತ್ತು: ಒಡೆಯನಾದ ಭಗವಂತನತ್ತ ಮರಳಿ ಹೋಗಲು ಸಿದ್ಧವಾಗಿರುವ ಸಂಪತ್ತು.

*

ಒಂದು ದಿನ ಬರಲಿದೆ, ಅಂದು ಈ ಜಗತ್ತಿನ ಎಲ್ಲ ಸಂಪತ್ತು ಕಟ್ಟಕಡೆಗೆ ದೈವವಿರೋಧೀ ಶಕ್ತಿಗಳಿಗೆ ಗುಲಾಮವಾಗಿರುವುದರಿಂದ ಮುಕ್ತಗೊಂಡು ತನ್ನನ್ನು ಸ್ವಯಂಪ್ರೇರಣೆಯಿಂದ, ಪೂರ್ತಿಯಾಗಿ, ಪೃಥ್ವಿಯ ಮೇಲಿನ ದೈವೀ ಕಾರ್ಯಕ್ಕೆ ಅರ್ಪಣೆ ಮಾಡಿಕೊಳ್ಳುತ್ತದೆ.

**CWM, 15/48–49** **– ಶ್ರೀಮಾತೆ**

*

## ಹಣ ಹಾಗೂ ರಹಸ್ಯ ದೈವೀ ಸತ್ಯಗಳು

### ಹಣದ ಸಾಮರ್ಥ್ಯ ಮತ್ತು ಅದರ ಪ್ರಭಾವ

ಹಣದ ಮೇಲೆ ಪ್ರಾಣಿಕ ಶಕ್ತಿಗಳಿಗೆ ಭವ್ಯ ಪ್ರಭಾವವಿರುತ್ತದೆ.

(ಮೌನದ ನಂತರ) ಮನುಷ್ಯ ಹಣ ಕುರಿತು ಯೋಚಿಸಿದಾಗ ಅವನು ಬ್ಯಾಂಕ–ನೋಟುಗಳು, ಇಲ್ಲವೆ ನಾಣ್ಯಗಳು ಇಲ್ಲವೆ ಒಂದು ಬಗೆಯ ಸಂಪತ್ತು, ಕೆಲವು ಮೌಲ್ಯವಿರುವ ವಸ್ತುಗಳು ಇವೆಲ್ಲವನ್ನು ಗಮನಕ್ಕೆ ತಂದುಕೊಳ್ಳುತ್ತಾನೆ. ಆದರೆ ಇದು ಕೇವಲ ಒಂದು ಶಕ್ತಿಯ ಭೌತಿಕ ಅಭಿವ್ಯಕ್ತಿ, ಅದನ್ನು ಪ್ರಾಣಿಕ ನಿರ್ವಹಿಸಬಹುದು, ಅದನ್ನು ವಶಪಡಿಸಿಕೊಂಡಾಗ ಹಾಗೂ ನಿಯಂತ್ರಿಸಿದಾಗ ಅದು ಸ್ವಯಂ ಚಾಲಿತವಾಗಿ ಹಣದ ಈ ಹೆಚ್ಚಿನ ಭೌತಿಕ ಅಭಿವ್ಯಕ್ತಿಗಳನ್ನು ತರುತ್ತದೆ. ಅದು ಒಂದು ಬಗೆಯ ಸಾಮರ್ಥ್ಯ.

**(ಮೌನ)**

ಅದು ಕೆಲವೊಂದು ಬಹಳ ಭೌತಿಕ ಕಂಪನಗಳನ್ನು ಆಕರ್ಷಿಸುತ್ತದೆ. ಅವುಗಳಿಗೆ ಉಪಯೋಗವಾಗುವ ಕ್ಷಮತೆ ಇರುತ್ತದೆ, ಅದು ಅದರ ಬಲವನ್ನು ಹೆಚ್ಚಿಸುತ್ತದೆ, ಅದು ಶಾರೀರಿಕ ವ್ಯಾಯಾಮದ ಕ್ರಿಯೆ ಇದ್ದ ಹಾಗಿರುತ್ತದೆ, ಅದು ಅದರ ಬಲವನ್ನು ಉಪಯೋಗಿಸುವುದರ ಮೂಲಕ ಹೆಚ್ಚಿಸುತ್ತದೆ. ಉದಾಹರಣೆಗೆ ನಿಮಗೆ ಈ ಶಕ್ತಿಯ ಮೇಲೆ ನಿಯಂತ್ರಣವಿದ್ದರೆ– ಅದು ಪ್ರಾಣಿಕ ಲೋಕದಲ್ಲಿಯ ಶಕ್ತಿಯಾಗಿರುತ್ತದೆ, ಅದರ ಬಣ್ಣ ಕೆಂಪು, ಕರಿದು, ಅತಿ ಬಲವುಳ್ಳ ಕೆಂಪು ಮತ್ತು ಆಳದ ಬಂಗಾರ ಬಣ್ಣ ಇವುಗಳ ನಡುವೆ ಬದಲಾಗುತ್ತಿರುತ್ತದೆ, ಅದು ಉಜ್ವಲ–ವಾಗಿಯೂ ಇರುವುದಿಲ್ಲ, ಕಳೆಗುಂದಿಯೂ ಇರುವುದಿಲ್ಲ. ಈ ಶಕ್ತಿಯನ್ನು ಚಲಿಸುವಂತೆ, ಚಲಾವಣೆಯಲ್ಲಿರುವಂತೆ ಮಾಡಿದಾಗ ಅದರ ಬಲ ಹೆಚ್ಚುತ್ತದೆ, ಅದು ಸಂಗ್ರಹ ಮಾಡಿ, ಉಪಯೋಗಿಸದೆ ಇರಿಸುವಂತಹ ಏನೋ ಒಂದಲ್ಲ. ಈ ಶಕ್ತಿ ಯಾವಾಗಲೂ ಚಲಾವಣೆಯಲ್ಲಿರಬೇಕು. ಉದಾಹರಣೆಗೆ ಜಿಪುಣರಾದ ಜನರು, ಎಲ್ಲ ಹಣವನ್ನು, ತಮ್ಮೆಡೆಗೆ ಆಕರ್ಷಿಸಿಕೊಳ್ಳುವ ಎಲ್ಲ ಸಂಪತ್ತನ್ನು ಚಲನೆಯ ಈ ಶಕ್ತಿಯನ್ನು ಉಪಯೋಗಿಸದೆ ಬದಿಗೆ ಸರಿಸಿ ಇಟ್ಟುಬಿಡುತ್ತಾರೆ ಮತ್ತು ಅದು ಪಾರಾಗಿ ಹೋಗುತ್ತದೆ ಇಲ್ಲವೆ ಮರಗಟ್ಟಿ ಉಳಿದುಕೊಳ್ಳುತ್ತದೆ ಮತ್ತು ಅದರ ಬಲವನ್ನು ಕಳೆದುಕೊಳ್ಳುತ್ತದೆ.

*

**ಹಣದ ಸಾಮರ್ಥ್ಯದೊಂದಿಗೆ ವ್ಯವಹರಿಸಲು ನಿಜವಾದ ವಿಧಾನ**

ಹಣದ ಸಾಮರ್ಥ್ಯದ ಪ್ರವಾಹದಲ್ಲಿರಲು ವಿಧಾನ ನಿಖರವಾಗಿ ಇಲ್ಲಿ ಬರೆದು

ಹೇಳಿದ್ದರ ಪ್ರಕಾರ ಇದೆ: ಅದರ ಬಗ್ಗೆ ಪರಿಪೂರ್ಣವಾಗಿ ಅವ್ಯೆಯಕ್ತಿಕವಾಗಿರುವ ಭಾವನೆ, ಅದು ನಿಮಗೆ ಸೇರಿದುದಲ್ಲ, ಆದರೆ ಅದೊಂದು ಶಕ್ತಿಯಾಗಿದ್ದು ಅದಿರಬೇಕಾದತ್ತ ಅದನ್ನು ನಿರ್ದೇಶನ ಮಾಡಬಲ್ಲಿರಿ ಎಂಬ ಭಾವನೆ ಇರಬೇಕು, ಅದರಿಂದಾಗಿ ಅತ್ಯಂತ ಉಪಯುಕ್ತ ಕಾರ್ಯ ಮಾಡುವಂತಾಗುವುದು ಮತ್ತು ಈ ಚಲನೆಗಳ ಮೂಲಕ, ಸತತ ಕ್ರಿಯೆಯ ಮೂಲಕ ಆಕರ್ಷಿಸುವ ಸಾಮರ್ಥ್ಯ, ಹಾಗೆಯೇ ಸಂಘಟನೆ ಮಾಡುವ ಒಂದಿಷ್ಟು ಸಾಮರ್ಥ್ಯ ಹೆಚ್ಚಾಗುತ್ತವೆ ಎಂದರೆ ಭೌತಿಕ ಸಾಧನವನ್ನು ಹೊಂದಿರದ ಮನುಷ್ಯ, ಆ ಭೌತಿಕ ಪರಿಸ್ಥಿತಿಗಳಲ್ಲಿ ಇರದೆ ಇದ್ದವನು, ಆ ಪರಿಸ್ಥಿತಿಗಳಲ್ಲಿ ಅವನು ಭೌತಿಕವಾಗಿ ನಿರ್ವಹಿಸಬಲ್ಲವನಾಗಿರುತ್ತಾನೆ, ಇಂತಹನು ಆ ಶಕ್ತಿಯನ್ನು ವಶದಲ್ಲಿಟ್ಟುಕೊಂಡಿದ್ದರೆ ಅವನು ಅದು ಕಾರ್ಯ–ಕೈಕೊಳ್ಳುವಂತೆ ಮಾಡಬಲ್ಲನು ಚಲಾವಣೆಯಲ್ಲಿ ತರಬಲ್ಲನು ಮತ್ತು ಎಂದಾದರೂ ಅವನು ತನಗೆ ಅವಶ್ಯವಾಗಿದೆ ಎಂದು ಕಂಡುಕೊಂಡಾಗ ಅದರಿಂದ ಅವನಿಗೆ ಅವಶ್ಯವಾದ ಸಾಮರ್ಥ್ಯ ದೊರಕುತ್ತದೆ, ಹಣ ಅವನ ಬಳಿ ಏಕೆ ಬರಬೇಕೆಂಬುದಕ್ಕೆ ಬಾಹ್ಯದಲ್ಲಿ ಯಾವ ಕುರುಹು ಇಲ್ಲವೆ ಕಾರಣ ಕಂಡುಬರುವುದಿಲ್ಲ, ರೂಢಿ–ಯಲ್ಲಿರುವ ಸಂಪತ್ತಿಗೆ ಸಾಮಾನ್ಯವಾಗಿ ಇರುವ ಪರಿಸ್ಥಿತಿಗಳಿಗೆ ವಿರುದ್ಧ–ವಾದವುಗಳಲ್ಲಿ ಅವನಿದ್ದರೂ ಅವನು ಈ ಸಾಮರ್ಥ್ಯವನ್ನು ನಿರ್ವಹಿಸಬಲ್ಲನು ಮತ್ತು ತನ್ನ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಅವಶ್ಯವಾದ ಎಲ್ಲ ಸಂಪತ್ತನ್ನು ಯಾವಾಗಲೂ ತನ್ನ ಹತೋಟಿಯಲ್ಲಿ ಇಟ್ಟುಕೊಂಡಿರಬಲ್ಲನು.

*

**ಹಣದ ಸಾಮರ್ಥ್ಯ ವಿರೂಪಗೊಂಡ ಜಗತ್ತಿಗೆ ಸೇರಿದೆ**

ವಿರೂಪಗೊಂಡ ಸ್ಥಿತಿಯಲ್ಲಿ ಸೃಷ್ಟಿಯಾದ ಜಗತ್ತಿಗೆ ಹಣದ ಸಾಮರ್ಥ್ಯ ಸೇರಿರುತ್ತದೆ. ಅದು ಪ್ರಾಣಿಕ ಜಗತ್ತಿಗೆ ಸೇರಿದ ಏನೋ ಒಂದು, ಇದನ್ನು ಅವನು ಹೇಳುತ್ತಾನೆ, ಅಲ್ಲವೆ? ಅದು ಪ್ರಾಣಿಕ ಹಾಗೂ ಭೌತಿಕ ಜಗತ್ತುಗಳಿಗೆ ಸೇರಿದೆ ಎಂದು ಹೇಳುತ್ತಾನೆ. ಹಾಗಾಗಿ ಅದು ಎಲ್ಲ ಕಾಲದಲ್ಲಿ, ಯಾವಾಗಲೂ, ಆಸುರೀ ಶಕ್ತಿಗಳ ನಿಯಂತ್ರಣದಲ್ಲಿತ್ತು ಮತ್ತು ಕೈಕೊಳ್ಳಬೇಕಾದದು ಏನೆಂದರೆ, ನಿಖರವಾಗಿ, ಅದನ್ನು ಆಸುರೀ ಶಕ್ತಿಗಳಿಂದ ಮತ್ತೆ ಮರಳಿ ಜಯಿಸಬೇಕು.

ಆ ಕಾರಣದಿಂದಾಗಿ ಗತಕಾಲದಲ್ಲಿ ಯೋಗವನ್ನು ಕೈಕೊಳ್ಳಲು ಬಯಸುತ್ತಿದ್ದವರೆಲ್ಲ ಇಲ್ಲವೆ ಶಿಸ್ತುಪಾಲನೆಯೊಂದನ್ನು ಅನುಸರಿಸಲು ಬಯಸುತ್ತಿದ್ದವರೆಲ್ಲ ಮನುಷ್ಯ ಹಣವನ್ನು ಸ್ಪರ್ಶಿಸಬಾರದು, ಏಕೆಂದರೆ ಅವರು

ಹೇಳುತ್ತಿದ್ದುದರ ಪ್ರಕಾರ ಹಣ ಸೈತಾನ ರೂಪದ್ದು ಇಲ್ಲವೆ ಆಸುರೀ ರೂಪದ್ದಾಗಿತ್ತು, ಇಲ್ಲವೆ ಕನಿಷ್ಠಪಕ್ಷ ದೈವೀ ಜೀವನಕ್ಕೆ ವಿರುದ್ಧವಾದದ್ದಾಗಿತ್ತು. ಆದರೆ ಇಡೀ ಜಗತ್ತು, ಅದರ ಎಲ್ಲ ಪ್ರಕಟಣೆಯಲ್ಲಿ ಸ್ವತಃ ಭಗವಂತನೇ ಆಗಿದೆ, ಹಾಗಾಗಿ ಅದು ಇಡಿಯಾಗಿ ಭಗವಂತನಿಗೆ ಸೇರಿದೆ; ಕೇವಲ ಈ ಆಧಾರದ ಮೇಲೆ ಹಣದ ಶಕ್ತಿ ಭಗವಂತನಿಗೆ ಸೇರಿದೆ ಎಂದು ಹೇಳುತ್ತಾನೆ. ಮನುಷ್ಯ ಆ ಶಕ್ತಿಗಳನ್ನು ಮತ್ತೆ ಜಯಿಸಿ ಭಗವಂತನಿಗೆ ಕೊಡಬೇಕು. ಅವು ಆಸುರೀ ಶಕ್ತಿಗಳ ಪ್ರಭಾವದಡಿ–ಯಲ್ಲಿದ್ದವು: ಮನುಷ್ಯ ಅವುಗಳನ್ನು ಮರಳಿ ಗೆದ್ದುಕೊಂಡು ಭಗವಂತನ ಹತೋಟಿಯಲ್ಲಿರಿಸಬೇಕು, ಅದರಿಂದಾಗಿ ಅವನು ಅವುಗಳನ್ನು ತನ್ನ ಪರಿವರ್ತನೆಯ ದೈವೀ ಕಾರ್ಯಕ್ಕೆ ಉಪಯೋಗ ಮಾಡಬಲ್ಲನು.

*

**ಹಣದ ಭೌತಿಕ ಪ್ರಕಟಣೆ ಕೇವಲ ಒಂದು ರೂಢಿ**

ಆದರೆ ಇದು ಕೇವಲ ರೂಢಿಗತವಾದದ್ದು. ಉದಾಹರಣೆಗೆ ಕೆಲವು ದೇಶ–ಗಳಿವೆ, ಅಲ್ಲಿ ಚಿಕ್ಕ ಚಿಪ್ಪುಗಳನ್ನು ಹಣದ ಸ್ಥಾನದಲ್ಲಿ ಉಪಯೋಗ ಮಾಡುತ್ತಾರೆ. ಇನ್ನೂ ಬೇರೆ ತರಹದ ದೇಶಗಳಿವೆ: ಯಾರೋ ಒಬ್ಬರು ಬರೆದಿದ್ದ ಕತೆ ಹೀಗಿದೆ: ಉತ್ತರದ ಕಡೆಗಿರುವ ದೇಶದಲ್ಲಿ ಸಂಪತ್ತೆಂದರೆ ಮೀನು ಹಿಡಿಯುವುದಕ್ಕಾಗಿ ಇರುವ ಗಾಳಗಳಾಗಿರುತ್ತವೆ. ಸಿರಿವಂತನೆಂದರೆ ಅವನಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮೀನು–ಗಾಳಗಳಿರುತ್ತವೆ ಎಂದು ತಿಳಿಯಬೇಕು. ಇವುಗಳೆಂದರೇನು ಎಂಬುದು ನಿಮಗೆ ತಿಳಿದಿದೆಯಲ್ಲವೆ? ಮೀನು ಹಿಡಿಯುವುದಕ್ಕಾಗಿರುವ ಕಬ್ಬಿಣದ ಚಿಕ್ಕ ಗಾಳಗಳು, ಅವುಗಳನ್ನು ಬಲೆಯ ಜೊತೆಗೆ ಜೋಡಿಸಲಾಗಿರುತ್ತದೆ. ಹಾಗಾಗಿ ಅತಿದೊಡ್ಡ ಸಂಖ್ಯೆಯಲ್ಲಿ ಮೀನು–ಗಾಳಗಳನ್ನು ಹೊಂದಿದವನು ಲಕ್ಷಾಧಿಪತಿ–ಯಾಗಿರುತ್ತಾನೆ!

ಅದು ಕೇವಲ ರೂಢಿಯಿಂದ ಬಂದದ್ದು, ಅದರ ಹಿಂದಿರುವುದು ನಾನು ಹೇಳುತ್ತಿರುವ ಶಕ್ತಿ, ಹಾಗಾಗಿ ಅದು ಎಲ್ಲ ತರಹದ ರೀತಿಗಳಲ್ಲಿ ಪ್ರಕಟವಾಗಿದೆ. ಉದಾಹರಣೆಗೆ ಬಂಗಾರ ಕೂಡ. ಜನರು ಬಂಗಾರಕ್ಕೆ ಒಂದು ಮೌಲ್ಯವನ್ನು ಕೊಟ್ಟಿದ್ದಾರೆ, ಏಕೆಂದರೆ ಎಲ್ಲ ಲೋಹಗಳಲ್ಲಿ ಅತಿ ಕಡಿಮೆ ಕೆಡುವ ಲೋಹ ಬಂಗಾರವಾಗಿದೆ. ಅದನ್ನು ಅನಿರ್ದಿಷ್ಟ ಕಾಲದವರೆಗೆ ರಕ್ಷಿಸಿಕೊಂಡು ಬರಬಹುದು. ಇದೇ ಅದಕ್ಕೆ ಕಾರಣ, ಬೇರಾವ ಕಾರಣವೂ ಇಲ್ಲ. ಆದರೆ ಅದು ಕೇವಲ ಒಂದು

ಸಂಪ್ರದಾಯ. ಅದಕ್ಕೆ ಪ್ರಮಾಣವೆಂದರೆ ಬಂಗಾರದ ಹೊಸ ಗಣಿಯನ್ನು ಕಂಡು ಹಿಡಿದು ಅದನ್ನು ಉಪಯೋಗಿಸಿದಾಗೆಲ್ಲ ಅದರ ಬೆಲೆ ಕುಸಿತ ಕಂಡಿದೆ. ಇವು ಮನುಷ್ಯರೊಳಗೆ ಕೇವಲ ಸಂಪ್ರದಾಯಗಳು. ಹಣವನ್ನು ಸಾಮರ್ಥ್ಯಪೂರ್ಣ–ವಾದದ್ದನ್ನಾಗಿ ಮಾಡುವುದು ಇದಲ್ಲ, ಆದರೆ ಅದರ ಹಿಂದಿರುವ ಶಕ್ತಿ. ಸ್ವಲ್ಪ ಹಿಂದೆ ನಾನು ಹೇಳುತ್ತಿದ್ದ ಹಾಗೆ ಅದು ಯಾವುದೇ ವಸ್ತುವನ್ನು ಆಕರ್ಷಿಸಲು, ಭೌತಿಕ ವಸ್ತುಗಳನ್ನು ಉಪಯೋಗಿಸಲು ಶಕ್ತವಾಗಿರುವ ಶಕ್ತಿ.

ಹಾಗಾಗಿ ಇದನ್ನು ಒಂದು ಸಂಪ್ರದಾಯಕ್ಕನುಗುಣವಾಗಿ ಉಪಯೋಗಿಸ–ಲಾಗುತ್ತದೆ. ಈಗ ಸಂಪತ್ತನ್ನು ಕಾಗದದ ತುಂಡುಗಳಿಂದ ಪ್ರತಿನಿಧಿಸಲಾಗಿರುತ್ತದೆ ಎಂದು ತಿಳಿಯಲಾಗಿದೆ, ಅವು ಬಹಳ ಕೊಳೆಯಾಗಿರುತ್ತವೆ, ಅವುಗಳ ಮೇಲೆ ಒಂದಿಷ್ಟೇನನ್ನೋ ಮುದ್ರಿಸಲಾಗಿರುತ್ತದೆ. ಅವು ಒಟ್ಟಿನಲ್ಲಿ ಜುಗುಪ್ಸೆ ತರಿಸು–ವಂತಹವು, ಬಹಳಷ್ಟು ಸಲ ಅಗ್ನಿ ಹೊತ್ತಿಕೊಳ್ಳುವಂತೆ ಮಾಡಲು ಒಳ್ಳೆಯ–ವಾಗಿರುತ್ತವೆ.

ಆದರೆ ಅದನ್ನು ದೊಡ್ಡ ಸಂಪತ್ತೆಂದು ಪರಿಗಣಿಸಲಾಗುತ್ತದೆ, ಏಕೆ? ಏಕೆಂದರೆ ಅದು ಸಂಪ್ರದಾಯ. ಆದಾಗ್ಯೂ ಇದನ್ನು ಆಕರ್ಷಿಸಲು ಕ್ಷಮತೆಯುಳ್ಳವನು ಒಳ್ಳೆಯದಾದ ಏನೋ ಒಂದಕ್ಕೆ ಉಪಯೋಗ ಮಾಡುವವನು, ಅದರಿಂದ ಈ ಜಗತ್ತಿನ ಯೋಗಕ್ಷೇಮವನ್ನು ಹೆಚ್ಚಿಸುವವನು, ಜಗತ್ತಿನ ಯೋಗಕ್ಷೇಮ ಹಾಗೂ ಅದು ಒಳ್ಳೆಯ ರೀತಿಯಲ್ಲಿರುವಿಕೆಗಳನ್ನು ಹೆಚ್ಚಿಸುವವನು ಹಣದ ಸಾಮರ್ಥ್ಯದ ಮೇಲೆ ಹಿಡಿತ ಸಾಧಿಸಿರುತ್ತಾನೆ, ಎಂದರೆ ಆ ಹಣದ ಹಿಂದಿರುವ ಸಾಮರ್ಥ್ಯದ ಮೇಲೆ ಹಿಡಿತ ಸಾಧಿಸಿರುತ್ತಾನೆ.

*

**ಹಾಳೆಯ ಮೇಲಿರುವ ಹಣ**

ಫ್ರೆಂಚ್ ಭಾಷೆಯಲ್ಲಿ ಹಣವನ್ನು ಬೆಳ್ಳಿ (argent) ಎಂದು ಕರೆಯುತ್ತಾರೆ. ಬೆಳ್ಳಿ ಬಿಳಿ ಬಣ್ಣದ ಲೋಹದ ಹೆಸರು, ಅದು ಉಳಿದ ಲೋಹಗಳಿಗಿಂತ ಸ್ವಲ್ಪ ಹೆಚ್ಚಿನದಾಗಿರುತ್ತದೆ, ಸುಂದರವಾಗಿರುತ್ತದೆ, ಹೆಚ್ಚು ಕಾಲ ಉಳಿದುಕೊಳ್ಳುತ್ತದೆ. ಅದು ಸುಲಭವಾಗಿ ಆಕ್ಸಿಜೆನ್‌ದ ಬೆರಕೆಗೆ ಒಳಗಾಗುವುದಿಲ್ಲ, ಹಾಳಾಗುವುದಿಲ್ಲ. ಹಾಗಾಗಿ ಇದನ್ನು ಬೆಳ್ಳಿಹಣ ಎಂದು ಕರೆಯಲಾಗುತ್ತದೆ ಮತ್ತು ನಂತರ ಅದನ್ನು ವಿಸ್ತರಿಸಿ

ಎಲ್ಲ ಸಂಪತ್ತನ್ನು ಕೂಡ ಬೆಳ್ಳಿ ಎಂದು ಕರೆಯಲಾಗುತ್ತದೆ. ಅದು ನಿಜವಾಗಿ ಹಾಳೆ ಇಲ್ಲವೆ ಬಂಗಾರ ಇಲ್ಲವೆ ಕೆಲವೊಂದು ಬರೆದಿಟ್ಟ ವಿಷಯಗಳು, ಏಕೆಂದರೆ ಬಹಳಷ್ಟು ಭವ್ಯ ಸಂಪತ್ತುಗಳು ಕೇವಲ ಹಾಳೆಯ ಮೇಲೆ ಬರೆದಿಟ್ಟ ಸಂಖ್ಯೆಗಳಾ–ಗಿರುತ್ತವೆ, ಅವು ಚಲಾವಣೆಯಲ್ಲಿರುವ ಹಾಳೆಗಳಾಗಿರುವುದಿಲ್ಲ, ಕೇವಲ ಪುಸ್ತಕ–ಗಳಾಗಿರುತ್ತವೆ! ಜಗತ್ತನ್ನಾಳುವ ಭವ್ಯ ಐಶ್ವರ್ಯಗಳಿವೆ ಮತ್ತು ಅವುಗಳನ್ನು ಕೇವಲ ಹಾಳೆಗಳ ಮೇಲೆ ಬರೆದಿಡಲಾಗುತ್ತದೆ, ಅಲ್ಲಿ ದಾಖಲೆಗಳು ಹಾಗೂ ಮನುಷ್ಯರ ನಡುವೆ ಸಂಪ್ರದಾಯಗಳಿರುತ್ತವೆ. ಆ ಐಶ್ವರ್ಯ ಹೆಚ್ಚಾಗಬಹುದು, ಮೂರು ಪಟ್ಟಾಗಬಹುದು, ನಾಲ್ಕುಪಟ್ಟಾಗಬಹುದು, ಹತ್ತು ಪಟ್ಟಾಗಬಹುದು ಇಲ್ಲವೆ ಏನೂ ಇರದ ಸ್ಥಿತಿಗೆ ಬರಬಹುದು. ಪ್ರತಿಯೊಂದೂ ಹಾಳೆಯ ಮೇಲಿರುತ್ತದೆ. ಅವರು ಎಲ್ಲವನ್ನೂ ಮಾರುತ್ತಾರೆ, ಹತ್ತಿ, ಸಕ್ಕರೆ, ಧಾನ್ಯ, ಕಾಫೀ, ಹೀಗೆ ಏನೆಲ್ಲವನ್ನೂ ಮಾರುತ್ತಾರೆ, ಆದರೆ ಅಲ್ಲಿ ಏನೂ ಇರುವುದಿಲ್ಲ! ಅಲ್ಲಿ ಹತ್ತಿ, ಸಕ್ಕರೆ, ಧಾನ್ಯ ಹೀಗೆ ಏನೂ ಇರುವುದಿಲ್ಲ. ಪ್ರತಿಯೊಂದೂ ಹಾಳೆಯ ಮೇಲಿರುತ್ತದೆ! ಹಾಗಾಗಿ ನೀವು ಲಕ್ಷಾನುಗಟ್ಟಲೆ ಬೆಲೆಯಿರುವ ಹತ್ತಿಯನ್ನು ಖರೀದಿಸುತ್ತೀರಿ, ನಿಮ್ಮಲ್ಲಿ ಹತ್ತಿಯ ಒಂದು ಹೊರೆ ಕೂಡ ಇರುವುದಿಲ್ಲ! ಎಲ್ಲವೂ ಹಾಳೆಯ ಮೇಲಿರುತ್ತದೆ. ಮತ್ತು ಹಾಗೆ ಕೆಲಸಮಯದ ನಂತರ ಅದನ್ನು ಮತ್ತೆ ಮಾರುತ್ತೀರಿ. ಹತ್ತಿಯ ಬೆಲೆ ಹೆಚ್ಚಾಗಿದ್ದರೆ, ನೀವು ಐಶ್ವರ್ಯ ಗಳಿಸುತ್ತೀರಿ, ಅದು ಕಡಿಮೆಯಾಗಿದ್ದರೆ ನೀವು ಐಶ್ವರ್ಯವೊಂದನ್ನು ಕಳೆದುಕೊಳ್ಳುತ್ತೀರಿ. ನಿಮ್ಮ ಬಳಿ ಹಣವಿರುವುದಿಲ್ಲ, ಏನೂ ಇರುವುದಿಲ್ಲ, ಕೇವಲ ಹಾಳೆಯ ಮೇಲಿರುತ್ತದೆ (ನಗು). ಅದು ಇಡಿಯಾಗಿ ಒಂದು ಸಂಪ್ರದಾಯ.

**CWM, 6/250–52** **– ಶ್ರೀಮಾತೆ**

*

ನೀವೇನಾಗಿರುವಿರೋ ಅದನ್ನು ಕೊಟ್ಟುಬಿಡಿರಿ, ಅದಕ್ಕಿಂತ ಹೆಚ್ಚಿನದೇನನ್ನೂ ನಿಮ್ಮಿಂದ ಕೇಳಲಾಗಿಲ್ಲ, ಆದರೆ ಹಾಗೆಯೇ ಅದಕ್ಕಿಂತ ಕಡಿಮೆಯಾದದ್ದನ್ನು ಕೇಳಲಾಗಿಲ್ಲ.

*

ಮನುಷ್ಯ ಭಗವಂತನಿಗೆ ಅರ್ಪಿಸುವುದು ನಿಜವಾದ ಸಂಪತ್ತಾಗಿರುತ್ತದೆ.

*

ದೈವೀ ಕಾರಣಕ್ಕಾಗಿ ನೀವು ಕೊಡುವ ಹಣದ ಮೂಲಕ ಶ್ರೀಮಂತ–ರಾಗುತ್ತೀರಿ.

**CWM, 15/49** **– ಶ್ರೀಮಾತೆ**

*

**ನಮ್ಮಲ್ಲಿ ಹೆಚ್ಚು ಹಣ ಇದ್ದಹಾಗೆ ನಮಗೆ ಹಣದ ಆವಶ್ಯಕತೆ ಇನ್ನೂ ಹೆಚ್ಚಾಗುತ್ತದೆ**

ನನ್ನ ಮಗು, ಮನುಷ್ಯನಲ್ಲಿ ಹಣ ಹೆಚ್ಚಿದ್ದ ಹಾಗೆ ಅವನು ವಿಪತ್ತಿನ ಸ್ಥಿತಿಯಲ್ಲಿರುತ್ತಾನೆ. ಹೌದು ಅದೊಂದು ವಿಪತ್ತು. ಹಣವನ್ನು ಹೊಂದಿರುವುದು ಒಂದು ಅನಾಹುತ. ಅದು ನಿಮ್ಮನ್ನು ಹೆಡ್ಡರನ್ನಾಗಿ ಮಾಡುತ್ತದೆ, ನಿಮ್ಮಲ್ಲಿ ಜಿಪುಣತನ ಬರುವಂತೆ ಮಾಡುತ್ತದೆ, ನಿಮ್ಮನ್ನು ದುಷ್ಟರನ್ನಾಗಿ ಮಾಡುತ್ತದೆ. ಜಗತ್ತಿನಲ್ಲಿರುವ ಭವ್ಯ ವಿಪತ್ತುಗಳಲ್ಲಿ ಅದೂ ಒಂದು. ಮನುಷ್ಯನಲ್ಲಿ ಆಸೆಗಳಿರುವಾಗ ಅವನು ಹಣವನ್ನು ಹೊಂದಿರಬಾರದು, ಮನುಷ್ಯನಲ್ಲಿ ಇನ್ನು ಮುಂದೆ ಆಸೆಗಳು ಇಲ್ಲದಂತಾದಾಗ, ಅವನ ಪ್ರಜ್ಞೆ ಪೃಥ್ವಿಯಷ್ಟು ವಿಶಾಲವಾದಾಗ, ಆಸಕ್ತಿಗಳೇನೂ ಇಲ್ಲವಾದಾಗ, ಅವನು ಎಷ್ಟು ಬೇಕಾದರೂ ಹಣವನ್ನು ಹೊಂದಬಹುದು, ಪೃಥ್ವಿಯ ಮೇಲಿದ್ದಷ್ಟನ್ನು ಹೊಂದಬಹುದು, ಅದು ಪ್ರತಿಯೊಬ್ಬನಿಗೂ ಒಳ್ಳೆಯದನ್ನು ಉಂಟುಮಾಡುತ್ತದೆ. ಮನುಷ್ಯ ಹಾಗಿರದೆ ಇದ್ದಾಗ ಅವನಲ್ಲಿರುವ ಎಲ್ಲ ಹಣ ಅವನ ಮೇಲಿರುವ ಒಂದು ಶಾಪದ ಹಾಗಿರುತ್ತದೆ. ನಾನು ಇದನ್ನು ಯಾರು ಬೇಕಾದವರ ಮುಖದ ಬಳಿ ಹೇಳಬಲ್ಲೆ, ಶ್ರೀಮಂತನಾಗಿರುವುದು ಒಂದು ಪುಣ್ಯವಿಶೇಷ ಎಂದು ತಿಳಿದುಕೊಂಡವನ ಮುಖದ ಎದುರಿನಲ್ಲಿಯೂ ಹೇಳಬಲ್ಲೆ. ಅದೊಂದು ವಿಪತ್ತು, ಬಹುಶಃ ಒಂದು ಅಪಮಾನ, ಎಂದರೆ ಅದು ದೈವೀ ಅಸಂತೋಷದ ಅಭಿವ್ಯಕ್ತಿ. ಒಳ್ಳೆಯರಾಗಿ–ರುವುದು, ಜಾಣರಾಗಿರುವುದು, ಬುದ್ಧಿವಂತರಾಗಿರುವುದು ಹಾಗೂ ಉದಾರ–ರಾಗಿರುವುದು ಬಡವನಾಗಿದ್ದಾಗಿನಕ್ಕಿಂತ ಶ್ರೀಮಂತನಾದಾಗ ಹೆಚ್ಚು ಕಠಿಣವಾದದ್ದು. ನಾನು ಹಲವಾರು ದೇಶಗಳಲ್ಲಿ ಹಲವಾರು ಜನರನ್ನು ಭೇಟಿಮಾಡಿದ್ದೇನೆ ಮತ್ತು ಅಲ್ಲಿ ಅತ್ಯಂತ ಉದಾರರಾದವರು ಅತ್ಯಂತ ಬಡವರಾಗಿದ್ದರು. ಜೇಬುಗಳು

ತುಂಬಿದ ಕೂಡಲೆ ಮನುಷ್ಯ ಒಂದು ಬಗೆಯಲ್ಲಿ ರೋಗ ಪೀಡಿತನಾಗುತ್ತಾನೆ, ಅದು ಜಿಪುಣತನದಿಂದ ಹಣದಲ್ಲಿ ಆಸಕ್ತಿ ಹೊಂದಿರುವುದಾಗಿರುತ್ತದೆ. ಅದೊಂದು ಶಾಪ ಎಂದು ನಾನು ದೃಢೀಕರಿಸುತ್ತೇನೆ. ಹಾಗಾಗಿ ಮನುಷ್ಯ ತನ್ನಲ್ಲಿ ಹಣ ಇದ್ದಾಗ ಅದನ್ನು ಕೊಟ್ಟುಬಿಡುವುದು ಮೊದಲು ಕೈಕೊಳ್ಳಬೇಕಾದ ಕಾರ್ಯ. ಆದರೆ ಅಲ್ಲಿ ಹೇಳಿದ ಹಾಗೆ ಅದನ್ನು ವಿವೇಚನೆ ಇಲ್ಲದೆ ಕೊಟ್ಟುಬಿಡಬಾರದು, ಲೋಕೋಪಕಾರ ಆಚರಿಸುವವರ ಹಾಗೆ ಹೋಗಿ ಅದನ್ನು ಕೊಟ್ಟುಬಿಡಬಾರದು. ಏಕೆಂದರೆ ಅದು ಅವರದೇ ಒಳ್ಳೆಯತನದ, ಔದಾರ್ಯದ ಹಾಗೂ ತಮ್ಮದೇ ಭಾವನೆಯಿಂದ ಅವರನ್ನು ತುಂಬಿಬಿಡುವುದು. ನೀವು ಸಾತ್ವಿಕ ರೀತಿಯಲ್ಲಿ ಕಾರ್ಯಕೈಕೊಳ್ಳಬೇಕು ಮತ್ತು ಅದರ ಮಹತ್ವದ ಸಾಧ್ಯವಾಗಬಹುದಾದ ಅತ್ಯಂತ ಒಳ್ಳೆಯ ಉಪಯೋಗ ಪಡೆಯಬೇಕು. ಹಾಗಾಗಿ ಪ್ರತಿಯೊಬ್ಬನೂ ತನ್ನ ಅತ್ಯುಚ್ಚ ಪ್ರಜ್ಞೆಯಲ್ಲಿ ತನ್ನಲ್ಲಿರುವ ಹಣದ ಸಾಧ್ಯವಾಗಬಹುದಾದ ಯಾವುದು ಅತ್ಯಂತ ಒಳ್ಳೆಯ ಉಪಯೋಗ ಎಂಬುದನ್ನು ಕಂಡುಕೊಳ್ಳಬೇಕು ಮತ್ತು ನಿಜವಾಗಿ ಹಣ ಚಲಾವಣೆಯಲ್ಲಿ ಇಲ್ಲದಿದ್ದರೆ ಅದಕ್ಕೆ ಯಾವ ಮೌಲ್ಯವೂ ಇರುವುದಿಲ್ಲ. ಪ್ರತಿಯೊಬ್ಬನಿಗೂ ಹಾಗೂ ಎಲ್ಲರಿಗೂ ಹಣ ಮೌಲ್ಯವುಳ್ಳದ್ದಾಗುವುದು ಅದನ್ನು ಖರ್ಚು ಮಾಡಿದ ಮಾತ್ರ.

*

**ಸಂಪತ್ತಿನ ಶಕ್ತಿ**

ಸಂಪತ್ತು ಒಂದು ಶಕ್ತಿ. ನಾನು ಈಗಾಗಲೆ ಒಮ್ಮೆ ಇದನ್ನು ಹೇಳಿದ್ದೇನೆ. ಅದು ಪ್ರಕೃತಿಯ ಶಕ್ತಿ ಮತ್ತು ಅದು ಚಲಾವಣೆಯ ಒಂದು ಸಾಧನವಾಗಬೇಕು, ಚಲಾವಣೆಯಲ್ಲಿರುವ ಸಾಮರ್ಥ್ಯ, ಹರಿಯುತ್ತಿರುವ ನೀರಿನ ಚಲನೆಯಲ್ಲಿರುವ ಒಂದು ಸಾಮರ್ಥ್ಯವಿದ್ದ ಹಾಗೆ.

ಅದು ಉತ್ಪಾದನೆಗೆ ಹಾಗೂ ಸಂಘಟನೆಗೆ ಸೇವೆ ಸಲ್ಲಿಸುವ ಏನೋ ಒಂದು. ಅದು ಅನುಕೂಲಕರವಾದ ಸಾಧನ, ಏಕೆಂದರೆ ವಾಸ್ತವದಲ್ಲಿ ಅದು ವಸ್ತು–ವಿಷಯಗಳು ಚಲಾವಣೆಯಲ್ಲಿ ಇಡಿಯಾಗಿ ಹಾಗೂ ಮುಕ್ತವಾಗಿ ಬರುವಂತೆ ಮಾಡುವ ಏಕೈಕ ಸಾಧನ.

ಈ ಶಕ್ತಿ ಅದರ ಉಪಯೋಗವನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ಹೇಗೆ ಮಾಡಿಕೊಳ್ಳಬೇಕೆಂದು ತಿಳಿದವರ ಕೈಯಲ್ಲಿರಬೇಕು, ಎಂದರೆ ನಾನು ಪ್ರಾರಂಭದಲ್ಲಿ ಹೇಳಿದ ಹಾಗೆ ಜನರು ತಮ್ಮಲ್ಲಿಯೇ ಇರುವ ಪ್ರತಿಯೊಂದು ಆಸೆಯನ್ನು ಹಾಗೂ

ಆಸಕ್ತಿಯನ್ನು ತೊಡೆದು ಹಾಕಿದಾಗ ಒಳ್ಳೆಯ ರೀತಿಯಲ್ಲಿ ಉಪಯೋಗ ಮಾಡಬಲ್ಲರು ಇದಕ್ಕೆ ಅಧಿಕವಾಗಿ ಪೃಥ್ವಿಯ ಆವಶ್ಯಕತೆಗಳನ್ನು ತಿಳಿದುಕೊಳ್ಳುವುದಕ್ಕೆ ಸಾಕಷ್ಟು ವಿಶಾಲ ದೃಷ್ಟಿಯನ್ನು ಹಾಗೂ ಈ ಎಲ್ಲ ಆವಶ್ಯಕತೆಗಳನ್ನು ಹೇಗೆ ಸಂಘಟಿಸಬೇಕು ಮತ್ತು ಈ ಸಾಧನಗಳ ಮೂಲಕ ಈ ಶಕ್ತಿಯನ್ನು ಹೇಗೆ ಉಪಯೋಗಿಸಬೇಕು ಎಂಬುದಕ್ಕೆ ಸಾಕಷ್ಟು ಜ್ಞಾನವನ್ನು ಅಧಿಕವಾಗಿ ಸೇರಿಸಬೇಕು.

ಅಲ್ಲದೆ ಈ ಸತ್ತೆಗಳಿಗೆ ಉಚ್ಚತರ ಆಧ್ಯಾತ್ಮಿಕ ಜ್ಞಾನವಿದ್ದರೆ ಆಗ ಅವರು ಪೃಥ್ವಿಯ ಮೇಲೆ ದೈವೀಸಾಮರ್ಥ್ಯ, ದೈವೀ ಶಕ್ತಿ ಹಾಗೂ ದೈವೀ ಕೃಪೆ ಇವುಗಳನ್ನು ಪ್ರಕಟಿಸುವ ಕ್ಷಮತೆಯುಳ್ಳದ್ದನ್ನು ರಚಿಸಬಲ್ಲರು. ನಾನು ಇದೀಗ ಶಾಪದಂತಿದೆ ಎಂದು ಹೇಳಿದ ಹಣದ ಸಾಮರ್ಥ್ಯ, ಹಣಕಾಸಿನ ಶಕ್ತಿ ಆಗ ಎಲ್ಲರ ಒಳಿತಿಗಾಗಿ ಪರಮೋಚ್ಚ ಆಶೀರ್ವಾದವಾಗುವುದು. ಅತ್ಯಂತ ಒಳ್ಳೆಯ ವಿಷಯಗಳು ಅತ್ಯಂತ ಕೆಟ್ಟವಾಗಿವೆ ಎಂದು ನಾನು ಯೋಚಿಸುತ್ತೇನೆ. ಬಹುಶಃ ಅತ್ಯಂತ ಕೆಟ್ಟವಾದವುಗಳು ಅತ್ಯಂತ ಒಳ್ಳೆಯವಾಗಲು ಸಾಧ್ಯವಿದೆ. ಕೆಲವು ಜನರು ಹೇಳುವುದರ ಪ್ರಕಾರ ಅತ್ಯಂತ ಕೆಟ್ಟ ಜನರೇ ಅತ್ಯಂತ ಒಳ್ಳೆಯವರಾಗುತ್ತಾರೆ. ಅತ್ಯಂತ ಒಳ್ಳೆಯವರು ಅತ್ಯಂತ ಕೆಟ್ಟವರಾಗದಿರಲಿ ಎಂಬುದು ನನ್ನ ಆಶಯ, ಏಕೆಂದರೆ ಅದು ಬಹಳ ವಿಷಾದದ ಸಂಗತಿಯಾಗುವುದು.

ಆದಾಗ್ಯೂ, ಅತ್ಯಂತ ಶ್ರೇಷ್ಠ ಸಾಮರ್ಥ್ಯವನ್ನು ಕೆಟ್ಟದಾಗಿ ಉಪಯೋಗಿಸಿದಾಗ ಅದು ದೊಡ್ಡ ವಿಪತ್ತಾಗುವುದು, ಅದು ಹಾಗಿರುವಾಗ ಅದೇ ಶ್ರೇಷ್ಠ ಸಾಮರ್ಥ್ಯವನ್ನು ಸರಿಯಾಗಿ ಉಪಯೋಗಿಸಿದಾಗ ಅದು ಅನುಗ್ರಹವಾಗಬಹುದು. ವಸ್ತುಗಳನ್ನು ಉಪಯೋಗಿಸುವುದರ ಮೇಲೆ ಎಲ್ಲವೂ ಅವಲಂಬಿಸಿದೆ. ಜಗತ್ತಿನಲ್ಲಿ ಪ್ರತಿಯೊಂದು ವಸ್ತುವಿಗೂ ಅದರ ಸ್ಥಾನವಿದೆ, ಅದರ ಕಾರ್ಯವಿದೆ, ನಿಜವಾದ ಉಪಯೋಗವಿದೆ, ಅದನ್ನು ಬೇರೆ ಯಾವುದಕ್ಕೋ ಉಪಯೋಗಿಸಿದರೆ ಅದು ಅವ್ಯವಸ್ಥೆಯನ್ನು, ಗೊಂದಲವನ್ನು ಅಸ್ತವ್ಯಸ್ತತೆಯನ್ನು ಸೃಷ್ಟಿಸುತ್ತದೆ. ಅದು ಹಾಗಿರುವುದು ಏಕೆಂದರೆ ಅದಿದ್ದ ಹಾಗೆ ಅತಿ ಕಡಿಮೆ ವಸ್ತುಗಳನ್ನು ಅವುಗಳ ನಿಜವಾದ ಕಾರ್ಯಕ್ಕಾಗಿ ಉಪಯೋಗಿಸಲಾಗುತ್ತದೆ, ಅತಿ ಕಡಿಮೆ ವಸ್ತುಗಳು ನಿಜವಾಗಿ ಅವುಗಳಿರಬೇಕಾದ ಸ್ಥಾನದಲ್ಲಿವೆ ಮತ್ತು ಏಕೆಂದರೆ ಜಗತ್ತು ಭೀಕರ ಅಸ್ತವ್ಯಸ್ತತೆಯಲ್ಲಿದೆ, ಅದರಿಂದಾಗಿ ಈ ಎಲ್ಲ ದುಃಸ್ಥಿತಿ ಹಾಗೂ ವೇದನೆ ಇದೆ. ಪ್ರತಿಯೊಂದು ವಸ್ತು ಅದರ ಸ್ಥಾನದಲ್ಲಿದ್ದರೆ, ಸಾಮರಸ್ಯದ ಸಮತೋಲನದಲ್ಲಿದ್ದರೆ,

ಅದಿರುವ ದುಃಸ್ಥಿತಿಯ ಹಾಗೂ ವೇದನೆಯ ಸ್ಥಿತಿಯ ಆವಶ್ಯಕತೆ ಇಲ್ಲದೆ ಪ್ರಗತಿ ಸಾಧಿಸಬಹುದಾಗಿತ್ತು.

**CWM, 7/55–56** **– ಶ್ರೀಮಾತೆ**

*

**ಸದ್ಯ ಹಣ ಅಸುರನ ಹಿಡಿತದಲ್ಲಿದೆ**

"ಸದ್ಯ ಹಣದ ಸಾಮರ್ಥ್ಯ ಪ್ರಾಣಿಕ ಲೋಕದ ಸತ್ತೆಗಳ ಹಾಗೂ ಶಕ್ತಿಗಳ ಪ್ರಭಾವದಡಿಯಲ್ಲಿ ಇಲ್ಲವೆ ಕೈಗಳಲ್ಲಿದೆ, ಈ ಪ್ರಭಾವದ ಕಾರಣದಿಂದಾಗಿ ಹಣ ಹೆಚ್ಚಿನ ಪ್ರಮಾಣದಲ್ಲಿ ದೈವೀ ಸತ್ಯದ ಉದ್ದೇಶಕ್ಕಾಗಿ ಹೋಗುವುದನ್ನು ನೀವು ನೋಡುವುದಿಲ್ಲ. ಯಾವಾಗಲೂ ಅದು ಅಡ್ಡದಾರಿ ಹಿಡಿದು ಹೋಗುತ್ತದೆ, ಏಕೆಂದರೆ ಅದು ವಿರೋಧೀ ಶಕ್ತಿಗಳ ಹಿಡಿತದಲ್ಲಿದೆ, ಹಾಗೂ ಅವರ ಪ್ರಧಾನ ಸಾಧನವಾಗಿದೆ, ಅದರ ಮೂಲಕ ಅವರು ಪೃಥ್ವಿಯ ಮೇಲೆ ತಮ್ಮ ಹಿಡಿತವನ್ನು ಇಟ್ಟುಕೊಂಡಿರುತ್ತಾರೆ. ಹಣದ ಸಾಮರ್ಥ್ಯದ ಮೇಲಿನ ಹಿಡಿತವನ್ನು ಈ ವಿರೋಧೀ ಶಕ್ತಿಗಳಿಂದ ಸಾಮರ್ಥ್ಯಪೂರ್ಣವಾಗಿ, ಸಂಪೂರ್ಣವಾಗಿ ಮತ್ತು ಆದ್ಯಂತವಾಗಿ ಸಂಘಟಿಸಲಾಗಿದೆ ಮತ್ತು ಈ ಬಿಗಿಯಾದ ಸಂಘಟನೆಯಿಂದ ಏನನ್ನೂ ಹಿಡಿದು ಹೊರಗೆ ತರುವುದು ಅತ್ಯಂತ ಕಠಿಣವಾದದ್ದು. ಈ ಹಣದಿಂದ ಸ್ವಲ್ಪ ಮಾತ್ರದಷ್ಟನ್ನು ಸದ್ಯದ ರಕ್ಷಕರಿಂದ ಎಳೆದುಕೊಳ್ಳಲು ಪ್ರಯತ್ನ ಕೈಕೊಂಡ ಪ್ರತಿಸಲ ನೀವು ಭೀಕರ ಸಮರವನ್ನು ಕೈಕೊಳ್ಳಬೇಕಾಗುವುದು."

**ಪ್ರಶ್ನೋತ್ತರಗಳು 12, ಮೇ 1929** **– ಶ್ರೀಮಾತೆ**

*

**ಪ್ರಶ್ನೆ :** *ಯಕ್ಷಿಣಿಯರ ಕತೆ (fairy tale) ಗಳಲ್ಲಿ ಬಹಳಷ್ಟು ಸಲ ಸಂಪತ್ತಿನ ಪೆಟ್ಟಿಗೆಯೊಂದನ್ನು ಸರ್ಪಗಳು ಕಾಯುತ್ತಿರುತ್ತವೆ ಎಂದು ಹೇಳಲಾಗಿದೆ. ಅದು ಸತ್ಯವಾದದ್ದೆ?*

**ಶ್ರೀಮಾತೆ :** ಹೌದು. ಆದರೆ ಅದು ಭೌತಿಕ ಸರ್ಪವಲ್ಲ, ಪ್ರಾಣಿಕ ಸರ್ಪವಾಗಿದೆ. ಪ್ರಾಣಿಕ ಲೋಕದಲ್ಲಿ ಸಂಪತ್ತುಗಳಿಗಾಗಿ ಬೀಗದ ಕೈ ಇದೆ, ಅದನ್ನು ಭವ್ಯ ಕಪ್ಪು ಸರ್ಪ ಕಾಪಾಡಿಕೊಂಡು ಬರುತ್ತದೆ – ಅದು ಭಯ ವಿಸ್ಮಿತಗೊಳಿಸುವ ಸರ್ಪ, ಸಾಧಾರಣ ಸರ್ಪಕ್ಕಿಂತ ಹತ್ತು ಪಟ್ಟು, ಐವತ್ತು ಪಟ್ಟು ದೊಡ್ಡದಾದದ್ದು, ಅದು ಸಂಪತ್ತಿನ ದ್ವಾರಗಳನ್ನು ಕಾಪಾಡಿಕೊಂಡು ಬರುತ್ತದೆ. ಅದು ಭವ್ಯವಾದದ್ದು, ಕಪ್ಪು

ಬಣ್ಣದ್ದು, ಯಾವಾಗಲೂ ನಿಮಿರಿಕೊಂಡಿರುವಂತಹದು, ಎಚ್ಚತ್ತುಗೊಂಡಿರುವುದು ಆಗಿರುತ್ತದೆ. ನಾನು ಒಮ್ಮೆ ಅದರ ಎದುರಿಗೆ ನಿಂತುಕೊಳ್ಳುವ ಸಂದರ್ಭ ಒದಗಿ ಬಂದಿತ್ತು. (ಸಾಮಾನ್ಯವಾಗಿ ಈ ಸತ್ತೆಗಳಿಗೆ ನಾನು ಆಜ್ಞೆ ಮಾಡಿದಾಗ ಅವು ನನಗೆ ವಿಧೇಯವಾಗಿರುತ್ತವೆ.) "ನನ್ನನ್ನು ಆ ಬದಿಗೆ ಹೋಗಲು ಬಿಡು" ಎಂದು ಅದಕ್ಕೆ ಹೇಳಿದೆ. "ನಾನು ಸಂತೋಷದಿಂದ ನಿಮ್ಮನ್ನು ಆಚೆಗೆ ಹೋಗಲು ಬಿಡಬಲ್ಲೆ, ಆದರೆ ಅವರು ನನ್ನನ್ನು ಕೊಂದು ಬಿಡುವರು, ಹಾಗಾಗಿ ನಿಮ್ಮನ್ನು ಆಚೆಗೆ ಬಿಡಲಾರೆ" ಎಂದು ಉತ್ತರ ನೀಡಿತು. ಪ್ರವೇಶ ಪಡೆಯುವುದಕ್ಕೆ ನಾನು ನಿನಗೆ ಏನನ್ನು ತಂದುಕೊಡಬೇಕು" ಎಂದು ನಾನು ಕೇಳಿದೆ. "ಓ ಕೇವಲ ಒಂದು ವಿಷಯ ನಿಮಗೆ ಪ್ರವೇಶ ನೀಡಲು ನನಗೆ ಸಹಾಯ ಮಾಡುವುದು: ನೀವು ಮನುಷ್ಯನಲ್ಲಿರುವ ಲೈಂಗಿಕ ಪ್ರಚೋದನೆಯ ಮೇಲೆ ಪ್ರಭುತ್ವ ಪಡೆಯಬಲ್ಲಿರಾದರೆ, ಮತ್ತು ಅದನ್ನು ಮನುಕುಲದಲ್ಲಿ ಜಯಿಸಬಲ್ಲಿರಾದರೆ ನಾನು ನಿಮ್ಮ ಪ್ರವೇಶವನ್ನು ತಡೆಯುವುದಿಲ್ಲ, ನೀವು ಆಚೆಗೆ ದಾಟಿ ಹೋಗಲು ಅನುಮತಿ ನೀಡುವೆ" ಎಂದು ಅದು ಹೇಳಿತು. ಅದು ನನಗಿನ್ನೂ ದಾಟಿ ಹೋಗಲು ಅನುಮತಿ ನೀಡಿಲ್ಲ. ನಾನು ಅದರ ಷರತ್ತನ್ನು ಪಾಲಿಸಲಾಗಿಲ್ಲ. ಎಲ್ಲ ಮನುಷ್ಯರಲ್ಲಿ ಅದನ್ನು ಜಯಿಸಲು ನನಗೆ ಸಾಧ್ಯವಾಗಿಲ್ಲ.

ಅದು ಬಹಳ ಕಠಿಣವಾದದ್ದು.

**CWM, 4/188–89** **– ಶ್ರೀಮಾತೆ**

*

**ಹಣದ ಮೇಲಿನ ಆಸಕ್ತಿ ಹಾಗೂ ಮೃತ್ಯು**

ಜಿಪುಣ ತನ್ನ ಸಂಪತ್ತಿನ ಬಗ್ಗೆ ಹೊಂದಿರುವ ಆಸಕ್ತಿ ಕುರಿತಾದ ಉದಾಹರಣೆಯನ್ನು ಕೈಗೆತ್ತಿಕೊಳ್ಳೋಣ.

ಅವನು ಸಾವನ್ನಪ್ಪುತ್ತಾನೆ, ಅವನ ಪ್ರಾಣಿಕ ಸತ್ತೆ ಕರಗಿ ಹೋಗುತ್ತದೆ, ಅದರೆ ಹಣಕ್ಕಾಗಿರುವ ಅವನ ಭಾವೋದ್ರೇಕ ಜೀವಂತವಿರುತ್ತದೆ. ಅದು ತನ್ನ ಸುತ್ತಲೂ ಹಲವಾರು ಅಂಶಗಳನ್ನು ಒಟ್ಟುಗೂಡಿಸುತ್ತದೆ, ಅದು ಜೀವಂತವಾಗಿರುತ್ತದೆ ಹಾಗೂ ಪ್ರಾಣಿಕ ಲೋಕದಲ್ಲಿ ಪ್ರಜ್ಞೆಯುಳ್ಳ ಅಸ್ತಿತ್ವವಾಗಿರುತ್ತದೆ. ಈ ಮನುಷ್ಯ ತನ್ನ ಜೀವಿತ ಕಾಲದಲ್ಲಿ ಸಂಪತ್ತನ್ನು ಎಲ್ಲಿಯೋ ಒಂದೆಡೆ ಅಡಗಿಸಿಟ್ಟಿದ್ದರೆ, ಅಲ್ಲಿಗೆ ಆ ಅಸ್ತಿತ್ವ ಹೋಗುತ್ತದೆ ಹಾಗೂ ಆ ಸಂಪತ್ತಿರುವ ಸ್ಥಳದ ಮೇಲೆ ಸ್ಥಾಪಿತಗೊಳ್ಳುತ್ತದೆ, ಅದು ಆ ಸಂಪತ್ತನ್ನು ಕಾಯುವುದಕ್ಕಿರುತ್ತದೆ ಮತ್ತು ಜನರು ಅದರ ಹತ್ತಿರ

ಬರದಂತೆ ನಿಲ್ಲಿಸುವುದಕ್ಕಾಗಿರುತ್ತದೆ. ಆದರೆ ಸೂಕ್ಷ್ಮ ಸಂವೇದನೆಯುಳ್ಳ ಜನರಿರುತ್ತಾರೆ, ಅವರಿಗೆ ಸಂಪತ್ತನ್ನು ಎಲ್ಲಿಯೋ ಅಡಗಿಸಿಡಲಾಗಿದೆ ಎಂಬ ಭಾವನೆ ಬರುತ್ತದೆ ಮತ್ತು ಅವರು "ಆ ಸಂಪತ್ತು ಇಲ್ಲಿದೆ" ಎಂದು ಹೇಳುತ್ತಾರೆ. ಅದು ಮೊದಲ ಪರಿಣಾಮ. ಇನ್ನೊಂದು ಪರಿಣಾಮವೆಂದರೆ ಆ ಸಂಪತ್ತನ್ನು ಸ್ಪರ್ಶಿಸ–ಬಾರದೆಂದು ಆ ಅಸ್ತಿತ್ವ ಯಾವಾಗಲೂ ಏನಾದರೊಂದು ಅನಾಹುತ ಉಂಟಾಗುವಂತೆ ಮಾಡುತ್ತದೆ, ಆ ರೀತಿಯಲ್ಲಿ ಸಂಪತ್ತನ್ನು ಕಾಯುತ್ತದೆ. ಅದನ್ನು ಸಮೀಪಿಸುವವರು ರೋಗಗ್ರಸ್ತರಾಗುವಂತೆ ಮಾಡುತ್ತದೆ ಇಲ್ಲವೆ ಅವರಿಗೆ ಅಪಘಾತ ಉಂಟಾಗುವಂತೆ ಮಾಡುತ್ತದೆ, ಕೊಲೆಯನ್ನೂ ಕೂಡ ಮಾಡಬಹುದು; ಅದಕ್ಕೆ ಒಳ್ಳೆಯದೆನಿಸುವ ಯಾವ ಸಾಧನವನ್ನಾದರೂ ಉಪಯೋಗಿಸಬಹುದು, ಇಲ್ಲವೆ ಅದರ ಹತ್ತಿರ ಹೋಗುವ ಮನುಷ್ಯ ಬಹಳ ಸಂವೇದನಾಶೀಲನಾಗಿದ್ದರೆ, ಅವನಿಗೆ ಎಂತಹ ಭಯವನ್ನುಂಟು ಮಾಡುತ್ತದೆಂದರೆ ಅವನು ಹುಚ್ಚನಾಗಿ–ಬಿಡುತ್ತಾನೆ. ಹಾಗೆಯೇ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚಿಕ್ಕ ಅಸ್ತಿತ್ವಗಳಿರುತ್ತವೆ, ಅವು ಬಹಳ ತಿರಸ್ಕರಣೀಯವಾಗಿರುತ್ತವೆ, ಅವು ದರಿದ್ರ ಲೈಂಗಿಕ ಆಸೆಯಿಂದ ಉದ್ಭವವಾಗಿರುತ್ತವೆ. ಈ ಆಸೆಯನ್ನು ಮೃತ್ಯುವಿನ ಸಮಯದಲ್ಲಿ (ಅದಕ್ಕನು–ಗುಣವಾದ ಅಸ್ತಿತ್ವಗಳೊಡನೆ) ಕರಗಿಸಲಾಗದಿದ್ದರೆ ಈ ಅಸ್ತಿತ್ವಗಳು ಅಸ್ತಿತ್ವದಲ್ಲಿ–ರುವುದನ್ನು ಮುಂದುವರಿಸುತ್ತವೆ ಮತ್ತು ಅವು ಒಂದು ಸಂವೇದನಾಶೀಲ ವ್ಯಕ್ತಿಗಳ ವಾತಾವರಣದಲ್ಲಿ ನೆಲೆಸುತ್ತವೆ, ಅವರನ್ನು ಉದ್ರೇಕಗೊಳಿಸುತ್ತವೆ ಮತ್ತು ಚುಚ್ಚುತ್ತವೆ. ಲೈಂಗಿಕ ಕ್ರಿಯೆಯ ಸಮಯದಲ್ಲಿ ಹೊರಚೆಲ್ಲಿದ ಪ್ರಾಣಿಕ ಶಕ್ತಿ ಇವುಗಳಿಗೆ ಆಹಾರವಾಗಿರುತ್ತದೆ ಮತ್ತು ಸ್ವಾಭಾವಿಕವಾಗಿ ಅವುಗಳ ಆಸೆ ಅದರಿಂದ ಸಾಕಷ್ಟು ಪೋಷಣೆ ದೊರಕಿಸುವುದಾಗಿರುತ್ತದೆ.

**CWM, 4/190–91** **– ಶ್ರೀಮಾತೆ**

*

**ಹಣದ ಗುಲಾಮರಾಗುವುದು**

**ಪ್ರಶ್ನೆ :** *ಸಂಪತ್ತನ್ನು ಹೊಂದಿರುವುದು ಸೃಷ್ಟಿಸುವ ರೂಢಿಗಳಿಗೆ ದುರ್ಬಲ ಗುಲಾಮಗಿರಿ ಹೊಂದಿರುವುದನ್ನು ಕುರಿತು ಶ್ರೀ ಅರವಿಂದರು ಹೇಳುತ್ತಾರೆ.*

**ಶ್ರೀಮಾತೆ :** ನೀವು ಶ್ರೀಮಂತರಾಗಿದ್ದಾಗ, ಖರ್ಚು ಮಾಡಲು ನಿಮ್ಮ ಬಳಿ ಸಾಕಷ್ಟು ಹಣವಿದ್ದಾಗ, ಸಾಧಾರಣವಾಗಿ, ನಿಮಗೆ ಹರ್ಷದಾಯಕವೆನಿಸುವ ವಸ್ತುಗಳನ್ನು

ಕೊಳ್ಳಲು ಖರ್ಚು ಮಾಡುತ್ತೀರಿ ಮತ್ತು ಈ ವಿಷಯಗಳ ರೂಢಿ ನಿಮಗಾಗಿರುತ್ತದೆ ಮತ್ತು ಒಂದು ದಿನ ನಿಮ್ಮಲ್ಲಿ ಹಣವಿಲ್ಲದಂತಾದಾಗ, ಅದರ ಕೊರತೆ ಇರುವ ಭಾವನೆ ತಂದುಕೊಳ್ಳುತ್ತೀರಿ, ನೀವು ಅಸಂತುಷ್ಟರಾಗಿರುತ್ತೀರಿ, ದುಃಸ್ಥಿತಿಯಲ್ಲಿ–ರುತ್ತೀರಿ ಮತ್ತು ಎಲ್ಲವನ್ನು ಕಳಕೊಂಡ ಭಾವನೆ ನಿಮಗೆ ಬರುತ್ತದೆ, ಏಕೆಂದರೆ ನೀವು ಇಟ್ಟುಕೊಂಡಿರುತ್ತಿದ್ದ ರೂಢಿ ಈಗ ಇಲ್ಲ. ಅದು ಗುಲಾಮಗಿರಿ, ದುರ್ಬಲ ಆಸಕ್ತಿ. ನಿರ್ಲಿಪ್ತನಾದ ಮನುಷ್ಯ ಸಂಪತ್ತಿನ ಅನುಕೂಲತೆ ಇದ್ದಾಗ ಸರಿಯಾಗಿ–ರುತ್ತಾನೆ, ಸಂಪತ್ತು ಹೊರಟು ಹೋದಾಗಲೂ ಕೂಡ ಸರಿಯಾಗಿಯೇ ಇರುತ್ತಾನೆ, ಅವನು ಇಡಿಯಾಗಿ ಎರಡೂ ಬಗೆಯ ಸ್ಥಿತಿಗಳಲ್ಲಿ ಉದಾಸೀನನಾಗಿರುತ್ತಾನೆ. ಇದೇ ಸರಿಯಾದ ಮನೋಭಾವ. ಅದು ಇದ್ದಾಗ ಅದನ್ನು ಉಪಯೋಗಿಸುತ್ತಾನೆ, ಅದಿಲ್ಲದೆ ಇದ್ದಾಗ ಅವನು ಅದಿಲ್ಲದೆ ಇರುತ್ತಾನೆ. ಅವನ ಆಂತರಿಕ ಪ್ರಜ್ಞೆಗೆ ಯಾವ ವ್ಯತ್ಯಾಸವನ್ನುಂಟು ಮಾಡುವುದಿಲ್ಲ. ಅದು ನಿಮಗೆ ಆಶ್ಚರ್ಯವನ್ನುಂಟು ಮಾಡುತ್ತದೆ, ಆದರೆ ಅದಿರುವುದು ಹಾಗೆ.

*

**ಹಣದ ಸಾಮರ್ಥ್ಯ**

**ಪ್ರಶ್ನೆ :** *ಮನುಷ್ಯನೊಬ್ಬನಲ್ಲಿ ಬಹಳಷ್ಟು ಹಣ ಗಳಿಸುವ ಸಾಮರ್ಥ್ಯವಿದ್ದರೆ, ಅದರರ್ಥ ಪಾರ್ಥಿವ ಶಕ್ತಿಗಳ ಮೇಲೆ ಅವನಿಗೆ ಕೆಲಮಟ್ಟಿಗೆ ನಿಯಂತ್ರಣ ಇದೆ ಎಂದಾಗುವುದೆ?*

**ಶ್ರೀಮಾತೆ :** ಆ ಮನುಷ್ಯ ಹಣ ಹೇಗೆ ಸಂಪಾದನೆ ಮಾಡುತ್ತಾನೆ ಎಂಬುದರ ಮೇಲೆ ಅವಲಂಬಿಸಿರುತ್ತದೆ. ನೀವು ಅದನ್ನು ದುರ್ಮಾರ್ಗದಿಂದ ಗಳಿಸಿದಾಗ ಅದರರ್ಥ ನಿಮಗೆ ಅದರ ಮೇಲೆ ನಿಯಂತ್ರಣವಿದೆ ಎಂದಾಗುವುದಿಲ್ಲ. ಆದರೆ ಒಬ್ಬ ಆತ್ಮಸಾಕ್ಷಿಯಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾಗ ಅವನು ಹಣ ತನ್ನೆಡೆಗೆ ಬರುತ್ತಿದೆ ಎಂದು ನೋಡಿದಾಗ ಅದು ಸ್ಪಷ್ಟವಾಗಿ ಏಕೆಂದರೆ ಅವನು ಆ ಶಕ್ತಿಗಳ ಮೇಲೆ ನಿಯಂತ್ರಣ ಚಲಾಯಿಸುತ್ತಿರುತ್ತಾನೆ. ಹಣವನ್ನು ತಮ್ಮೆಡೆಗೆ ಆಕರ್ಷಿಸುವ ಜನರಿರುತ್ತಾರೆ ಮತ್ತು ಅವರು ಮೋಸಗೊಳಿಸುವ ಆವಶ್ಯಕತೆ ಕನಿಷ್ಠ ಪ್ರಮಾಣದಲ್ಲೂ ಇರುವುದಿಲ್ಲ. ಇತರರಿದ್ದಾರೆ, ಅವರು ಅತಿ ಕಡಿಮೆ ಚಿಲ್ಲರೆ ಹಣ ದೊರಕಿಸುವುದಕ್ಕಾಗಿಯೂ ಕೂಡ ಹೆಚ್ಚು ಕಡಿಮೆ ನಿರ್ಮಲವಾಗಿರುವ ಎಲ್ಲ ಉಪಾಯಗಳನ್ನು ಮಾಡಬೇಕಾಗುತ್ತದೆ. ಹಾಗಾಗಿ ಮನುಷ್ಯ ಇದರ ಬಗ್ಗೆ

ಹೇಳಲಾರ. . . . ನಾವು ಶ್ರೀಮಂತ ಮನುಷ್ಯನೊಬ್ಬನನ್ನು ನೋಡುತ್ತೇವೆ ಮತ್ತು ಅವನು ಹಣದ ಶಕ್ತಿಗಳನ್ನು ಹಿಡಿತದಲ್ಲಿ ಇಟ್ಟುಕೊಂಡಿದ್ದಾನೆ ಎಂದು ಯೋಚಿಸುತ್ತೇವೆ. ಇಲ್ಲ, ಅವಶ್ಯವಾಗಿ ಇಲ್ಲ. ಮನುಷ್ಯನೊಬ್ಬ ಪರಿಪೂರ್ಣವಾಗಿ ಪ್ರಾಮಾಣಿಕನಾಗಿದ್ದಾಗ ತನ್ನ ಕರ್ತವ್ಯ ಏನೆಂಬುದನ್ನು ತಿಳಿದು ಅದನ್ನು ನಿರ್ವಹಿಸುತ್ತಿದ್ದಾಗ, ಹಣ ದೊರಕಿಸುವುದರ ಬಗ್ಗೆ ಚಿಂತೆ ಮಾಡದೆ ಇದ್ದಾಗ ಕೂಡ ಅವನ ಬಳಿ ಹಣ ಬಂದರೆ ಅದರರ್ಥ ಆ ಶಕ್ತಿಗಳೊಂದಿಗೆ ಅವನು ಒಂದು ಬಗೆಯ ಒಲವು ಹೊಂದಿರುತ್ತಾನೆ.

*

## ಗುಡ್ಡೆ ಹಾಗೂ ರಂಧ್ರ

**ಪ್ರಶ್ನೆ:** *“ಮನುಷ್ಯ ಗುಡ್ಡೆಯನ್ನು ಒಂದು ರಂಧ್ರವನ್ನು ಉಂಟುಮಾಡದೆ ಮಾಡಲಾರ” ಎಂದು ಹೇಳಲಾಗಿದೆ. ಅವನು ಬೇರೆ ಯಾರೊಬ್ಬರನ್ನು ಬಡವನನ್ನಾಗಿ ಮಾಡದೆ ಶ್ರೀಮಂತನಾಗಲಾರ. ಇದು ಸತ್ಯವೆ.*

**ಶ್ರೀಮಾತೆ :** ಅದು ಸರಿಯಲ್ಲ. ಮನುಷ್ಯನೊಬ್ಬ ಏನನ್ನೋ ಉತ್ಪಾದನೆ ಮಾಡಿದಾಗ, ಬಡತನವನ್ನುಂಟು ಮಾಡುವುದರ ಬದಲಾಗಿ ಶ್ರೀಮಂತಗೊಳಿಸುವುದಾಗಿರುತ್ತದೆ, ಸರಳವಾಗಿ ಅವನು ಜಗತ್ತಿನಲ್ಲಿ ಬೇರೆ ಏನೋ ಒಂದನ್ನು ಚಲಾವಣೆಯಲ್ಲಿ ತರುತ್ತಾನೆ, ಅದು ಆ ಹಣಕ್ಕೆ ಸಮಾನವಾಗಿರುತ್ತದೆ. ಊಹೆ ಮಾಡಿ ವ್ಯವಹಾರ ಇಲ್ಲವೆ ಷೇರು ಮಾರಾಟದ ವ್ಯವಹಾರ ಮಾಡುವ, ಹಣಕಾಸು ಆಡಳಿತದಲ್ಲಿ ತೊಡಗಿಕೊಂಡ ಇಂತಹರಿಗೆ ರಂಧ್ರ ಉಂಟುಮಾಡದೆ ಗುಡ್ಡೆ ಹಾಕಲಾಗುವುದಿಲ್ಲ ಎಂಬುದು ಸತ್ಯವಾಗಿರುತ್ತದೆ. ಹಣಕಾಸಿನ ವ್ಯವಹಾರದಲ್ಲಿ ಕೇವಲ ಊಹೆ ಮಾಡಿದಾಗ ಇನ್ನೊಬ್ಬರಿಗೆ ಹಾನಿಕರವಾಗುವಂತೆ ಮಾಡದೆ ಇರುವುದು ಸಾಧ್ಯವಿಲ್ಲ. ಆದರೆ ಇದು ಇಷ್ಟಕ್ಕೇ ಸೀಮಿತವಾಗಿರುತ್ತದೆ. ಹಾಗಿಲ್ಲದಿದ್ದರೆ ಉತ್ಪಾದಕ ತಾನು ಉತ್ಪಾದಿಸಿದುದಕ್ಕೆ ಪ್ರತಿಯಾಗಿ ಹಣ ಗುಡ್ಡೆ ಹಾಕುವಾಗ ರಂಧ್ರವನ್ನುಂಟು ಮಾಡುವುದಿಲ್ಲ. ನಿಶ್ಚಿತವಾಗಿ ಉತ್ಪಾದನೆಯ ಮೌಲ್ಯದ ಪ್ರಶ್ನೆಯಿದೆ, ಸಾಧಾರಣ ಮಾನವ ಸಂಪತ್ತಿಗೆ ಒಂದು ಸಂಪಾದನೆಯಾದರೆ, ಅದು ರಂಧ್ರವನ್ನುಂಟು ಮಾಡುವುದಿಲ್ಲ ಮತ್ತು ಇನ್ನೊಂದು ರೀತಿಯಲ್ಲಿ ಕೇವಲ ಭೌತಿಕ ಕ್ಷೇತ್ರದಲ್ಲಷ್ಟೇ ಅಲ್ಲ, ಅದೇ ವಿಷಯ ಕಲೆ, ಸಾಹಿತ್ಯ ಇಲ್ಲವೆ ವಿಜ್ಞಾನ ಇವುಗಳ ಕ್ಷೇತ್ರದಲ್ಲಿ, ಯಾವುದೇ ಉತ್ಪಾದನೆಯ ಕ್ಷೇತ್ರದಲ್ಲಿ ಅನ್ವಯವಾಗುತ್ತದೆ.

*

**ಪ್ರಶ್ನೆ :** *ನಾನು ನಿರ್ಯಾತ–ಆಯಾತ (export-import) ವ್ಯವಹಾರ ಮಾಡುತ್ತಿದ್ದಾಗ ನೆರೆಹೊರೆಯವರ ಮೇಲೆ ದರೋಡೆ ಮಾಡುತ್ತಿದ್ದ ಭಾವನೆ ಯಾವಾಗಲೂ ಬರುತ್ತಿತ್ತು.*

**ಶ್ರೀಮಾತೆ :** ಇದು ಇತರರ ಖರ್ಚಿನಲ್ಲಿ ಜೀವಿಸುವುದಾಗಿದೆ, ಏಕೆಂದರೆ ಮನುಷ್ಯ ಮಧ್ಯವರ್ತಿಗಳು ಅಧಿಕವಾಗುವಂತೆ ಮಾಡುತ್ತಾನೆ. ಸ್ವಾಭಾವಿಕವಾಗಿ ಅದು ಅನುಕೂಲಕರ, ವ್ಯಾವಹಾರಿಕವಾದದ್ದು, ಆದರೆ ಸಾಧಾರಣ ದೃಷ್ಟಿಕೋನದಿಂದ ನೋಡಿದಾಗ, ಅದಕ್ಕೂ ಹೆಚ್ಚಾಗಿ ಅದನ್ನು ಆಚರಿಸುವ ರೀತಿಯಲ್ಲಿ ನೋಡಿದಾಗ ಅದು ಉತ್ಪಾದಕನ ಹಾಗೂ ಬಳಕೆದಾರನ ಖರ್ಚಿನಲ್ಲಿ ಜೀವಿಸುವುದಾಗಿದೆ. ಮನುಷ್ಯ ನಿಯೋಗಿ (agent)ಯಾಗಿರುತ್ತಾನೆ, ಅದು ಸೇವೆ ಸಲ್ಲಿಸಬೇಕೆಂಬ ಉದ್ದೇಶದಿಂದಲ್ಲ. (ಏಕೆಂದರೆ ಲಕ್ಷಾನುಗಟ್ಟಲೆ ಜನರಲ್ಲಿ ಒಬ್ಬನಿಗೂ ಈ ವಿಚಾರ–ವಿರುವುದಿಲ್ಲ.) ಏಕೆಂದರೆ ಅದು ಯಾವ ಪ್ರಯತ್ನವನ್ನೂ ಮಾಡದೆ ಹಣವನ್ನು ಸುಲಭವಾಗಿ ಗಳಿಸುವ ರೀತಿಯಾಗಿರುತ್ತದೆ. ಆದರೆ, ಸಹಜವಾಗಿ, ಪ್ರಯತ್ನವಿಲ್ಲದೆ ಹಣ ಗಳಿಸುವ ಇನ್ನಿತರರಿದ್ದಾರೆ, ಇನ್ನೂ ಹೆಚ್ಚು ಕೆಟ್ಟರೀತಿಯಲ್ಲಿ ವ್ಯವಹರಿಸುತ್ತಾರೆ. ಅವರ ಸಂಖ್ಯೆ ಎಣಿಸಲಾಗದಷ್ಟಿದೆ.

*

## ಪ್ರಾಮಾಣಿಕತನ ಹಾಗೂ ವ್ಯವಹಾರ

**ಪ್ರಶ್ನೆ:** *ಹೊರಗಿನ ಜಗತ್ತಿನಲ್ಲಿರುವ ಸ್ನೇಹಿತರು ಬಹಳಷ್ಟು ಸಲ ನನಗೆ ಈ ಪ್ರಶ್ನೆಯನ್ನು ಕೇಳಿದ್ದಾರೆ:* “*ಮನುಷ್ಯ ತನ್ನ ಜೀವನೋಪಾಯಕ್ಕಾಗಿ ದುಡಿಯ ಬೇಕಾದ ಒತ್ತಾಯಕ್ಕೊಳಗಾದಾಗ ಅವನು ಸಾಮಾನ್ಯ ನಿಯಮಾವಳಿಗೆ ಅನುಗುಣವಾಗಿ ವರ್ತಿಸಬೇಕೋ ಇಲ್ಲವೆ ಇನ್ನೂ ಹೆಚ್ಚು ಕಟ್ಟುನಿಟ್ಟಿನ–ವನಾಗಿರಬೇಕೋ?*

**ಶ್ರೀಮಾತೆ :** ಅದು ನಿನ್ನ ಸ್ನೇಹಿತ ಜೀವನದಲ್ಲಿ ಯಾವ ಮನೋಭಾವ ಹೊಂದಿದ್ದಾನೆ ಎಂಬುದರ ಮೇಲೆ ಅವಲಂಬಿಸಿರುತ್ತದೆ. ಅವನು ಸಾಧಕನಾಗ ಬಯಸಿದರೆ ಸರ್ವಸಾಧಾರಣ ನೈತಿಕತೆಯ ನಿಯಮಗಳು ಯಾವ ಮೌಲ್ಯವನ್ನು ಹೊಂದಿರುವುದು ಅವನಿಗೆ ಅತ್ಯಗತ್ಯದ್ದಾಗಿರುವುದಿಲ್ಲ. ಅವನು ಸಾಧಾರಣ ಜೀವನ ನಡೆಸುವ ಸಾಧಾರಣ ಮನುಷ್ಯನಾಗಿದ್ದರೆ, ಎಲ್ಲ ತೊಂದರೆಯನ್ನು ತಪ್ಪಿಸಿಕೊಳ್ಳು–

ವುದಕ್ಕಾಗಿ ಅವನು ಜೀವಿಸುತ್ತಿರುವ ದೇಶದ ನಿಯಮಾವಳಿಗೆ ಹೊಂದಿಕೊಂಡಿ–ರಬೇಕು. ಸಾಪೇಕ್ಷ ಮೌಲ್ಯವಿರುವ ಈ ಎಲ್ಲ ವಿಷಯಗಳನ್ನು, ಸಾಮಾನ್ಯ ಜೀವನದಲ್ಲಿ ಒಂದು ಬಗೆಯ ತಾಳ್ಮೆಯಿಂದ ನೋಡಬಹುದು, ಇವು ಮನುಷ್ಯ ಯೋಗವನ್ನು ಆಚರಿಸಬೇಕು ಹಾಗೂ ದೈವೀ ಜೀವನದಲ್ಲಿ ಪ್ರವೇಶಿಸಬೇಕು ಎಂದಿದ್ದಾಗ ಇಡಿಯಾಗಿ ಬದಲಾಗುತ್ತವೆ ಆಗ ಎಲ್ಲ ಮೌಲ್ಯಗಳು ಸಂಪೂರ್ಣವಾಗಿ ಬದಲಾಗುತ್ತವೆ. ಸಾಮಾನ್ಯ ಜೀವನದಲ್ಲಿ ಪ್ರಾಮಾಣಿಕ ಎನಿಸಿದ್ದು ನಿಮಗೆ ಪ್ರಾಮಾಣಿಕವಾಗಿ ಉಳಿದುಕೊಂಡಿರುವುದಿಲ್ಲ. ಅಲ್ಲದೆ ಮೌಲ್ಯಗಳಲ್ಲಿ ಹಿಮ್ಮೊಗ–ವಾಗುವಿಕೆ ಎಂತಹದಿರುತ್ತದೆಂದರೆ ಮನುಷ್ಯ ಇನ್ನು ಮುಂದೆ ಅದೇ ಸಾಧಾರಣ ಭಾಷೆಯನ್ನು ಉಪಯೋಗ ಮಾಡಲಾರನು. ಮನುಷ್ಯ ದೈವೀ ಜೀವನಕ್ಕೆ ತನ್ನನ್ನು ಮುಡಿಪಾಗಿರಿಸಲು ಬಯಸಿದರೆ, ಅದನ್ನು ಅವನು ನಿಜವಾಗಿ ಕೈಕೊಳ್ಳಬೇಕು, ಎಂದರೆ ತನ್ನನ್ನು ಇಡಿಯಾಗಿ ಕೊಟ್ಟುಕೊಳ್ಳಬೇಕು. ಇನ್ನು ಮುಂದೆ ಏನನ್ನೂ ತನ್ನ ಆಸಕ್ತಿಯ ಸಲುವಾಗಿ ಕೈಕೊಳ್ಳಬಾರದು. ತನ್ನನ್ನು ಪ್ರತ್ಯೇಕವಾಗಿ ಒಪ್ಪಿಸಿಬಿಟ್ಟ ದೈವೀ ಸಾಮರ್ಥ್ಯದ ಮೇಲೆ ಅವಲಂಬಿಸಿರಬೇಕು. ಪ್ರತಿಯೊಂದೂ ಸಂಪೂರ್ಣವಾಗಿ ಬದಲಾಗುವುದು, ಆಗುತ್ತದಲ್ಲವೆ? – ಪ್ರತಿಯೊಂದೂ, ಅದು ಹಿಮ್ಮೊಗವಾಗು–ವುದಿರುತ್ತದೆ. ಈಗ ನಾನು ಈ ಪುಸ್ತಕದಿಂದ ಓದಿ ಹೇಳಿದ್ದು ಯೋಗವನ್ನು ಆಚರಿಸುವವರಿಗೆ ಮಾತ್ರ ಅನ್ವಯಿಸುತ್ತದೆ, ಇತರರಿಗೆ ಅದು ಅರ್ಥಹೀನವಾಗಿದೆ, ಆ ಭಾಷೆ ಅವರಿಗೆ ಯಾವ ಅರ್ಥವನ್ನೂ ತಂದುಕೊಡುವುದಿಲ್ಲ, ಅದರ ಭಾಷೆ ಅವರಿಗೆ ಅರ್ಥವಾಗುವಂತಹದಲ್ಲ, ಆದರೆ ಯೋಗವನ್ನು ಆಚರಿಸಲು ಬಯಸುವವರಿಗೆ ಅದು ಆಜ್ಞಾರ್ಥಕವಾಗಿದೆ. ನಾವು ಇತ್ತೀಚೆಗೆ ಓದಿದುದ–ರಲ್ಲಿದ್ದುದು ಅದೇ ವಿಷಯವಾಗಿತ್ತು ಒಂದು ಪಾದವನ್ನು ಒಂದು ಬದಿಯಲ್ಲಿ, ಇನ್ನೊಂದು ಪಾದವನ್ನು ಇನ್ನೊಂದು ಬದಿಯಲ್ಲಿ ಇರಿಸದಂತೆ ಜಾಗ್ರತೆ ವಹಿಸಬೇಕು, ತಮ್ಮದೇ ಮುನ್ನಡೆಯಲ್ಲಿರುವ ಎರಡು ಭಿನ್ನ ನೌಕೆಗಳಲ್ಲಿ ನಿಂತುಕೊಳ್ಳಬಾರದು. ಇದನ್ನೇ ಶ್ರೀ ಅರವಿಂದರು ಹೇಳಿದ್ದರು: ಮನುಷ್ಯ ಎರಡು ಬಗೆಯ ಜೀವನ ನಡೆಸಬಾರದು. ಒಂದನ್ನು ಇನ್ನೊಂದಕ್ಕಾಗಿ ಬಿಟ್ಟುಕೊಡಬೇಕು. ಮನುಷ್ಯ ಎರಡನ್ನೂ ಅನುಸರಿಸಲಾರ. ಆದಾಗ್ಯೂ ಇದರರ್ಥ ಮನುಷ್ಯ ತನ್ನ ಜಿವನದ ಪರಿಸ್ಥಿತಿಗಳಿಂದ ಹೊರಬರಬೇಕೆಂಬ ನಿರ್ಬಂಧವಿರುವುದಿಲ್ಲ, ಆಂತರಿಕ ಮನೋಭಾವ ಇಡಿಯಾಗಿ ಬದಲಾಗಬೇಕು. ಯೋಗವನ್ನು ಆಚರಿಸುವುದಕ್ಕಾಗಿ ಜೀವನದಲ್ಲಿರುವ ಎಲ್ಲವನ್ನು ಬಿಟ್ಟುಕೊಡಬೇಕು, ಏಕಾಂತವನ್ನು ಅರಸಿಕೊಂಡು

ಹೋಗಬೇಕು, ಅವಶ್ಯವಾಗಿ ಒಂದು ಆಶ್ರಮದಲ್ಲಿರಬೇಕು ಎಂದು ನಾನು ಹೇಳುವುದಿಲ್ಲ. ಮನುಷ್ಯ ಜಗತ್ತಿನಲ್ಲಿದ್ದುಕೊಂಡು, ಜಗತ್ತಿನ ಪರಿಸ್ಥಿತಿಗಳಲ್ಲಿ ಇದ್ದುಕೊಂಡು ಯೋಗವನ್ನು ಕೈಕೊಂಡರೆ ಅದು ಹೆಚ್ಚು ಕಠಿಣವಾದದ್ದು, ಆದರೆ ಹಾಗೆಯೇ ಅದು ಹೆಚ್ಚು ಸಂಪೂರ್ಣವಾದದ್ದು. ಏಕೆಂದರೆ ಪ್ರತಿಯೊಂದು ನಿಮಿಷ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ, ಅದು ಎಲ್ಲವನ್ನೂ ಬಿಟ್ಟುಕೊಟ್ಟು ಏಕಾಂತದಲ್ಲಿರಲು ಹೋದವನಿಗೆ ಅನ್ವಯಿಸುವುದಿಲ್ಲ, ಅವನಿಗೆ ಆ ಸಮಸ್ಯೆಗಳು ಕನಿಷ್ಠ ಪ್ರಮಾಣದಲ್ಲಿರುತ್ತವೆ; ಸಾದಾ ಜೀವನದಲ್ಲಿರುವಾಗ ಮನುಷ್ಯ ಎಲ್ಲ ಬಗೆಯ ತೊಂದರೆಗಳನ್ನು ಎದುರಿಸುತ್ತಾನೆ, ಅದು ತನ್ನ ಸುತ್ತಲಿದ್ದವರನ್ನು ವ್ಯಾಪಕವಾಗಿ ತಿಳಿದುಕೊಳ್ಳದೆ ಇರುವಿಕೆಯಿಂದ ಪ್ರಾರಂಭವಾಗುತ್ತದೆ, ನೀವು ಅವರೊಡನೆ ವ್ಯವಹರಿಸಬೇಕಾಗಿರುತ್ತದೆ, ಮನುಷ್ಯ ಅದಕ್ಕೆ ತಯಾರಾಗಿರಬೇಕು, ತಾಳ್ಮೆಯಿಂದ ಶಸ್ತ್ರಸನ್ನದ್ಧನಾಗಿರಬೇಕು ಮತ್ತು ಬಹಳಷ್ಟು ಉದಾಸೀನತೆ ಇರಬೇಕು. ಆದರೆ ಯೋಗದಲ್ಲಿ ಮನುಷ್ಯ ಇನ್ನು ಮುಂದೆ ಜನರು ಏನು ಯೋಚಿಸುತ್ತಾರೆ ಇಲ್ಲವೆ ಹೇಳುತ್ತಾರೆ ಎಂಬುದನ್ನು ಕುರಿತು ಕಾಳಜಿ ಮಾಡುವುದಿರುವುದಿಲ್ಲ, ಅದು ಸಂಪೂರ್ಣವಾಗಿ ಅತ್ಯಗತ್ಯದ್ದಾದ ಪ್ರಾರಂಭ ಬಿಂದು. ನಿಮ್ಮನ್ನು ಕುರಿತು ಜಗತ್ತು ಏನು ಯೋಚಿಸುತ್ತದೆ, ಏನು ಹೇಳುತ್ತದೆ, ಯಾವ ರೀತಿಯಲ್ಲಿ ನಡೆಸಿಕೊಳ್ಳುತ್ತದೆ ಎಂಬುದರಿಂದ ನೀವು ಪೂರ್ಣವಾಗಿ ಪ್ರತಿರಕ್ಷಿತ (immune) ರಾಗಿರಬೇಕು. ನಿಮ್ಮನ್ನು ಕುರಿತು ಜನರು ತಿಳಿವಳಿಕೆ ಮಾಡಿಕೊಂಡದ್ದು ನಿಮಗೆ ಪ್ರಧಾನವಾಗಿರದ ಏನೋ ಒಂದಾಗಿರಬೇಕು, ಅದು ನಿಮ್ಮನ್ನು ಸ್ವಲ್ಪಮಟ್ಟಿಗೂ ಸ್ಪರ್ಶ ಮಾಡಬಾರದು. ಆ ಕಾರಣದಿಂದಾಗಿ ಎಲ್ಲವನ್ನೂ ತ್ಯಜಿಸಿ ಏಕಾಂತದಲ್ಲಿದ್ದು ಯೋಗ ಕೈಕೊಳ್ಳು-ವುದಕ್ಕಿಂತ ಮನುಷ್ಯ ತನ್ನ ಯಥಾಪ್ರಕಾರದ ಪರಿಸರದಲ್ಲಿದ್ದು ಯೋಗ ಕೈಕೊಳ್ಳುವುದು ಹೆಚ್ಚು ಕಠಿಣವಾದದ್ದು, ಅದು ಹೆಚ್ಚು ಕಠಿಣವಾದದ್ದು, ಆದರೆ ನಾವಿಲ್ಲಿ ಸುಲಭವಾದ ಕಾರ್ಯಗಳನ್ನು ಕೈಕೊಳ್ಳುವುದಕ್ಕಿರುವುದಿಲ್ಲ– ಪರಿವರ್ತನೆಯನ್ನು ಕುರಿತು ಯೋಚಿಸದೆ ಇರುವವರಿಗೆ ಆ ಸುಲಭ ಕಾರ್ಯ-ಗಳನ್ನು ಬಿಟ್ಟುಕೊಡುತ್ತೇವೆ.

*

**ಹಣವನ್ನು ದೊರಕಿಸುವ ಸಾಧನ ಮತ್ತು ಅದರ ಸಾಮೂಹಿಕ ಉಪಯೋಗ**

**ಪ್ರಶ್ನೆ:** *ಯಾರಾದರೊಬ್ಬರು ಬಹಳಷ್ಟು ಹಣವನ್ನು ಮೋಸದಿಂದ ದೊರಕಿಸಿದ್ದರೆ*

*ಅದರಲ್ಲಿಯ ಒಂದಿಷ್ಟನ್ನು ಭಗವಂತನಿಗಾಗಿ ಉಪಯೋಗ ಮಾಡಬಹುದೆ?*

**ಶ್ರೀಮಾತೆ :** ಈ ಪ್ರಶ್ನೆಗೆ ಶ್ರೀ ಅರವಿಂದರು ಉತ್ತರ ನೀಡಿದ್ದಾರೆ. ಹಣ ತನ್ನದೇ ಸ್ವಭಾವದಲ್ಲಿ ಅವೈಯಕ್ತಿಕ ಶಕ್ತಿ. ಯಾವ ರೀತಿಯಲ್ಲಿ ನೀವು ಹಣ ಗಳಿಸುತ್ತೀರಿ ಎಂಬುದು ನಿಮಗೆ ಮಾತ್ರ ಸಂಬಂಧಿಸಿರುತ್ತದೆ. ಅದು ನಿಮಗೆ ಮತ್ತು ಇತರರಿಗೆ ಹಾನಿಯನ್ನುಂಟು ಮಾಡಬಹುದು, ಆದರೆ ಅದು ಹಣದ ಸ್ವಭಾವವನ್ನು ಬದಲು ಮಾಡುವುದಿಲ್ಲ, ಅದು ಒಟ್ಟಿನಲ್ಲಿ ಅವೈಯಕ್ತಿಕ ಶಕ್ತಿ ; ಹಣಕ್ಕೆ ಬಣ್ಣ, ಸ್ವಾದ, ಮನೋವೈಜ್ಞಾನಿಕ ಪ್ರಜ್ಞೆ ಇರುವುದಿಲ್ಲ. ಅದೊಂದು ಶಕ್ತಿ. ಅದು ಪ್ರಾಮಾಣಿಕ ಮನುಷ್ಯ ಉಸಿರಾಡಿಸಿದ ಹವೆಗಿಂತ ದುಷ್ಟ ಮನುಷ್ಯ ಉಸಿರಾಡಿಸಿದ ಹವೆ ಹೆಚ್ಚು ಕಲಂಕಿತವಾಗಿರುತ್ತದೆ ಎಂದು ಹೇಳುವಂತಿದೆ– ಅದು ಹಾಗಿರಲಾರದು. ಪರಿಣಾಮ ಒಂದೇ ಆಗಿರುತ್ತದೆ ಎಂದು ನಾನು ಯೋಚಿಸುತ್ತೇನೆ. ವ್ಯಾವಹಾರಿಕ ಕಾರಣ–ಗಳಿಂದಾಗಿ ಮನುಷ್ಯ ಕಳವು ಮಾಡಿದ ಹಣವನ್ನು ಸ್ವೀಕರಿಸುವುದನ್ನು ತಿರಸ್ಕರಿಸಬಹುದು, ಅದು ದೈವೀ ಕಾರಣಕ್ಕಾಗಿ ಅಲ್ಲ. ಇದು ಕೇವಲ ಮಾನವ ಯೋಚನೆ. ವ್ಯಾವಹಾರಿಕ ದೃಷ್ಟಿಕೋನದಿಂದ ಮನುಷ್ಯ ಹೇಳಬಹುದು: "ಅಹಾ, ಇಲ್ಲ ನೀನು ಈ ಹಣ ಗಳಿಸಿದ ರೀತಿ ಜುಗುಪ್ಸೆ ತರಿಸುವಂತಿದೆ ಮತ್ತು ಹಾಗಾಗಿ ನಾನದನ್ನು ಭಗವಂತನಿಗೆ ಅರ್ಪಿಸಲು ಬಯಸುವುದಿಲ್ಲ, ಅದು ಏಕೆಂದರೆ ಮನುಷ್ಯನಲ್ಲಿ ಮಾನವ ಪ್ರಜ್ಞೆ ಇರುತ್ತದೆ. ಆದರೆ ಬೇರೆ ಒಬ್ಬನನ್ನು ಗಮನಿಸಿದರೆ (ಅವನು ಅತ್ಯಂತ ಕೆಟ್ಟ ಮನುಷ್ಯ ಎಂದು ತಿಳಿಯೋಣ) ಅವನು ಯಾರನ್ನೋ ಕೊಂದು ಹಣ ದೊರಕಿಸಿರುತ್ತಾನೆ; ಹಠಾತ್ತನೆ ಅಂತಸ್ಸಾಕ್ಷಿಯ ಅಳುಕು ಅವನನ್ನು ಹಿಡಿದುಕೊಂಡರೆ ಮತ್ತು ಅವನು ತನಗೇ ಹೇಳಿಕೊಂಡರೆ: "ಈ ಹಣದೊಂದಿಗೆ ನಾನು ಕೈಕೊಳ್ಳಬಹುದಾದ ಕೇವಲ ಒಂದೇ ಕಾರ್ಯವಿದೆ; ಎಲ್ಲಿ ಅದನ್ನು ಅತ್ಯಂತ ಒಳ್ಳೆಯದಕ್ಕಾಗಿ ಅವೈಯಕ್ತಿಕವಾಗಿ ಉಪಯೋಗಿಸಲಾಗುತ್ತದೆಯೋ, ಅಲ್ಲಿಗೆ ಅದನ್ನು ಕೊಟ್ಟುಬಿಡುವುದಾಗಿದೆ." ಆ ಹಣವನ್ನು ತನ್ನದೇ ತೃಪ್ತಿಗೆ ಉಪಯೋಗಿ–ಸುವುದಕ್ಕಿಂತ ಈ ಚಲನೆಗೆ ಆದ್ಯತೆ ನೀಡುವುದು ಒಳ್ಳೆಯದೆಂದು ನನಗನಿಸುತ್ತದೆ. ಕೆಟ್ಟ ರೀತಿಯಿಂದ ದೊರಕಿಸಿದ ಹಣವನ್ನು ಸ್ವೀಕರಿಸಲು ಮನುಷ್ಯನನ್ನು ತಡೆಗಟ್ಟುವ ಕಾರಣಗಳು ಕೇವಲ ವ್ಯಾವಹಾರಿಕ ರೂಪದವಾಗಿರಬಹುದು, ಆದರೆ ಇಲ್ಲಿ ಇನ್ನೂ ಗಾಢ ಕಾರಣಗಳಿರಬಹುದು (ನಾನು ನೈತಿಕ ಕಾರಣಗಳೆಂದು ಹೇಳುವುದಿಲ್ಲ) ಅವು ಆಧ್ಯಾತ್ಮಿಕವಾದವುಗಳು, ತಪಸ್ಸಿನ ದೃಷ್ಟಿಕೋನಗಳಿಂದ ಇರುವಂತಹಗಳು ಆಗಿರಬಹುದು. "ಇಲ್ಲ ಇಂತಹ ಸಂಪತ್ತಿನಿಂದ ನೀವು ಪುಣ್ಯವನ್ನು ಗಳಿಸಲಾರಿರಿ,

ನೀವು ಅದನ್ನು ಭಯಾನಕ ರೀತಿಯಿಂದ ದೊರಕಿಸಿರುತ್ತೀರಿ, ನೀವು ಕೈಕೊಳ್ಳಬಹುದಾದುದು ಏನೆಂದರೆ ಅದನ್ನು ಹಿಂದಿರುಗಿಸುವುದಾಗಿದೆ" ಎಂದು ಒಬ್ಬ ಯಾರಿಗೋ ಹೇಳಬಹುದು. ಸರಳವಾಗಿ ಹಣವನ್ನು ಯಾವುದೋ ಕಾರ್ಯಕ್ಕೆ ಕೊಡುವುದಕ್ಕಿಂತ ಮನುಷ್ಯ ಅದನ್ನು ಹಿಂದಿರುಗಿಸುವುದು ಪ್ರಗತಿ ಸಾಧಿಸಲು ತನಗೆ ಹೆಚ್ಚು ಉಪಯುಕ್ತವಾಗುತ್ತದೆಂದು ಭಾವನೆ ತಂದುಕೊಳ್ಳ–ಬಹುದು. ಮನುಷ್ಯ ವಿಷಯಗಳನ್ನು ಈ ರೀತಿ ನೋಡಬಹುದು– ಅವನು ನಿಯಮಗಳನ್ನು ಮಾಡಲಾಗುವುದಿಲ್ಲ. ನಾನಿದನ್ನು ಹೇಳುವುದನ್ನು ಎಂದಿಗೂ ನಿಲ್ಲಿಸುವುದಿಲ್ಲ. ನಿಯಮವನ್ನು ಮಾಡುವುದು ಅಸಾಧ್ಯವಾದದ್ದು. ಪ್ರತಿಯೊಂದು ಸಂದರ್ಭದಲ್ಲಿ ಅದು ಭಿನ್ನವಾಗಿರುತ್ತದೆ ಹಣದ ಮೇಲೆ ಪರಿಣಾಮ ಉಂಟಾಗುತ್ತದೆ ಎಂದು ನೀವು ಯೋಚಿಸಬಾರದು, ಹಣ ಪಾರ್ಥಿವ ಶಕ್ತಿ, ಅದನ್ನು ದೊರಕಿಸುವ ರೀತಿಯಿಂದ ಅದರ ಮೇಲೆ ಪರಿಣಾಮ ಉಂಟಾಗುತ್ತದೆ ಎಂದು ನೀವು ಯೋಚಿಸಬಾರದು, ಹಣ ಪಾರ್ಥಿವ ಶಕ್ತಿ, ಅದನ್ನು ದೊರಕಿಸುವ ರೀತಿಯಿಂದ ಅದರ ಮೇಲೆ ಪರಿಣಾಮ ಉಂಟಾಗುವುದಿಲ್ಲ, ಅದು ಹಣದ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಹಣ ಅದೇ ಆಗಿ ಉಳಿದುಕೊಳ್ಳುತ್ತದೆ, ನಿಮ್ಮ ನೋಟುಗಳು ಹಾಗೇ ಉಳಿದುಕೊಳ್ಳುತ್ತವೆ ನಿಮ್ಮ ಬಂಗಾರದ ತುಂಡು ಹಾಗೇ ಉಳಿದುಕೊಳ್ಳುತ್ತದೆ, ಮತ್ತು ಅದು ತನ್ನ ಶಕ್ತಿಯನ್ನು ಕೊಂಡೊಯ್ಯು–ತ್ತಿರುವಾಗ, ಆ ಶಕ್ತಿ ಅದೇ ಆಗಿ ಅಲ್ಲಿ ಉಳಿದುಕೊಳ್ಳುತ್ತದೆ. ತಪ್ಪನ್ನು ಮಾಡಿದ ಮನುಷ್ಯನಿಗೆ ಹಾನಿಯನ್ನುಂಟು ಮಾಡುತ್ತದೆ, ಅದು ಸ್ಪಷ್ಟವಾಗಿದೆ.

*

**ಮನಸ್ಸಿನ ಸ್ಥಿತಿ ಹಾಗೂ ಕೊಡುವುದರ ಉದ್ದೇಶ**

ಪ್ರಶ್ನೆಯೊಂದು ಉಳಿದುಕೊಳ್ಳುತ್ತದೆ: ಮನಸ್ಸಿನ ಯಾವ ಸ್ಥಿತಿಯಲ್ಲಿ, ಮತ್ತು ಯಾವ ಕಾರಣಗಳಿಗಾಗಿ ಮೋಸಗೊಳಿಸುವ ನಿಮ್ಮ ಮನುಷ್ಯ ತನ್ನ ಹಣವನ್ನು ದೈವಿಕವೆಂದು ಪರಿಗಣಿಸಲಾದ ಕಾರ್ಯಕ್ಕೆ ದಾಟಿಸಬೇಕೆಂದಿರುತ್ತಾನೆ? ಅದು ರಕ್ಷಣಾ ಕ್ರಮವೆ, ಇಲ್ಲವೆ ವಿವೇಚನೆಯ ಮೂಲಕ ತನ್ನ ಹೃದಯವನ್ನು ಶಾಂತ ಸ್ಥಿತಿಯಲ್ಲಿ ಇರಿಸುವುದಾಗಿದೆಯೆ? ಸ್ಪಷ್ಟವಾಗಿ ಇದು ಬಹಳ ಒಳ್ಳೆಯ ಉದ್ದೇಶವಲ್ಲ ಮತ್ತು ಅದಕ್ಕೆ ಪ್ರೋತ್ಸಾಹ ನೀಡಬಾರದು, ಅದರೆ ಅವನು ಪಶ್ಚಾತ್ತಾಪದ, ವಿಷಾದದ ಭಾವನೆ ತಂದುಕೊಂಡರೆ ಮತ್ತು ಕೈಕೊಳ್ಳಬೇಕಾದ ಒಂದೇ ವಿಷಯವೆಂದರೆ

ನಿಖರವಾಗಿ ತನ್ನಿಂದ ಹಣವನ್ನು ಕಿತ್ತುಹಾಕಿ ಸಾಧ್ಯವಿದ್ದಷ್ಟು ಸಾರ್ವಜನಿಕರ ಒಳ್ಳೆಯದಕ್ಕಾಗಿ ಉಪಯೋಗಿಸಬೇಕು ಎಂಬ ಭಾವನೆ ತಂದುಕೊಂಡರೆ ಆಗ ಅದರ ವಿರುದ್ಧ ಹೇಳುವುದು ಏನೂ ಇರುವುದಿಲ್ಲ. ಸಾಧಾರಣ ರೀತಿಯಲ್ಲಿ ಮನುಷ್ಯ ನಿರ್ಧರಿಸಲಾರ. ಅದು ಉದಾಹರಣೆಯ ಮೇಲೆ ಅವಲಂಬಿಸಿರುತ್ತದೆ.

ನೀನು ಹೇಳುತ್ತಿರುವುದರ ಅರ್ಥವನ್ನು ನಾನು ಸರಿಯಾಗಿ ತಿಳಿದುಕೊಂಡರೆ ಮಾತ್ರ: ಒಬ್ಬ ಮನುಷ್ಯ ಮಾತಿನಲ್ಲಿ ಹೇಳಲು ಸಾಧ್ಯವಾಗದ ರೀತಿಯಲ್ಲಿ ಹಣವನ್ನು ದೊರಕಿಸಿರುತ್ತಾನೆ, ಸ್ಪಷ್ಟವಾಗಿ ಅವನ ಬಳಿ ಹೋಗಿ ದೈವೀಕಾರ್ಯಕ್ಕಾಗಿ ಹಣ ಕೇಳುವುದು ಒಳ್ಳೆಯದಲ್ಲ, ಏಕೆಂದರೆ ಅದು ಅವನು ಹಣಗಳಿಸುವ ರೀತಿಯನ್ನು ಸಮರ್ಥಿಸಿದಂತಾಗುತ್ತದೆ. ಮನುಷ್ಯ ಕೇಳಲಾರ, ಅದು ಸಾಧ್ಯವಿಲ್ಲ. ಸ್ವಯಂಪ್ರೇರಣೆಯಿಂದ, ಯಾವುದೋ ಕಾರಣಕ್ಕಾಗಿ, ಅವನು ಕೊಟ್ಟರೆ ಅದನ್ನು ತಿರಸ್ಕರಿಸುವುದಕ್ಕೆ ಕಾರಣವಿರುವುದಿಲ್ಲ. ಆದರೆ ಅದಕ್ಕಾಗಿ ಅವನ ಬಳಿ ಹೋಗಿ ಕೇಳುವುದು ಅಸಾಧ್ಯವಾದದ್ದು, ಏಕೆಂದರೆ ಮನುಷ್ಯ ಅವನು ಗಳಿಸುವ ರೀತಿಯನ್ನು ನ್ಯಾಯಯುತವಾದದ್ದನ್ನಾಗಿ ಮಾಡಿದ ಹಾಗಾಗುತ್ತದೆ. ಅದು ಬಹಳ ವ್ಯತ್ಯಾಸ–ವನ್ನುಂಟು ಮಾಡುತ್ತದೆ.

ಮತ್ತು ಸಾಧಾರಣವಾಗಿ ಇಂತಹ ಸಂದರ್ಭಗಳಲ್ಲಿ, ನೀಚ ಜನರ ಬಳಿ ಹೋಗಿ ಹಣವನ್ನು ಕೇಳುವವರು ಭಯ ಹುಟ್ಟಿಸುವ ಸಾಧನವನ್ನು ಉಪಯೋಗಿಸುತ್ತಾರೆ, ಅವರನ್ನು ಹೆದರಿಸುತ್ತಾರೆ, ಭೌತಿಕವಾಗಿ ಅಲ್ಲ, ಆದರೆ ಅಂತಹರ ಭವಿಷ್ಯ ಜೀವನದಲ್ಲಿ ಏನು ಸಂಭವಿಸಬಹುದು, ಎಂಬುದನ್ನು ಹೇಳುತ್ತಾರೆ. ಅದು ಒಳ್ಳೆಯದಲ್ಲ. ಇಂತಹ ವಿಧಾನಗಳನ್ನು ಉಪಯೋಗಿಸ–ಬಾರದು.

*

**ದೈವೀ ಕಾರ್ಯಕ್ಕಾಗಿ ಹಣವನ್ನು ಜಯಿಸುವುದು**

**ಪ್ರಶ್ನೆ:** *ಶ್ರೀಮಾತೆಯವರಿಗಾಗಿ ಹಣವನ್ನು ಮರಳಿ ಜಯಿಸುವುದು ಹೇಗೆ?*

**ಶ್ರೀಮಾತೆ :** ಅಹಾ! ಇಲ್ಲೊಂದು ಸುಳಿವಿದೆ. ಮೂರು ವಿಷಯಗಳ ಪರಸ್ಪರ ಅವಲಂಬನವಿದೆ. (ಶ್ರೀ ಅರವಿಂದರು ಹೇಳುತ್ತಾರೆ) ಸಾಮರ್ಥ್ಯ, ಹಣ ಹಾಗೂ ಲೈಂಗಿಕತೆ. ಇವು ಮೂರು ಪರಸ್ಪರ ಅವಲಂಬನ ಹೊಂದಿರುತ್ತವೆ ಎಂದು

ನನಗನಿಸುತ್ತದೆ ಮತ್ತು ಆ ಮೂರನ್ನು ಜಯಿಸಬೇಕು. ಯಾವುದೊಂದರ ಬಗ್ಗೆ ನಿಶ್ಚಿತತೆ ಪಡೆಯುವುದಕ್ಕೆ– ನೀವು ಒಂದನ್ನು ಜಯಿಸಲು ಬಯಸಿದರೆ ಉಳಿದೆರಡು ನಿಮ್ಮಲ್ಲಿರಬೇಕು. ಮನುಷ್ಯ ಈ ಮೂರು ವಿಷಯಗಳು ಎಂದರೆ ಸಾಮರ್ಥ್ಯಕ್ಕಾಗಿ ಆಸೆ, ಹಣಕ್ಕಾಗಿ ಆಸೆ, ಲೈಂಗಿಕತೆಗಾಗಿ ಆಸೆ ಇವುಗಳ ಮೇಲೆ ಪ್ರಭುತ್ವ ಪಡೆಯದೆ ಇದ್ದರೆ ಅವುಗಳಲ್ಲಿ ಯಾವುದನ್ನೂ ದೃಢವಾಗಿ ಹಾಗೂ ನಿಶ್ಚಿತವಾಗಿ ವಶಪಡಿಸಿಕೊಂಡಿರುವುದಿಲ್ಲ. ಅದಿದ್ದ ಹಾಗಿರುವ ಜಗತ್ತಿನಲ್ಲಿ ಯಾವುದು ಹಣಕ್ಕೆ ಇಂದು ಇಷ್ಟೊಂದು ಶ್ರೇಷ್ಠ ಮಹತ್ವ ನೀಡುತ್ತದೆ ಎಂದರೆ ಸ್ವತಃ ಅಷ್ಟೊಂದು ಹಣವೇ ಆಗಿರುವುದಿಲ್ಲ, ಏಕೆಂದರೆ ಹಣವನ್ನು ಗುಡ್ಡೆ ಹಾಕಿ, ಅದನ್ನು ಎಣಿಸಿ ಸಂತೋಷಪಟ್ಟುಕೊಳ್ಳುವ ಕೆಲವು ಮೂರ್ಖರ ಹೊರತಾಗಿ ಸಾಧಾರಣವಾಗಿ ಹಣ ತರುವ ತೃಪ್ತಿಗಾಗಿ ಆಸೆಯಿರುತ್ತದೆ ಹಾಗೂ ಅದನ್ನು ದೊರಕಿಸಲಾಗುತ್ತದೆ ಮತ್ತು ಇದು ಬಹುಮಟ್ಟಿಗೆ ಪರಸ್ಪರವಾಗಿರುತ್ತದೆ: ಈ ಮೂರು ವಿಷಯಗಳಲ್ಲಿ ಪ್ರತಿಯೊಂದಕ್ಕೆ ಆಸೆಗಳ ಜಗತ್ತಿನಲ್ಲಿ ಅದರದೇ ಮೌಲ್ಯವಿರುತ್ತದೆ ಅಷ್ಟೇ ಅಲ್ಲ, ಆದರೆ ಉಳಿದೆರಡರ ಮೇಲೆ ಅದು ವಾಲಿಕೊಂಡಿರುತ್ತದೆ. ನಿಮಗೆ ನಾನು ದೊಡ್ಡ ಕಪ್ಪು ಬಣ್ಣದ ಸರ್ಪವಿದ್ದುದರ ದರ್ಶನ ಕುರಿತು ಹೇಳಿದ್ದೇನೆ. ಅದು ಜಗತ್ತಿನ ಸಂಪತ್ತುಗಳ ಮೇಲೆ, ಪೃಥ್ವಿಯ ಸಂಪತ್ತುಗಳ ಮೇಲೆ ಕಾವಲಿರಿಸುತ್ತದೆ– ಅದು ಲೈಂಗಿಕ ಪ್ರಚೋದನೆಯ ಮೇಲೆ ಪ್ರಭುತ್ವವನ್ನು ಒತ್ತಾಯದಿಂದ ಕೇಳುತ್ತದೆ. ಏಕೆಂದರೆ ಕೆಲವೊಂದು ಸಿದ್ಧಾಂತಗಳ ಪ್ರಕಾರ ಸಾಮರ್ಥ್ಯದ ಆವಶ್ಯಕತೆಯೇ ಸ್ವತಃ ಈ ತೃಪ್ತಿಯನ್ನು ಗುರಿಯಾಗಿರಿಸಿಕೊಂಡಿರುತ್ತದೆ ಮತ್ತು ಮನುಷ್ಯ ಅದರ ಮೇಲೆ ಪ್ರಭುತ್ವ ಪಡೆದರೆ ಮತ್ತು ಮಾನವ ಪ್ರಜ್ಞೆ ಅದನ್ನು ತೊಡೆದು ಹಾಕಿದರೆ ಸಾಮರ್ಥ್ಯಕ್ಕಾಗಿರುವ ಆವಶ್ಯಕತೆ ಹಾಗೂ ಧನಕ್ಕಾಗಿರುವ ಆಸೆ ಸ್ವಯಂಚಾಲಿತವಾಗಿ ಮಾಯವಾಗುವುದು. ಸ್ಪಷ್ಟವಾಗಿ ಪೃಥ್ವಿಯ ಮೇಲಿನ ಮಾನವ ಜೀವನದಲ್ಲಿ ಈ ಮೂರು ದೊಡ್ಡ ಅಡೆತಡೆಗಳಾಗಿವೆ, ಅವುಗಳನ್ನು ಜಯಿಸದಿದ್ದರೆ ಮನುಕುಲ ಬದಲಾಗುವುದಕ್ಕೆ ಗಣನೀಯ ಅವಕಾಶವಿರುವುದಿಲ್ಲ.

**CWM, 4/380–87** **– ಶ್ರೀಮಾತೆ**

*

**ಬಡತನ ಹಾಗೂ ಶ್ರೀಮಂತಿಕೆ**

**ಪ್ರಶ್ನೆ:** *ಮಹಾಲಕ್ಷ್ಮಿ ಕುರಿತು ಇಲ್ಲಿ ಶ್ರೀ ಅರವಿಂದರು: "ಬಡವಾದದ್ದೆಲ್ಲ ಮಹಾಲಕ್ಷ್ಮಿಯ ಆಗಮನವನ್ನು ದೂರವಿರಿಸುತ್ತದೆ' ಎಂದು ಹೇಳುತ್ತಾರೆ.*

**ಶ್ರೀಮಾತೆ :** ಹೌದು, ಔದಾರ್ಯವಿಲ್ಲದೆ, ಉತ್ಸಾಹವಿಲ್ಲದೆ, ವಿಸ್ತಾರವಿಲ್ಲದೆ, ಆಂತರಿಕ ಶ್ರೀಮಂತಿಕೆಯಿಲ್ಲದೆ, ನೀರಸವಾದದ್ದೆಲ್ಲ, ನಿರುತ್ಸಾಹವಿರುವುದೆಲ್ಲ ಬಡವಾದದ್ದಾಗಿ ಮಹಾಲಕ್ಷ್ಮಿಯ ಆಗಮನವನ್ನು ತಡೆಗಟ್ಟುತ್ತದೆ. ಅದು ಹಣದ ದೊಡ್ಡ ಮೊತ್ತ ಹೊಂದಿರುವುದರ ಪ್ರಶ್ನೆಯಲ್ಲ. ಮಹಾಲಕ್ಷ್ಮಿಯ ದೃಷ್ಟಿಕೋನದಿಂದ ಅತ್ಯಂತ ಶ್ರೀಮಂತನಾದ ಮನುಷ್ಯ ಬಹಳ ಬಡವನಾಗಿರಬಹುದು, ಬಹಳ ಬಡವನಾದ ಮನುಷ್ಯ, ಅವನ ಹೃದಯದಲ್ಲಿ ಔದಾರ್ಯವಿದ್ದರೆ ದೊಡ್ಡ ಶ್ರೀಮಂತನಾಗಿ–ರಬಹುದು.

**ಪ್ರಶ್ನೆ:** *"ಒಬ್ಬ ಬಡ ಮನುಷ್ಯ" ಎಂದು ನಾವು ಹೇಳಿದಾಗ, ಬಡ ಮನುಷ್ಯನ ನಿಖರವಾದ ಅರ್ಥವೇನು?*

**ಶ್ರೀಮಾತೆ :** ಯಾವ ಒಳ್ಳೆಯ ಗುಣವನ್ನು ಹೊಂದಿರದೇ ಇರುವವನು, ಶಕ್ತಿಯಿಲ್ಲದವನು, ಬಲವಿಲ್ಲದೆ ಇರುವವನು ಔದಾರ್ಯವಿಲ್ಲದವನು ದುಃಖಿತ–ನಾಗಿರುತ್ತಾನೆ, ಅಸಂತುಷ್ಟನಾಗಿರುತ್ತಾನೆ. ಅದಕ್ಕೂ ಹೆಚ್ಚಾಗಿ ಔದಾರ್ಯವಿಲ್ಲದೆ ಇದ್ದವನು ಅಸಂತುಷ್ಟನಾಗಿರುತ್ತಾನೆ, ಮನುಷ್ಯನಲ್ಲಿ ಉದಾರ ಸ್ವಭಾವವಿದ್ದರೆ, ಅದು ಲೆಕ್ಕಾಚಾರ ಮಾಡದೆ ಕೊಡುತ್ತದೆ, ಅವನು ಎಂದಿಗೂ ಅಸಂತುಷ್ಟನಾಗಿರುವುದಿಲ್ಲ. ತಮ್ಮೊಳಗೇ ಸುತ್ತಿಹಾಕಿಕೊಂಡ ಜನರು, ಯಾವಾಗಲೂ ವಸ್ತುಗಳನ್ನು ತಮ್ಮತ್ತ ಸೆಳೆದುಕೊಳ್ಳುವವರು, ವಿಷಯಗಳನ್ನು, ಜಗತ್ತನ್ನು ತಮ್ಮ ಮೂಲಕ ನೋಡುವವರು– ಇಂತಹ ಜನರು ಅಸಂತುಷ್ಟರಾಗಿರುತ್ತಾರೆ. ಆದರೆ ಮನುಷ್ಯ ತನ್ನನ್ನು ಉದಾರವಾಗಿ ಕೊಟ್ಟುಕೊಂಡಾಗ, ಲೆಕ್ಕಾಚಾರ ಮಾಡದೆ ಇದ್ದಾಗ ಎಂದಿಗೂ ಅಸಂತುಷ್ಟನಾಗಿರುವುದಿಲ್ಲ. ಕೇವಲ ತೆಗೆದುಕೊಳ್ಳಬಯಸುವವನು ಅಸಂತುಷ್ಟನಾಗಿರುತ್ತಾನೆ, ತನ್ನನ್ನು ಕೊಟ್ಟುಕೊಳ್ಳುವವನು ಎಂದಿಗೂ ಹಾಗಿರುವುದಿಲ್ಲ.

**CWM, 4/403–04** **– ಶ್ರೀಮಾತೆ**

*

**ಮಹತ್ವಾಕಾಂಕ್ಷೆ ಮತ್ತು ಲೋಕೋಪಕಾರ**

ಶಾಲೆಗಳನ್ನು ನಡೆಸುವುದಕ್ಕಾಗಿ ಹಣಕೊಡಲು ಸಿದ್ಧರಾಗಿದ್ದ ಈ ಜನರಿಗೇ ದೈವೀ ಕಾರ್ಯವೊಂದನ್ನು ಕೈಕೊಳ್ಳುವುದಿದೆ, ಭಗವಂತ ಅದನ್ನು ವಿಶಿಷ್ಟ

ರೀತಿಯಲ್ಲಿ ಕೈಕೊಳ್ಳಬೇಕೆಂದು ನಿರ್ಧರಿಸಿದ್ದಾನೆ ಎಂದು ಹೇಳಿದಾಗ ಅದು ಅವರಿಗೆ ಮನವರಿಕೆಯಾಗಿದ್ದರೂ ಕೂಡ ಏನನ್ನೂ ಕೊಡಲು ತಿರಸ್ಕರಿಸುತ್ತಾರೆ, ಏಕೆಂದರೆ ಇದನ್ನು ಉಪಕಾರ ರೂಪದ್ದೆಂದು ಗುರುತಿಸಲಾಗಿಲ್ಲ, ಮನುಷ್ಯ ಏನೋ ಒಂದು ಒಳ್ಳೆಯದನ್ನು ಕೈಕೊಂಡ ತೃಪ್ತಿಯಿರುವುದಿಲ್ಲ. ದವಾಖಾನೆ ಕಟ್ಟಿಸಲು ಲಕ್ಷಾನುಗಟ್ಟಲೆ ಹಣವನ್ನು ದಾನ ಮಾಡಲು ಸಿದ್ಧರಿದ್ದ ಜನರ ಉದಾಹರಣೆಗಳಿವೆ, ಏಕೆಂದರೆ ಅದು ಏನೋ ಒಂದು ಶ್ರೇಷ್ಠ, ವಿಶಾಲ ಹೃದಯದ, ಘನ ಕಾರ್ಯ ಮಾಡುವ ತೃಪ್ತಿಯನ್ನು ತಂದುಕೊಡುತ್ತದೆ. ಹಾಸ್ಯಪ್ರಿಯ ಮನುಷ್ಯನೊಬ್ಬನ ಪರಿಚಯ ನನಗಿತ್ತು. ಅವನು: "ಭಗವಂತನ ರಾಜ್ಯ ಬೇಗ ಬರುವುದಿಲ್ಲ, ಏಕೆಂದರೆ ಆ ನಂತರ ಬಡ ಲೋಕೋಪಕಾರಿಗಳಿಗೆ ಕೈಕೊಳ್ಳಲು ಏನು ಉಳಿದಿರುತ್ತದೆ. ಮನುಕುಲ ಇನ್ನು ಮುಂದೆ ವೇದನೆಗೆ ಒಳಗಾಗದೆ ಇದ್ದರೆ ಲೋಕೋಪಕಾರಿಗಳಿಗೆ ಕಾರ್ಯ ಉಳಿದಿರುವುದಿಲ್ಲ." ಎಂದು ಹೇಳುತ್ತಿದ್ದ. ಅದರಿಂದ ಹೊರಬರುವುದು ಕಠಿಣವಾದದ್ದು. ಜಗತ್ತು ಅದಿರುವ ಸ್ಥಿತಿಯಿಂದ ಭಗವಂತನಿಗೆ ತನ್ನನ್ನು ಕೊಟ್ಟುಕೊಳ್ಳದಿದ್ದರೆ ಅದರಿಂದ ಎಂದೂ ಹೊರಬರುವುದಿಲ್ಲ. ಎಲ್ಲ ಸದ್ಗುಣಗಳು– ಅವುಗಳನ್ನು ನೀವು ಭವ್ಯತೆಗೊಳಪಡಿಸಬಹುದು– ನಿಮ್ಮ ಸ್ವ–ಸಂತೃಪ್ತಿಯನ್ನು ಹೆಚ್ಚಿಸುತ್ತವೆ, ಅದು ನಿಮ್ಮ ಅಹಂಕಾರ, ಅವು ಭಗವಂತನ ಬಗ್ಗೆ ಅರಿವು ತಂದುಕೊಡಲು ಸಹಾಯಕವಾಗುವುದಿಲ್ಲ. ಈ ಜಗತ್ತಿನಲ್ಲಿ ವಿಶಾಲ ಹೃದಯವಿರುವ ಹಾಗೂ ಜಾಣರಾದ ಜನರನ್ನು ಪರಿವರ್ತನೆಗೆ ಒಳಪಡಿಸುವುದು ಬಹಳ ಕಠಿಣವಾದದ್ದು, ಅವರು ತಮ್ಮ ಜೀವನದೊಂದಿಗೆ ಬಹಳ ತೃಪ್ತಿಯಿಂದಿರುತ್ತಾರೆ. ತನ್ನ ಜೀವನದಲ್ಲಿ ಎಲ್ಲ ಬಗೆಯ ಹೆಡ್ಡತನದ ಕಾರ್ಯಗಳನ್ನು ಕೈಕೊಂಡ ಬಡ ಮನುಷ್ಯ ಕೂಡಲೆ ವಿಷಾದದ ಭಾವನೆ ತಂದುಕೊಳ್ಳುತ್ತಾನೆ ಮತ್ತು "ನಾನು ಏನೂ ಅಲ್ಲ, ಏನನ್ನೂ ಕೈಕೊಳ್ಳಲಾರೆ, ನಿನಗೆ ಇಷ್ಟವಾದ ರೀತಿಯಲ್ಲಿ ನನ್ನನ್ನು ಮಾಡು" ಎಂದು ಹೇಳುತ್ತಾನೆ. ಜಾಣನಾದವನು, ವಿವೇಕಿಯಾದವನು ಹಾಗು ಗರ್ವಿಷ್ಠ–ನಾದವನು ಆದವನಿಗಿಂತ ಇಂತಹ ಮನುಷ್ಯ ಹೆಚ್ಚು ಸರಿಯಾಗಿರುತ್ತಾನೆ ಮತ್ತು ಭಗವಂತನಿಗೆ ಹೆಚ್ಚು ಹತ್ತಿರವಿರುತ್ತಾನೆ. ಅವನು ತನ್ನನ್ನು ತಾನಿದ್ದ ಹಾಗೆ ನೋಡುತ್ತಾನೆ. ವಿಶಾಲ ಹೃದಯವುಳ್ಳ ಜಾಣನಾದ ಮನುಷ್ಯ ಮನುಕುಲಕ್ಕಾಗಿ ಬಹಳಷ್ಟನ್ನು ಕೈಕೊಂಡಿದ್ದರೆ ಅವನು ಬಹಳ ಆತ್ಮ–ತೃಪ್ತಿಯಿಂದಿರುತ್ತಾನೆ, ಬದಲಾಗಲು ಅವನಲ್ಲಿ ಕನಿಷ್ಠ ಮಟ್ಟದ ವಿಚಾರವೂ ಇರುವುದಿಲ್ಲ. ಸಾಮಾನ್ಯವಾಗಿ ಈ ಬಗೆಯ ಜನರು: "ನಿಜವಾಗಿ ನಾನೇನಾದರೂ ಜಗತ್ತನ್ನು ಸೃಷ್ಟಿ ಮಾಡಿದ್ದರೆ, ಅದನ್ನು ಈ ರೀತಿಯದನ್ನಾಗಿ ಮಾಡುತ್ತಿರಲಿಲ್ಲ, ಅದಕ್ಕಿಂತ ಹೆಚ್ಚು ಒಳ್ಳೆಯದಾದ

ಜಗತ್ತನ್ನು ಸೃಷ್ಟಿಸುತ್ತಿದ್ದೆ" ಎಂದು ಹೇಳುತ್ತಾರೆ, ಭಗವಂತ ಕೆಟ್ಟ ರೀತಿಯಲ್ಲಿ ಕೈಕೊಂಡದ್ದನ್ನು ಸರಿಪಡಿಸಲು ಪ್ರಯತ್ನಿಸುತ್ತಾರೆ! ಅವರ ಚಿತ್ರಣದ ಪ್ರಕಾರ ಇದೆಲ್ಲವೂ ಹೆಡ್ಡತನದ್ದು ಹಾಗೂ ನಿರುಪಯುಕ್ತವಾದದ್ದು. ಆ ಬಗೆಯ ಮನೋಭಾವದೊಂದಿಗೆ ನೀವು ಭಗವಂತನಿಗೆ ಸೇರಿದವರಾಗುವುದಿಲ್ಲ. ನಿಮ್ಮ ಹಾಗೂ ಭಗವಂತನ ನಡುವೆ ಅಲ್ಲಿ ಯಾವಾಗಲೂ ಮನುಷ್ಯನದೇ ಹೆಚ್ಚುಗಾರಿಕೆ ಹಾಗೂ ಬುದ್ಧಿಮತ್ತೆ ಇರುತ್ತವೆ, ಅವು ಭಗವಂತನನ್ನು ನಿರ್ಣಯಕ್ಕೆ ಒಳಪಡಿಸುತ್ತವೆ ಮತ್ತು ಎಂದಿಗೂ ತಪ್ಪು ತಿಳಿವಳಿಕೆಗೆ ಆಸ್ಪದ ಮಾಡಿಕೊಡುವುದಿಲ್ಲ ಎಂಬ ನಿಶ್ಚಿತತೆ ಅವರಲ್ಲಿ ಇರುತ್ತದೆ, ಅವರಿಗೆ ಮನವರಿಕೆಯಾದುದೇನೆಂದರೆ ತಾವು ಜಗತ್ತನ್ನು ಸೃಷ್ಟಿಸಿದ್ದರೆ ಭಗವಂತ ಮಾಡಿದ ಹೆಡ್ಡತನದ ಕಾರ್ಯಗಳನ್ನು ಹಾಗೂ ಪ್ರಮಾದ–ಗಳನ್ನು ಎಸಗುತ್ತಿರಲಿಲ್ಲ. ಇದೆಲ್ಲವೂ ಜಂಬ, ಗರ್ವ, ತನ್ನನ್ನೇ ಮೋಸಗೊಳಿಸಿ–ಕೊಳ್ಳುವಿಕೆ ಇವುಗಳಿಂದ ಬರುತ್ತದೆ; ಮನುಕುಲಕ್ಕೆ ಸೇವೆ ಸಲ್ಲಿಸಬೇಕೆಂದು ಬಯಸುವ ಜನರಲ್ಲಿ ಅದು, ನಿಖರವಾಗಿ, ಬೀಜರೂಪದಲ್ಲಿರುತ್ತದೆ.

*

**ಮನುಕುಲಕ್ಕೆ ಸಹಾಯ ಮಾಡುವುದು ಅಹಂಮನ್ಯತೆಯ ಒಂದುರೂಪ**

ನೀವು ಲಕ್ಷಾನುಗಟ್ಟಲೆ ದವಾಖಾನೆಗಳನ್ನು ಪ್ರಾರಂಭಿಸಬಹುದು, ಅದು ಜನರು ರೋಗಗ್ರಸ್ತರಾಗುವುದನ್ನು ತಪ್ಪಿಸುವುದಿಲ್ಲ. ತದ್ವಿರುದ್ಧವಾಗಿ ರೋಗಗ್ರಸ್ತ–ರಾಗಲು ಅವರಿಗೆ ಪ್ರತಿಯೊಂದು ಅನುಕೂಲತೆ ಹಾಗೂ ಪ್ರೋತ್ಸಾಹ ದೊರಕುತ್ತದೆ. ನಾವು ಇಂತಹ ವಿಚಾರಗಳಲ್ಲಿ ಮುಳುಗಿ ಹೋಗಿರುತ್ತೇವೆ, ಅದು ನಿಮ್ಮ ಪ್ರಜ್ಞೆಯನ್ನು ವಿಶ್ರಾಂತಿಯಲ್ಲಿರಿಸುತ್ತದೆ. "ನಾನು ಜಗತ್ತಿಗೆ ಬಂದಿದ್ದೇನೆ, ನಾನು ಇತರರಿಗೆ ಸಹಾಯ ಮಾಡಬೇಕು" ಎಂದು ಮನುಷ್ಯ ತನಗೇ ಹೇಳಿಕೊಳ್ಳುತ್ತಾನೆ: "ನಾನೆಷ್ಟು ನಿರಾಸಕ್ತನಾಗಿದ್ದೇನೆ, ನಾನು ಮನುಕುಲಕ್ಕೆ ಸಹಾಯ ಮಾಡುವವ–ನಿದ್ದೇನೆ," ಇದೆಲ್ಲ ಅಹಂಮನ್ಯತೆಯಲ್ಲದೆ ಬೇರೇನೂ ಅಲ್ಲ. ವಾಸ್ತವದಲ್ಲಿ ಮೊದಲು ಸಂಬಂಧ ಹೊಂದಿರಬೇಕಾದ ಸತ್ತೆ ನೀವೇ ಆಗಿರುತ್ತೀರಿ. ನೀವು ವೇದನೆಯನ್ನು ಕಡಿಮೆ ಮಾಡಲು ಬಯಸುತ್ತೀರಿ, ಆದರೆ ವೇದನೆಗಾಗಿರುವ ಕ್ಷಮತೆಯನ್ನು ಸಂತುಷ್ಟವಾಗಿರುವ ನಿಶ್ಚಿತತೆಯನ್ನಾಗಿ ಬದಲು ಮಾಡಲು ಶಕ್ತರಾಗದಿದ್ದರೆ ಜಗತ್ತು ಬದಲಾಗುವುದಿಲ್ಲ, ಅದು ಯಾವಾಗಲೂ ಅದೇ ಆಗಿರುತ್ತದೆ. ನಾವು ವೃತ್ತ (circle) ದಲ್ಲಿ ಹೊರಳುತ್ತಿರುತ್ತೇವೆ. ಒಂದು ನಾಗರಿಕತೆಯನ್ನನುಸರಿಸಿ ಇನ್ನೊಂದು

ನಾಗರಿಕತೆ ಬರುತ್ತದೆ, ಒಂದು ಅನಾಹುತದ ನಂತರ ಇನ್ನೊಂದು ಅನಾಹುತ ಬರುತ್ತದೆ, ಆದರೆ ವಿಷಯ ಬದಲಾಗುವುದಿಲ್ಲ, ಏಕೆಂದರೆ ಅಲ್ಲಿ ತಪ್ಪಿಸಿಕೊಂಡಿರುವ ಏನೋ ಒಂದಿರುತ್ತದೆ, ಏನೋ ಒಂದು ಅಲ್ಲಿರುವುದಿಲ್ಲ, ಅದೇ ಪ್ರಶ್ನೆ ಅಷ್ಟೇ.

ಕನಿಷ್ಠ ಪಕ್ಷ ಅದು ನನ್ನ ಅಭಿಪ್ರಾಯ. ಅದು ಯೋಗ್ಯವಾಗಿರುವಷ್ಟನ್ನು ನಾನು ನಿಮಗೆ ಕೊಡುತ್ತೇನೆ. ನೀವು ದವಾಖಾನೆಗಳನ್ನು ಹಾಗೂ ಶಾಲೆಗಳನ್ನು ನಿರ್ಮಾಣ ಮಾಡಲು ಬಯಸಿದರೆ ಹಾಗೆ ಮಾಡಬಹುದು, ಅದು ನಿಮ್ಮನ್ನು ಸಂತುಷ್ಟರನ್ನಾಗಿ ಮಾಡುತ್ತಿದ್ದರೆ ಅಷ್ಟರ ಮಟ್ಟಿಗೆ ಒಳ್ಳೆಯದು. ಅದಕ್ಕೆ ಬಹಳ ಮಹತ್ವವಿಲ್ಲ. ನಾನು ಮೊನಶ್ಯೂರ ವಿನ್ಸೆಂಟ (Monsieur Vincent) ಸಿನೇಮಾ ನೋಡಿದಾಗ ನನಗೆ ಬಹಳ ಆಸಕ್ತಿಯುಂಟಾಯಿತು. ಅವನು ಹತ್ತು ಬಡಜನರಿಗೆ ಆಹಾರ ಒದಗಿಸಿದಾಗ ಅವನ ಬಳಿ ಸಾವಿರಾರು ಬಡಜನರು ಬರತೊಡಗಿದರು. ಕೋಲ್ಬರ್ಟ್ (Colbert) ಅದನ್ನೇ ವಿನ್ಸೆಂಟನಿಗೆ ಹೇಳಿದ: "ಬಡಜನರಿಗೆ ನೀನು ಆಹಾರ ಒದಗಿಸುವುದರ ಮೂಲಕ ಆ ಬಡಜನರನ್ನು ಸೃಷ್ಟಿ ಮಾಡುತ್ತಿರುವಂತೆ ತೋರಿಬರುತ್ತದೆ." ಮತ್ತು ಇದು ಒಟ್ಟಿನಲ್ಲಿ ಅಸತ್ಯವಾದದ್ದಲ್ಲ. ಹಾಗಿದ್ದಾಗ್ಯೂ! ನಿಮ್ಮ ಅದೃಷ್ಟದಲ್ಲಿ ಶಾಲೆಗಳನ್ನು ಸ್ಥಾಪಿಸುವುದಿದ್ದರೆ, ಶಿಕ್ಷಣ ನೀಡುವುದಿದ್ದರೆ, ರೋಗಿಷ್ಟರ ಸೇವೆ ಮಾಡುವದಿದ್ದರೆ, ದವಾಖಾನೆಗಳನ್ನು ತೆರೆಯುವುದಿದ್ದರೆ ಅದನ್ನು ಕೈಕೊಳ್ಳಿರಿ. ಆದರೆ ಅದನ್ನು ನೀವು ಬಹಳ ಗಂಭೀರವಾಗಿ ತೆಗೆದುಕೊಳ್ಳಬಾರದು. ಅದು ನೀವು ಕೈಕೊಳ್ಳುತ್ತಿರುವ ಮಹತ್ವದ್ದಾದ ಏನೋ ಒಂದು, ಅದು ನಿಮಗೆ ಸಂತೋಷ ನೀಡುತ್ತದೆ. "ನಾನದನ್ನು ಕೈಕೊಳ್ಳುತ್ತಿದ್ದೇನೆ, ಏಕೆಂದರೆ ಅದು ನನಗೆ ಸಂತೋಷ ಕೊಡುತ್ತದೆ," ಆದರೆ ಯೋಗವನ್ನು ಕುರಿತು ಮಾತನಾಡುವುದು ಬೇಡ. ನೀವು ಕೈಕೊಳ್ಳುತ್ತಿರುವುದು ಯೋಗವಲ್ಲ. ಶ್ರೇಷ್ಠವಾದ ಏನನ್ನೋ ಕೈಕೊಳ್ಳುತ್ತಿದ್ದೇನೆ ಎಂದು ನೀವು ನಂಬುತ್ತೀರಿ, ಅಷ್ಟೇ, ಅದು ನಿಮ್ಮ ವೈಯಕ್ತಿಕ ಸಂತೋಷಕ್ಕಾಗಿರುತ್ತದೆ.

**CWM, 5/14–16** **– ಶ್ರೀಮಾತೆ**

*

**ಪ್ರಶ್ನೆ:** *ಮನುಷ್ಯ ತಾನು ಹಣವನ್ನು ಉಪಯೋಗಿಸುವ ರೀತಿ ದೈವೀ ಸಂಕಲ್ಪಕ್ಕೆ ಅನುಗುಣವಾಗಿ ಇದೆ ಎಂಬುದನ್ನು ಹೇಗೆ ತಿಳಿದುಕೊಳ್ಳಬಲ್ಲ?*

**ಶ್ರೀಮಾತೆ:** ಮೊಟ್ಟಮೊದಲಿಗೆ ದೈವೀ ಸಂಕಲ್ಪ ಎಂದರೆ ಏನು ಎಂಬುದನ್ನು ಮನುಷ್ಯ ತಿಳಿದುಕೊಳ್ಳಬೇಕು. ಆದರೆ ಹೆಚ್ಚು ನಿಶ್ಚಿತವಾದ ಮಾರ್ಗವೊಂದಿದೆ.–

ಹಣವನ್ನು ದೈವೀ ಕಾರ್ಯಕ್ಕಾಗಿ ಸಮರ್ಪಣ ಮಾಡುವುದಾಗಿದೆ. ಮನುಷ್ಯ ತನ್ನಲ್ಲಿ ನಿಶ್ಚಿತತೆ ಹೊಂದಿರದೆ ಇದ್ದರೆ "ದೈವಿಕವಾಗಿ" ಎಂಬುದರ ಅರ್ಥ ಭಗವಂತನ ಸೇವೆಗಾಗಿ ಎಂದಿರುತ್ತದೆ.– ಅದರರ್ಥ ಹಣವನ್ನು ತನ್ನದೇ ಸಂತೋಷಕ್ಕಾಗಿ ಉಪಯೋಗ ಮಾಡಬಾರದು, ಆದರೆ ಅದನ್ನು ಭಗವಂತನ ಸೇವೆಗಾಗಿ ತೆಗೆದಿರಿಸಬೇಕು.

**CWM, 4/374** **– ಶ್ರೀಮಾತೆ**

*

## ಹಣದ ಶಕ್ತಿಯನ್ನು ನಿರ್ವಹಿಸುವುದು

### ಹಣ ಚಲಾವಣೆಗಾಗಿ ಇದೆ

ಖರ್ಚು ಮಾಡುವವನಿಗೆ ಹಣ ಸೇರಿರುತ್ತದೆ, ಅದು ಪರಿಪೂರ್ಣ ರೀತಿಯ ನಿಯಮ. ನೀವು ಹಣವನ್ನು ಶೇಖರಿಸಿ ಇಡಬಹುದು, ಆದರೆ ಅದನ್ನು ಖರ್ಚು ಮಾಡುವವರೆಗೆ ಅದು ನಿಮಗೆ ಸೇರಿದ್ದಾಗಿರುವುದಿಲ್ಲ. ಖರ್ಚು ಮಾಡಿದಾಗ ಯೋಗ್ಯತೆ, ಕೀರ್ತಿ, ಸಂತೋಷ, ಅದನ್ನು ಖರ್ಚು ಮಾಡುವುದರಲ್ಲಿರುವ ಹರ್ಷ ಇವೆಲ್ಲ ಇರುತ್ತವೆ.

ಹಣ ಚಲಾವಣೆಗಾಗಿ ಇದೆ. ಪೃಥ್ವಿಯ ಮೇಲಿನ ಉತ್ಪಾದನೆಯಲ್ಲಿ ಹೆಚ್ಚಾಗುವಿಕೆಯ ಪ್ರಗತಿಪರ ಚಲನೆ ಸತತ ಉಳಿದುಕೊಳ್ಳಬೇಕು– ಪೃಥ್ವಿಯ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಅಸ್ತಿತ್ವವನ್ನು ಸುಧಾರಿಸಲು ಎಂದೆಂದಿಗೂ ವಿಸ್ತರಿಸಿಕೊಳ್ಳುವ ಪ್ರಗತಿಪರ ಚಲನೆಯಿರಬೇಕು. ಅದು ಪೃಥ್ವಿಯ ಮೇಲಿನ ಜೀವನದ ಭೌತಿಕ ಸುಧಾರಣೆ ಮತ್ತು ಪೃಥ್ವಿಯ ಉತ್ಪಾದನೆಯ ಬೆಳವಣಿಗೆ ಇವು ವಿಸ್ತರಿಸಿಕೊಂಡು ಹೋಗುವುದಾಗಿದೆ. ಅದು ಸಂಗ್ರಹಿಸಿದ ಈ ನಿರರ್ಥಕ ಹಾಳೆ ಇಲ್ಲವೆ ನಿರ್ಜೀವ ಜಡ ಲೋಹ ಇವುಗಳ ಸಂಚಯವಲ್ಲ.

ಹಣವನ್ನು ಉತ್ಪಾದಿಸುವುದಕ್ಕಾಗಿ ಹಣವಿರುವುದಿಲ್ಲ. ಹಣ ಉತ್ಪಾದನೆಯಲ್ಲಿ ಹೆಚ್ಚಳವನ್ನುಂಟು ಮಾಡಬೇಕು, ಜೀವನದ ಸ್ಥಿತಿಯಲ್ಲಿ ಸುಧಾರಣೆ ತರಬೇಕು. ಇದು ನಿಜವಾದ ಉಪಯೋಗ. ನಾನು ಪ್ರಜ್ಞೆಯಲ್ಲಿ ಸುಧಾರಣೆ, ಪ್ರಜ್ಞೆಯಲ್ಲಿ ಪ್ರಗತಿ ಎಂದು ಕರೆಯುವುದು, ಶಿಕ್ಷಣ ಅದರ ಎಲ್ಲ ರೂಪಗಳಲ್ಲಿ ಕೊಡಬಹುದಾದ ಪ್ರತಿಯೊಂದೂ ಆಗಿದೆ– ಸರ್ವಸಾಧಾರಣವಾಗಿ ತಿಳಿದುಕೊಂಡ ರೀತಿಯದಲ್ಲ, ಆದರೆ ನಾವು ಇಲ್ಲಿ

ತಿಳಿದುಕೊಂಡ ರೀತಿಯದಾಗಿದೆ: ಕಲಾಕೌಶಲದ ಶಿಕ್ಷಣ, ದೈಹಿಕ ಶಿಕ್ಷಣ, ಅತ್ಯಂತ ಭೌತಿಕವಾದುದರಲ್ಲಿ ಪ್ರಗತಿ ಸಾಧಿಸುವುದಕ್ಕೆ ಶಿಕ್ಷಣ ಇವೆಲ್ಲವುಗಳೊಂದಿಗೆ ಆಧ್ಯಾತ್ಮಿಕ ಶಿಕ್ಷಣ, ಯೋಗದ ಮೂಲಕ ಪ್ರಗತಿ ಸಾಧಿಸುವುದು ಇದೆಲ್ಲ ಇರುತ್ತದೆ; ಕಾಮನ ಬಿಲ್ಲಿನಲ್ಲಿ ಇರುವಂತಹ ಬಣ್ಣಗಳ ಪಟ್ಟಿಯಂತೆ ಎಲ್ಲವೂ, ಮನುಕುಲವನ್ನು ಭವಿಷ್ಯತ್ತಿನ ಸಿದ್ಧಿಯತ್ತ ಕರೆದೊಯ್ಯುವ ಪ್ರತಿಯೊಂದೂ ಇರುವುದಾಗಿದೆ. ಹಣ ಅದನ್ನು ಹೆಚ್ಚಿಸುವುದಕ್ಕೆ ಮತ್ತು ಪೃಥ್ವಿಯ ಪ್ರಗತಿಗಾಗಿ ಭೌತಿಕ ಆಧಾರವನ್ನು ವೃದ್ಧಿಪಡಿಸುವುದಕ್ಕೆ, ಪೃಥ್ವಿ ಕೊಡಬಹುದಾದ ಅತ್ಯಂತ ಒಳ್ಳೆಯ ಉಪಯೋಗಕ್ಕೆ– ಅದರ ಬೌದ್ಧಿಕ ಉಪಯೋಗಕ್ಕೆ ಸೇವೆ ಸಲ್ಲಿಸಬೇಕು, ಆದರೆ ಚೈತನ್ಯಗಳನ್ನು ಕಳೆದುಕೊಳ್ಳುವ ಹಾಗೂ ಹಾಳು ಮಾಡುವ ಉಪಯೋಗಕ್ಕಲ್ಲ. ಚೈತನ್ಯಗಳನ್ನು ಮತ್ತೆ ತುಂಬುವ ಉಪಯೋಗವಿರಬೇಕು.

*

**ಹಣ ಒಂದು ಸಾಧನ, ಅದೇ ಗುರಿಯಲ್ಲ**

ಈ ರೀತಿಯಲ್ಲಿ ಹಣವನ್ನು ಉಪಯೋಗಿಸಬೇಕೆಂದು ತಿಳಿದುಕೊಂಡ ಜನರ ಸಂಖ್ಯೆ ಎಷ್ಟಿದೆ? ಅದು ಅತಿ ಕಡಿಮೆ, ಆ ಕಾರಣದಿಂದಾಗಿ ಅವರಿಗೆ ಕಲಿಸಿಕೊಡ–ಬೇಕಾಗಿದೆ. ಕಲಿಸಿಕೊಡುವುದು ಎಂದು ನಾನು ಕರೆಯುವುದು ತೋರಿಸಿಕೊಡು–ವುದಾಗಿದೆ, ಉದಾಹರಣೆಯೊಂದನ್ನು ಕೊಡುವುದಾಗಿದೆ. ಜಗತ್ತಿನಲ್ಲಿ ನಿಜವಾದ ಜೀವನವನ್ನು ನಡೆಸುವುದಕ್ಕೆ ನಾವು ಒಂದು ಉದಾಹರಣೆಯಾಗಬೇಕಾಗಿದೆ. ಅದು ಆಯವ್ಯಯದ ಇಡೀ ಜಗತ್ತಿನೆದುರು ಸವಾಲೊಂದನ್ನು ಇರಿಸುವುದಾಗಿದೆ: ಅವರಿಗೆ ನಾನು ಹೇಳುತ್ತಿರುವುದೇನೆಂದರೆ ಅವರು ಕುಂದುತ್ತಿರುವ ವಿಧಾನದಲ್ಲಿದ್ದಾರೆ ಮತ್ತು ಪೃಥ್ವಿಯನ್ನು ತಮ್ಮ ಹೆಡ್ಡತನದ ವಿಧಾನದಿಂದ ಹಾಳುಮಾಡುತ್ತಿದ್ದಾರೆ ಮತ್ತು ಅವರು ಈಗ ನಿರುಪಯುಕ್ತ ವಿಷಯಗಳಿಗೆ ಮಾಡುವ ಖರ್ಚು ಕೇವಲ ಅಂತರ್ನಿಹಿತ ಜೀವನವಿಲ್ಲದ ಏನೋ ಒಂದನ್ನು ಹಿಗ್ಗಿಸುವುದಕ್ಕಾಗುತ್ತದೆ, ಅದು ಜೀವನದ ಸೇವೆಗಾಗಿ ಒಂದು ಉಪಕರಣ ಮಾತ್ರವಾಗಬೇಕು, ಅದರಲ್ಲಿಯೇ ಯಾವ ನೈಜತೆಯೂ ಇಲ್ಲ, ಅದೊಂದು ಸಾಧನ, ಗುರಿಯಲ್ಲ (ಕೇವಲ ಸಾಧನವಾಗಿರು–ವುದನ್ನು ಅವರು ಗುರಿಯನ್ನಾಗಿ ಮಾಡುತ್ತಿದ್ದಾರೆ)– ಸರಿ, ಅದನ್ನು ಗುರಿಯನ್ನಾಗಿ ಮಾಡುವುದರ ಬದಲಾಗಿ ಅವರು ಅದನ್ನು ಸಾಧನವನ್ನಾಗಿ ಮಾಡಬೇಕು. ಅವರಲ್ಲಿರುವುದರ ವಿನಿಯೋಗದಿಂದ ಪೃಥ್ವಿಯನ್ನು ಎಷ್ಟೊಂದು ತೀವ್ರಗತಿಯಲ್ಲಿ

ಪರಿವರ್ತಿಸಬಹುದು ಹಾಗೂ ನಿಜವಾದ ಅತಿಮಾನಸ ಶಕ್ತಿಗಳ ಸಂಪರ್ಕದಲ್ಲಿರಿಸ–ಬಹುದು, ಅವು ಜೀವನವನ್ನು ಸುಂದರವಾದದ್ದನ್ನಾಗಿ ಮಾಡಬಲ್ಲವು. – ಇದನ್ನು ಕುಂದಿಹೋಗುವುದರ, ನಿಂತ ಸ್ಥಿತಿಯಲ್ಲಿರುವುದರ ಹಾಗೂ ಕುಗ್ಗಿಹೋಗುವುದರ ಬದಲಾಗಿ, ಭವಿಷ್ಯತ್ತಿನ ಮೃತ ಚಂದ್ರನಾಗುವುದರ ಬದಲಾಗಿ ತಂದುಕೊಳ್ಳ–ಬಹುದು.

**ಅನುಯಾಯಿಯೊಂದಿಗೆ ಮಾತುಕತೆ: ಅಕ್ಟೋಬರ 4, 1958 – ಶ್ರೀಮಾತೆ**

*

**ಕಪ್ಪು ಹಣ ಶಾಂತಿಯನ್ನು ತೆಗೆದುಕೊಂಡು ಹೋಗುತ್ತದೆ, ಅಸ್ವಸ್ಥತೆಯನ್ನು ತರುತ್ತದೆ**

(ಶ್ರೀಮಾತೆಯವರು ನಗುತ್ತಾರೆ) ಹಣವನ್ನು ತಮ್ಮ ಗೋಡೆಗಳಲ್ಲಿ ಮುಚ್ಚಿಡುವ ಜನರಿದ್ದಾರೆ (ಹಾಳೆಗಳಿಂದ ಇಲ್ಲವೆ ಪರದೆಗಳಿಂದ). ಅಲ್ಲಿ ಸಂಪತ್ತಿದೆ, ಅನೇಕ ಕೋಟಿ ರೂಪಾಯಿಗಳಷ್ಟು ಸಂಪತ್ತಿದೆ, ಲಕ್ಷಾನುಗಟ್ಟಲೆ ಹಣವನ್ನು ಗೋಡೆಗಳಲ್ಲಿ ಮುಚ್ಚಿ ಹಾಕಲಾಗಿರುತ್ತದೆ! ನಂತರ ಅವರು ತಮ್ಮನ್ನು ಚಿಂತೆಗೀಡುಮಾಡುತ್ತಾರೆ, ಪೋಲಿಸರ ದಾಳಿಯಾಗಬಹುದೆಂಬ ಭಯ ಸತತ ಅವರಲ್ಲಿರುತ್ತದೆ, ಅದು ಹಾಗಿರುವಾಗ ಅವರು ಆ ಹಣವನ್ನು ಕೊಟ್ಟುಬಿಟ್ಟಿದ್ದರೆ ಅವರು ಬಹಳ ಮರ್ಯಾದಸ್ಥ ಜನರಾಗುತ್ತಿದ್ದರು! ಅವರಿಗೆ ಇನ್ನು ಮುಂದೆ ಹೆದರಿಕೆ ಇರುತ್ತಿರಲಿಲ್ಲ, ಅವರಿಗೆ ಶಾಂತ ಜೀವನ ದೊರಕುತ್ತಿತ್ತು.

ಅದಕ್ಕೂ ಹೆಚ್ಚಾಗಿ ಸ್ವಾರಸ್ಯಕರವಾಗಿರುವ ಸಂಗತಿ ಎಂದರೆ (ಅದಕ್ಕೆ ಇಲ್ಲಿಯವರೆಗೆ ಅಪವಾದ ಕಂಡುಬಂದಿಲ್ಲ) ನನಗೆ ಹಣ ನೀಡಲು ಅವಕಾಶ ಕಂಡುಕೊಂಡ ಜನರು (ಅವರಿಗೆ ಕೊಡುವುದು ಬೇಕಾಗಿರಲಿಲ್ಲ, ಅವರು ತಮ್ಮ ಹಣಕ್ಕೆ ಅಂಟಿಕೊಂಡಿದ್ದರು) ಕೊಡದೇ ಇದ್ದಾಗ ಅದನ್ನು ಕಳೆದುಕೊಂಡರು. ಸರಕಾರ ಅವರಿಂದ ತೆಗೆದುಕೊಂಡಿತ್ತು. ಆಯವ್ಯಯದಲ್ಲಿ ಇಲ್ಲವೆ ಉದ್ಯಮಕ್ಕೆ ಸಂಬಂಧಿಸಿದುದರಲ್ಲಿ ಅನಾಹುತ ಉಂಟಾಗಿತ್ತು, ಇಲ್ಲವೆ ಸರಳವಾಗಿ ಕಳ್ಳರ ಕೈಸೇರಿತ್ತು.

**ಅನುಯಾಯಿಯೊಂದಿಗೆ ಮಾತುಕತೆ: ಸಪ್ಟಂಬರ 7, 1966 – ಶ್ರೀಮಾತೆ**

*

**ಹಣ ಕ್ರಿಯೆಗಾಗಿ ಇದೆ, ಒಡೆತನಕ್ಕಲ್ಲ**

ಆದರೆ ಸಂಘರ್ಷ "ವಿರೋಧೀ ಯಜಮಾನರು" ಎಂದು ನಾವು ಕರೆಯುವುದರಲ್ಲಿದೆ. ಸತ್ಯ ಏನೆಂದರೆ ಹಣ ಯಾರಿಗೂ ಸೇರಿರುವುದಿಲ್ಲ. ಹಣದ "ಒಡೆತನ" ಎಂಬುದರ ವಿಚಾರ ಪ್ರತಿಯೊಂದನ್ನೂ ವಿಕೃತಗೊಳಿಸಿದೆ. ಹಣ ಒಂದು ಒಡೆತನದ್ದಲ್ಲ, ಅದು ಕ್ರಿಯೆಯ ಸಾಧನ, ಅದನ್ನು ನಿಮಗೆ ಒಂದು ಸಾಮರ್ಥ್ಯದ ರೂಪದಲ್ಲಿ ಕೊಡಲಾಗಿದೆ, ಅದನ್ನು ನೀವು ಉಪಯೋಗ ಮಾಡಬೇಕಾದುದು "ದಾನಿಯ ಸಂಕಲ್ಪ" ಎಂದು ನಾವು ಕರೆಯಬಹುದಾದುರ ಹಾಗೆ, ಎಂದರೆ ಅವೈಯಕ್ತಿಕವಾಗಿ ಮತ್ತು ಮುನ್ನರಿವಿನೊಂದಿಗೆ ಮಾಡಬೇಕು. ಹಣದ ವಿಸ್ತರಣೆಯಲ್ಲಿ ಹಾಗೂ ಅದರ ಉಪಯೋಗದಲ್ಲಿ ನೀವು ಒಳ್ಳೆಯ ಉಪಕರಣ–ವಾಗಿದ್ದರೆ ಅದು ನಿಮ್ಮ ಬಳಿ ಬರುತ್ತದೆ, ಮತ್ತು ಅದನ್ನು ಸರಿಯಾಗಿ ಉಪಯೋಗ ಮಾಡುವ ನಿಮ್ಮ ಕ್ಷಮತೆಯ ಪರಿಣಾಮಕ್ಕನುಸರಿಸಿ ಅದು ಬರುತ್ತದೆ. ಅದೇ ನಿಜವಾದ ಕಾರ್ಯಗತಿ. . . .

ನಿಜವಾದ ಮನೋಭಾವ ಇರಬೇಕಾದುದು ಹೀಗೆ: ಹಣ ವಿಶ್ವಂಭರ ಶಕ್ತಿ, ಅದು ಪೃಥ್ವಿಯ ಮೇಲೆ ಕಾರ್ಯ ಕೈಕೊಳ್ಳುವುದಕ್ಕಾಗಿ ಇದೆ, ಆ ಕಾರ್ಯ ದೈವೀ ಶಕ್ತಿಗಳನ್ನು ಸ್ವೀಕರಿಸುವುದಕ್ಕಾಗಿ ಹಾಗೂ ಪ್ರಕಟಿಸುವುದಕ್ಕಾಗಿ ಪೃಥ್ವಿಯನ್ನು ತಯಾರು ಮಾಡುವುದಕ್ಕಾಗಿ ಇದೆ. ಮತ್ತು ಅದು (ಉಪಯೋಗ ಮಾಡುವ ಸಾಮರ್ಥ್ಯ) ಸ್ಪಷ್ಟ ದೃಷ್ಟಿ ಇರುವವರ, ಅತ್ಯಂತ ಸರ್ವಸಾಧಾರಣ ಹಾಗೂ ಅತ್ಯಂತ ನಿಜವಾದ ದೃಷ್ಟಿ ಇದ್ದವರ ಕೈಗಳಲ್ಲಿ ಬರಬೇಕು.

ಮೊದಲನೆಯ ವಿಷಯ, ಪ್ರಾರಂಭದೊಂದಿಗೆ (ಇದು ಪ್ರಾಥಮಿಕ ಸ್ವರೂಪದ್ದು) ಇರಬೇಕಾದುದು: ಒಡೆತನದ ಅರ್ಥವನ್ನು ಹೊಂದಿರದೇ ಇರುವುದಾಗಿದೆ. – "ಇದು ನನ್ನದು" ಇದರರ್ಥವೇನು? ಅದು ನನಗೆ ಈಗ ಅರ್ಥವಾಗುತ್ತಿಲ್ಲ. ಜನರು ಅದು ತಮ್ಮದಾಗಿರಲಿ ಎಂದು ಬಯಸುತ್ತಾರೆ? ತಾವು ಬಯಸಿದ ಹಾಗೆ ಉಪಯೋಗ ಮಾಡುವುದಕ್ಕೆ, ಬಯಸಿದ್ದನ್ನು ಕೈಕೊಳ್ಳುವುದಕ್ಕೆ, ತಮ್ಮದೇ ವಿಚಾರದ ಪ್ರಕಾರ ಅದರ ಮೇಲೆ ಹಿಡಿತ ಸಾಧಿಸುವುದಕ್ಕೆ ಹಾಗೆ ಬಯಸುತ್ತಾರೆ. ಅದಿರುವುದು ಹಾಗೆ. ಹಾಗಿರದಿದ್ದರೆ, ಹೌದು, ಅವರು ಹಣದ ರೂಪದಲ್ಲಿ ಶೇಖರಿಸಿಡಲು, ಅದರ ಗುಡ್ಡೆ ಹಾಕಲು ಬಯಸುತ್ತಾರೆ. ಮನುಷ್ಯ 'ಸ್ವೀಕರಿಸುವ ಹಾಗೂ ಕಳಿಸಿಕೊಡುವ ಯಂತ್ರ'ದ ಹಾಗಿರಬೇಕು ಎಂದು ಜನರು

ತಿಳಿದುಕೊಂಡರೆ, ಆ ಯಂತ್ರ ಹೆಚ್ಚು ವಿಸ್ತಾರವುಳ್ಳದ್ದಾಗುತ್ತದೆ (ವ್ಯಕ್ತಿಗತವಾದುದಕ್ಕೆ ವಿರುದ್ಧವಾದ ರೀತಿಯಲ್ಲಿ), ಹೆಚ್ಚು ಅವೈಯಕ್ತಿಕ ಹಾಗೂ ಉದಾರವಾದಂತೆ ಆ ಯಂತ್ರ ವಿಸ್ತಾರಗೊಳ್ಳುತ್ತದೆ, ಮತ್ತು ಅದು ಹೆಚ್ಚಿನ ಶಕ್ತಿಗಳನ್ನು ಒಳಗೊಳ್ಳುತ್ತದೆ ("ಶಕ್ತಿಗಳು" ಎಂಬುದನ್ನು ಭೌತಿಕವಾಗಿ ತರ್ಜುಮೆ ಮಾಡಿದಾಗ ಅದು ಬ್ಯಾಂಕಿನ ನೋಟುಗಳು ಇಲ್ಲವೆ ಹಣ ಎಂದಾಗುತ್ತದೆ.) ಒಳಗೊಳ್ಳುವ ಸಾಮರ್ಥ್ಯ ಉಪಯೋಗ ಮಾಡುವ ಅತ್ಯಂತ ಒಳ್ಳೆಯ ಕ್ಷಮತೆಯ ಪರಿಮಾಣದಲ್ಲಿರುತ್ತದೆ – ಅತ್ಯಂತ ಒಳ್ಳೆಯದು, ಎಂದರೆ ಸಾರ್ವತ್ರಿಕ ಪ್ರಗತಿ ಕುರಿತು ಅತ್ಯಂತ ಒಳ್ಳೆಯದು: ಅತ್ಯಂತ ವಿಸ್ತಾರವಾದ ದೃಷ್ಟಿಯುಳ್ಳದ್ದು ಹಾಗೂ ತಿಳಿವಳಿಕೆಯುಳ್ಳದ್ದು, ಅತ್ಯಂತ ಜ್ಞಾನೋದಯ ಪಡೆದದ್ದು, ನಿಖರವಾದದ್ದು, ನಿಜವಾದ ಉಪಯುಕ್ತತೆಯದು, ಅಹಂಕಾರದ ಮಿಥ್ಯೆಗೊಳಪಡಿಸಿದ ಆವಶ್ಯಕತೆಗಳಿಗನುಗುಣವಾಗಿ ಅಲ್ಲ, ಆದರೆ ಪೃಥ್ವಿಯ ಸರ್ವಸಾಧಾರಣ ಆವಶ್ಯಕತೆಗೆ ಅನುಗುಣವಾದದ್ದು, ಆ ಆವಶ್ಯಕತೆ ಅದರ ಉತ್ಕ್ರಾಂತಿಯಲ್ಲಿ ಹಾಗೂ ಅಭಿವೃದ್ಧಿಯಲ್ಲಿಯದಾಗಿರುತ್ತದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅತ್ಯಂತ ವಿಶಾಲವಾದ ದೃಷ್ಟಿ ಅತ್ಯಂತ ವಿಶಾಲವಾದ ಕ್ಷಮತೆ–ಯನ್ನು ಹೊಂದಿರಬೇಕು.

*

**ಕೂಡಿಟ್ಟುಕೊಳ್ಳುವುದು ಹಾಗೂ ಖರ್ಚುಮಾಡುವುದು**

ಎಲ್ಲ ಚಲನೆಗಳ ಹಿಂದೆ ನಿಜವಾದದ್ದೊಂದಿದೆ: ಹಾಳಾಗುವುದನ್ನು ಕನಿಷ್ಠ ಪ್ರಮಾಣಕ್ಕಿಳಿಸುವಂತೆ, ಗರಿಷ್ಠ ಪರಿಣಾಮಗಳನ್ನು ಹೊಂದುವಂತೆ ನಿರ್ದೇಶನ ಮಾಡಲು, ಉಪಯೋಗಿಸಲು, ವಿಷಯಗಳನ್ನು ಸಂಘಟಿಸಲು ಶಕ್ತನಾಗುವುದರಲ್ಲಿ ಸಂತೋಷವಿರುತ್ತದೆ. (ಅದು ಹೊಂದಬಹುದಾದ ಬಹಳ ಸ್ವಾರಸ್ವಕರ ದೃಷ್ಟಿ.) ಕೂಡಿಡುವುದನ್ನು ಬಯಸುವವರಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಉಪಯೋಗ ಮಾಡಲು ಶಕ್ತರಾದವರು ನಿಜವಾದ ಬದಿಯಲ್ಲಿರುತ್ತಾರೆ.

ಗುಡ್ಡೆಗಟ್ಟುವಷ್ಟು ಕಾಗದಗಳನ್ನು ಒಂದು ಡಬ್ಬಿಯಲ್ಲಿ ಇಲ್ಲವೆ ತನ್ನ ಗೋಡೆಯಲ್ಲಿ ಇಟ್ಟುಕೊಳ್ಳುವ ಮನುಷ್ಯ ಎಂತಹ ಸಂತೋಷ ಕಂಡುಕೊಳ್ಳುತ್ತಾನೆ ಎಂಬುದನ್ನು ನೀವು ಹೇಳಬಲ್ಲಿರಾ? ಜಿಪುಣನೊಬ್ಬ ಹೋಗಿ ತನ್ನ ಡಬ್ಬಿಯನ್ನು ತೆರೆದು ಅದರೊಳಗೆ ಹಣಿಕಿಕ್ಕಿ ಪಡುವ ಸಂತೋಷ – ಅದೇನೂ ಬಹಳ ದೊಡ್ಡದಲ್ಲ. ಕೆಲವು ಜನರು ಖರ್ಚುಮಾಡಲು ಇಷ್ಟಪಡುತ್ತಾರೆ, ಅವರು ಹಣದ

ಮೇಲೆ ಒಡೆತನ ಪಡೆಯುತ್ತಾರೆ, ಹಾಗೂ ಖರ್ಚು ಮಾಡುತ್ತಾರೆ, ಅದು ಭಿನ್ನ ವಿಷಯ, ಅವರದು ಉದಾರ ಸ್ವಭಾವ, ಆದರೆ ಕ್ರಮಬದ್ಧವಾದದ್ದಲ್ಲ, ಸಂಘಟಿತ–ವಾದದ್ದಲ್ಲ, ಆದರೆ ಎಲ್ಲ ಆವಶ್ಯಕತೆಗಳು ಶಕ್ತವಾಗುವಂತೆ ಮಾಡುವುದು, ಎಲ್ಲ ಅನಿವಾರ್ಯತತೆಗಳು ಅಭಿವ್ಯಕ್ತಿಗೊಳ್ಳುವಂತೆ ಮಾಡುವುದು – ಅದು ಒಳ್ಳೆಯದು. ಅದು ಅಸ್ವಸ್ಥತೆಯನ್ನು ಒಳ್ಳೆಯ ಆರೋಗ್ಯವಾಗುವಂತೆ, ಮಿಥ್ಯೆಯೊಂದನ್ನು ಸತ್ಯವಾಗುವಂತೆ, ವೇದನೆಯನ್ನು ಸಂತೋಷವನ್ನಾಗಿ ಹೊರಳಿಸಿದಾಗ ಬರುವ ಸಂತೋಷದಂತಿರುತ್ತದೆ. ಅದು ಅದೇ ವಿಷಯ. ಸ್ವಾಭಾವಿಕವಾಗಿರುವ ಯಾವ ವಿಷಯಕ್ಕೂ ಅನುಗುಣವಾಗಿರದ ಕೃತ್ರಿಮ ಹಾಗೂ ಹೆಡ್ಡತನದ ಆವಶ್ಯಕತೆಯನ್ನು ಬಹಳ ಸ್ವಾಭಾವಿಕವಾಗಿರುವ ಏನೋ ಒಂದಾಗುವ ಸಾಧ್ಯತೆಯಾಗುವಂತೆ ಮಾಡುವುದಾಗಿದೆ. ಅವಶ್ಯವಾಗಿ ಇದನ್ನು ಮತ್ತು ಅದನ್ನು ಇಷ್ಟೊಂದು ಹಣದ ಆವಶ್ಯಕತೆ, ಇಲ್ಲಿ ಸರಿಪಡಿಸುವುದಕ್ಕೆ, ಅಲ್ಲಿ ರಿಪೇರಿ ಮಾಡುವುದಕ್ಕೆ, ಇಲ್ಲಿ ನಿರ್ಮಾಣ ಮಾಡುವುದಕ್ಕೆ, ಅಲ್ಲಿ ಸಂಘಟಿಸುವುದಕ್ಕೆ – ಅದು ಒಳ್ಳೆಯದು. ಅದಕ್ಕಾಗಿ ಹಣ ಕಳಿಸಿಕೊಡುವವನು ಹಾಗೂ ಅವಶ್ಯವಿದ್ದಲ್ಲಿ ಹಣ ತರುವವನು ತನ್ನ ಕಾರ್ಯದಲ್ಲಿ ಸಂತೋಷ ಕಂಡುಕೊಳ್ಳುತ್ತಾನೆ ಎಂಬುದು ನನಗೆ ಅರ್ಥವಾಗುತ್ತದೆ. ಅದು ಅದರಲ್ಲಿ ಸಂತೋಷ ಪಡುವವರ ಹಾಗೂ ಹಣ ಸಂಗ್ರಹಿಸುವವರ ನಿಜವಾದ ಚಲನೆಯಾಗಿರಬೇಕು. (ಅದು ಹೆಡ್ಡತನದ ಸ್ವಾರ್ಥದಿಂದ ಕೂಡಿರಬಾರದು.)

ಹಣ ಸಂಗ್ರಹಿಸುವ ಆವಶ್ಯಕತೆ ಹಾಗೂ ಖರ್ಚುಮಾಡುವ ಆವಶ್ಯಕತೆ (ಇವೆರಡರಲ್ಲಿ ಪ್ರತಿಯೊಂದೂ ಅಜ್ಞಾನದ್ದು ಹಾಗೂ ಕುರುಡಾದದ್ದು) ಇವೆರಡನ್ನು ಸಂಯೋಜಿಸಿದಾಗ ಅದು ಸ್ಪಷ್ಟ ದೃಷ್ಟಿ, ಸಾಧ್ಯವಾಗುವಷ್ಟು ಉಪಯುಕ್ತತೆ ಹೊಂದಿರುವಂತೆ ಉಪಯೋಗ ಮಾಡುವುದು, ಸಾಧ್ಯವಾಗುವಂತೆ ಮಾಡುವುದು. ಅದು ಒಳ್ಳೆಯದು.

ಹಾಗಾಗಿ ಅಲ್ಲಿ ಅದನ್ನು ಆಚರಣೆಯಲ್ಲಿ ತರುವ ಸಾಧ್ಯತೆ ನಿಧಾನಗತಿಯಿಂದ ಬರುತ್ತದೆ.

*

**ಔದಾರ್ಯ**

ಗುಣ ಇಲ್ಲವೆ ದೋಷ ಎಂದು ನೀವು ಕರೆಯುವುದು ಯಾವಾಗಲೂ ಏನೋ ಒಂದು ವಿರೂಪಗೊಳ್ಳುವುದಾಗಿರುತ್ತದೆ, ಆ ಏನೋ ಒಂದು ಅವುಗಳ ಹಿಂದೆ

ಇರುತ್ತದೆ, ಅದು ಇದೂ ಅಲ್ಲ ಅದೂ ಅಲ್ಲ ಆದರೆ ಬೇರೆ ಏನೋ ಒಂದಾಗಿರುತ್ತದೆ. ಅಷ್ಟೇ ಅಲ್ಲ ಔದಾರ್ಯದ ಹಿಂದೆ ಯಾವ ಸತ್ಯವಿದೆ ಎಂಬುದನ್ನು ನಾನು ಹೇಳುತ್ತೇನೆ: ಅದು ಹರಡಿಕೊಳ್ಳುತ್ತಿರುವ ಶಕ್ತಿಗಳ ಚಲನೆ. ಈ ಶಕ್ತಿಗಳು ಹರಡಿಕೊಳ್ಳುವುದಕ್ಕಾಗಿ ಮೊದಲು ಏಕತ್ರಗೊಳ್ಳಬೇಕು, ನಂತರ ಹರಡಿಕೊಳ್ಳುತ್ತವೆ, ಅವು ಮತ್ತೆ ಏಕತ್ರಗೊಳ್ಳುತ್ತವೆ ಹಾಗೂ ಮತ್ತೆ ಹರಡಿಕೊಳ್ಳುತ್ತವೆ, ಅದು ಲಯಬದ್ಧವಾಗಿ ಹಿಗ್ಗುವಿಕೆ ಹಾಗೂ ಕುಗ್ಗುವಿಕೆ ಇವುಗಳ ಚಲನೆಯ ರೂಪದ್ದಾಗಿರುತ್ತದೆ. ಆದರೆ ನೀವು ಎಂದಿಗೂ ಏಕತ್ರಗೊಳಿಸದೆ, ಕೇವಲ ಹರಡಿಕೊಳ್ಳುತ್ತಿದ್ದರೆ ಕೆಲ ಸಮಯದ ನಂತರ ಹರಡಲು ನಿಮ್ಮಲ್ಲಿ ಏನೂ ಉಳಿದಿರುವುದಿಲ್ಲ. ಎಲ್ಲ ಶಕ್ತಿಗಳನ್ನು ಕುರಿತು ವಿಷಯ ಅದೇ ಆಗಿದೆ. ನಾನು ಬರೆದಿದ್ದೇನೆ ಅಲ್ಲದೆ (ಅದಕ್ಕೂ ಹೆಚ್ಚಾಗಿ ಒಮ್ಮೆ ನಾನು ಬರೆಯಲಿರುವೆ), ಹಣ ಒಂದು ಶಕ್ತಿ, ಅದು ಶಕ್ತಿಯಲ್ಲದೆ ಬೇರೇನೂ ಅಲ್ಲ. ಆ ಕಾರಣದಿಂದಾಗಿ ಅದನ್ನು ವೈಯಕ್ತಿಕವಾಗಿ ಹೊಂದುವುದಕ್ಕೆ ಹಕ್ಕಿರುವುದಿಲ್ಲ, ಏಕೆಂದರೆ ಅದು ಕೇವಲ ಶಕ್ತಿ, ಪ್ರಕೃತಿಯಲ್ಲಿರುವ, ವಿಶ್ವದಲ್ಲಿರುವ ಉಳಿದ ಶಕ್ತಿಗಳ ಹಾಗಿದೆ. ಪ್ರಕಾಶ ಒಂದು ಶಕ್ತಿಯಾಗಿದೆ ಎಂದು ನೀವು ಭಾವಿಸಿದರೆ "ನಾನು ಪ್ರಕಾಶವನ್ನು ವಶದಲ್ಲಿಟ್ಟು–ಕೊಂಡಿದ್ದೇನೆ" ಎಂದು ಹೇಳಲು ಯಾರಿಗೂ ಹೊಳೆಯುವುದಿಲ್ಲ. ಮತ್ತು ಅವನು ಅದನ್ನು ಕೋಣೆಯಲ್ಲಿ ಮುಚ್ಚಿಟ್ಟು ಯಾರಿಗೂ ಕೊಡುವುದಿಲ್ಲ ಎಂದು ಹೇಳಲಾರ. ಹಣದೊಂದಿಗೆ ಜನರು ಎಷ್ಟು ಮಂಕುಬಡಿದವರಾಗಿದ್ದಾರೆ ಎಂದರೆ ಅದನ್ನು ತಮ್ಮ ವಶದಲ್ಲಿಟ್ಟುಕೊಳ್ಳಬಹುದು, ಕಾಪಾಡಿಕೊಂಡು ಹೋಗಬಹುದು, ಅದು ತಮಗೆ ಸೇರಿದುದು ಎಂದು ಕಲ್ಪನೆ ಮಾಡಿಕೊಳ್ಳುತ್ತಾರೆ ಮತ್ತು ಅದನ್ನು ವೈಯಕ್ತಿಕವಾದ ಏನೋ ಒಂದನ್ನಾಗಿ ಮಾಡಿಕೊಳ್ಳುತ್ತಾರೆ. ಅದು ನಿಖರವಾಗಿ ಅದೇ ವಿಷಯ. ನಾನು ಕಾಗದ ರೂಪದಲ್ಲಿರುವ ಹಣ ಕುರಿತು ಹೇಳುತ್ತಿಲ್ಲ, ಏಕೆಂದರೆ ಸ್ವಾಭಾವಿಕವಾಗಿ ಅದು ದೀಪವೊಂದರಲ್ಲಿ ನೀವು ಪ್ರಕಾಶ ತುಂಬಿಟ್ಟ ಹಾಗಿರುತ್ತದೆ. ನೀವು ದೀಪದ ಒಡೆಯರಾಗಬಹುದು ಮತ್ತು "ಅದು ನನ್ನ ಬಳಿ ಇರುವ ಪ್ರಕಾಶ" ಎಂದು ಹೇಳಬಹುದು. ನೋಟುಗಳು, ನಾಣ್ಯಗಳು ಇವೆಲ್ಲ ನಿಮ್ಮ ಹಣ. ಅದೆಲ್ಲದರ ಹಿಂದಿರುವ ಶಕ್ತಿ ಇದು, ವಿನಿಮಯದ ಸಾಮರ್ಥ್ಯ – ಅದು ಹಣ. ಅದು ಯಾರೊಬ್ಬರಿಗೆ ಸೇರಿರುವುದಿಲ್ಲ. ಅದು ಪ್ರತಿಯೊಬ್ಬನಿಗೂ ಸೇರಿರುತ್ತದೆ. ಅದು ಚಲಾವಣೆಯಲ್ಲಿ ಇದ್ದಾಗ ಮಾತ್ರ ಜೀವಂತವಿರುತ್ತದೆ. ಅದನ್ನು ಗುಡ್ಡೆಗಟ್ಟಿ ಇಡಲು ಪ್ರಯತ್ನಿಸಿದರೆ ಅದು ಕೊಳೆಯುತ್ತದೆ. ಒಂದು ಪಾತ್ರೆಯಲ್ಲಿ ನೀರನ್ನು

ಹಾಕಿಟ್ಟು ಯಾವಾಗಲೂ ಅದನ್ನು ಕಾಪಾಡಿಕೊಂಡು ಬಂದರೆ ಏನಾಗುವುದೋ ಅದರ ಹಾಗಿದೆ ಇದು. ಕೆಲ ಕಾಲದ ನಂತರ ಆ ನೀರು ಸಂಪೂರ್ಣವಾಗಿ ಕೊಳೆತು ಹೋಗಿರುತ್ತದೆ. ಹಣದೊಂದಿಗೆ ಕೂಡ ಇದೇ ಆಗುತ್ತದೆ. ಅದನ್ನು ಜನರು ಇನ್ನೂ ತಿಳಿದುಕೊಂಡಿಲ್ಲ.

*

**ಹಣಕ್ಕಾಗಿ ದಾಹ**

ಎಲ್ಲ ವಸ್ತುಗಳಿಗಾಗಿರುವ ದಾಹ – ಆಧ್ಯಾತ್ಮಿಕ ವಿಷಯಗಳಿಗಾಗಿಯೂ ಕೂಡ ದಾಹವಿರುತ್ತದೆ. ಜಿಪುಣರಿರುತ್ತಾರೆ, ಅವರು ಎಲ್ಲ ಶಕ್ತಿಗಳನ್ನು ತಮಗಾಗಿ ಕಾಪಾಡಿಕೊಂಡು ಬರಲು ಬಯಸುತ್ತಾರೆ ಮತ್ತು ಅವರು ಅವುಗಳನ್ನು ಎಂದಿಗೂ ಕೊಡುವುದಿಲ್ಲ. ಅದನ್ನು ಕುರಿತು ಇರುವ ಸತ್ಯವನ್ನು ನಿಮಗೆ ಹೇಳಿದ್ದೇನೆ: ಮನುಷ್ಯನಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳುವ ಸಾಮರ್ಥ್ಯವಿರಬೇಕು, ಅದರಿಂದಾಗಿ ಅದನ್ನು ಹರಡಲು ಸಾಮರ್ಥ್ಯ ಬರುತ್ತದೆ. ಇವೆರಡರಲ್ಲಿ ಕೇವಲ ಯಾವುದೊಂ–ದಿದ್ದರೆ ಅದು ಅಸಮತೋಲನವನ್ನುಂಟುಮಾಡುತ್ತದೆ. ಮತ್ತು ಅದು ಆಗ ದಾಹ ಇಲ್ಲವೆ ವ್ಯರ್ಥವಾದದ್ದು ಆಗುತ್ತದೆ. ಮನುಷ್ಯ ಅವೆರಡನ್ನೂ ತೋಲನಕ್ಕೊಳ–ಪಡಿಸಿದ ಲಯಬದ್ಧತೆ ಇರುವ ಚಲನೆಯಲ್ಲಿರಬೇಕು, – ನಾವು ಇದೀಗ ಹೇಳಿದ ಸಮತೋಲನವೇ (equilibrium) ಅದಾಗಿರುತ್ತದೆ. ಏಕೆಂದರೆ ಸದ್ಯ ವಾಸ್ತವದಲ್ಲಿ ಸಮತೋಲನವೇ ನಿಜವಾದ ವಿಷಯವಾಗಿದೆ ಎಂದು ಸುಲಭವಾಗಿ ಸಿದ್ಧ ಮಾಡಬಹುದು: ಮನುಷ್ಯ ಇಲ್ಲಿಯೂ ಇರಬಾರದು ಅಲ್ಲಿಯೂ ಇರಬಾರದು, ಇದನ್ನೇ ಬುದ್ಧ 'ಮಧ್ಯಮಾರ್ಗ' ಎಂದು ಕರೆದ. ಮಧ್ಯಮಾರ್ಗ ಸಮತೋಲನದ ಮಾರ್ಗವಾಗಿರುತ್ತದೆ. ಹಗ್ಗದ ಮೇಲೆ ನಡೆಯುವಾಗ ಕೋಲೊಂದನ್ನು ಹಿಡಿದುಕೊಂಡು ಸಮತೋಲನ ಕಂಡುಕೊಳ್ಳುವ ಹಾಗೆ ಮನುಷ್ಯ ಜೀವನವನ್ನು ಹೇಗೆ ನಿರ್ವಹಿಸಬೇಕೆಂಬುದನ್ನು ತಿಳಿದುಕೊಳ್ಳಬೇಕು. ಆದರೆ ಜಗತ್ತಿನಲ್ಲಿ ಅತ್ಯಂತ ಉದಾರಿಯಾಗಿದ್ದ ಮನುಷ್ಯ ಪ್ರಾರಂಭದಲ್ಲಿ ಕೊಡಲು ಅವನಲ್ಲಿ ಏನೂ ಇಲ್ಲದಿದ್ದರೆ ಏನನ್ನೂ ಕೊಡಲಾರ. ಹಾಗಾಗಿ ಸಂಗ್ರಹಿಸಿದವನು ಅವನಾಗಿರದಿದ್ದರೆ ಅವನಿಗಾಗಿ ಇನ್ನೊಬ್ಬನು ಸಂಗ್ರಹಿಸಿ ಇಟ್ಟಿರಬೇಕು. ಅವನ ಜೇಬಿನಲ್ಲಿ ಏನೂ ಇರದಿದ್ದರೆ ಅವನು ಏನನ್ನೂ ಕೊಡಲಾರ. ಅದು ಸ್ಪಷ್ಟವಾಗಿದೆ. ಸಂಗ್ರಹಿಸಿ ಇಡುವುದಕ್ಕಾಗಿ ಇರುವ ಸಾಮರ್ಥ್ಯ, ಕೊಡಲು ಬೇಕಾದ ಸಾಮರ್ಥ್ಯದಷ್ಟೇ ಮಹತ್ವದ್ದಾಗಿದೆ. ಇವೆರಡೂ

ವಿಷಯಗಳು ಅಹಂಕಾರದಿಂದ ಕೂಡಿಕೊಂಡಾಗ ಮಾತ್ರ ಅವು ತಮ್ಮ ಮೌಲ್ಯವನ್ನು ಕಳೆದುಕೊಳ್ಳುತ್ತವೆ.

**CWM, 5/357** **– ಶ್ರೀಮಾತೆ**

*

**ಹಣವನ್ನು ವ್ಯರ್ಥವಾಗಿಸುವಿಕೆ**

ಕೇವಲ ಹಣವನ್ನಷ್ಟೇ ವ್ಯರ್ಥ ಮಾಡಲಾಗುವುದಿಲ್ಲ!

ಚೇತನ ಮತ್ತು ಪ್ರಜ್ಞೆ ಇವುಗಳನ್ನು ಹೆಚ್ಚಿನ ರೀತಿಯಲ್ಲಿ ವ್ಯರ್ಥ ಮಾಡಲಾಗುತ್ತದೆ. ವ್ಯರ್ಥವಾಗುವುದು ಇರಬಾರದೇ? ಅಯ್ಯೋ ದೇವರೆ, ಆಶ್ರಮ ಇಲ್ಲಿ ಇರುತ್ತಿರಲಿಲ್ಲ ಎಂದು ನಾನು ನಂಬಿದ್ದೇನೆ! ವ್ಯರ್ಥವಾಗುವುದೇನೂ ಇಲ್ಲದಂತಹ ಒಂದು ಕ್ಷಣವೂ ಇಲ್ಲ. ಕೆಲವೊಮ್ಮೆ ಅದು ಇನ್ನೂ ಕೆಟ್ಟದ್ದಾಗಿರುತ್ತದೆ. ಅಲ್ಲಿ ಸ್ವಲ್ಪವೂ ಪ್ರಜ್ಞೆ ಹೊಂದಿರದ ರೂಢಿಯಿದೆ, ಅದು ಮನುಷ್ಯ ಹೀರಿಕೊಳ್ಳ–ಬಹುದಾದಷ್ಟು ಚೇತನವನ್ನು ಹಾಗೂ ಪ್ರಜ್ಞೆಯನ್ನು ಹೀರಿಕೊಂಡು ಅದನ್ನು ತನ್ನ ವೈಯಕ್ತಿಕ ಸಂತೃಪ್ತಿಗಳಿಗಾಗಿ ಉಪಯೋಗಿಸುವುದಾಗಿದೆ. ನಿಜವಾಗಿ ಅದು ಪ್ರತಿಯೊಂದು ಕ್ಷಣ ಸಂಭವಿಸುತ್ತಿರುತ್ತದೆ. ನಿಮ್ಮೆಲ್ಲರ ಮೇಲೆ ಸತತ ಸುರಿಯಲಾಗುವ ಎಲ್ಲ ಚೇತನ ಹಾಗೂ ಪ್ರಜ್ಞೆ ನಿಜವಾದ ಉದ್ದೇಶಕ್ಕೆ ಉಪಯುಕ್ತವಾಗಿದ್ದರೆ ಎಂದರೆ ದೈವೀ ಕಾರ್ಯಕ್ಕೆ, ದೈವೀ ಕಾರ್ಯಕ್ಕಾಗಿ ತಯಾರು ಮಾಡುವುದಕ್ಕೆ ಉಪಯುಕ್ತ–ವಾಗಿದ್ದರೆ ನಾವು ಈಗಾಗಲೆ ಮಾರ್ಗದ ಮೇಲೆ ಬಹಳ ದೂರ ಸಾಗಿ ಹೋಗುತ್ತಿದ್ದೆವು, ನಾವು ಈಗ ಇರುವುದಕ್ಕಿಂತ ಹೆಚ್ಚು ದೂರ ಹೋಗುತ್ತಿದ್ದೆವು. ಆದರೆ ಪ್ರತಿಯೊಬ್ಬನು ಹೆಚ್ಚು ಕಡಿಮೆ ಪ್ರಜ್ಞಾಪೂರ್ವಕವಾಗಿ, ಅದೇನೇ ಇರಲಿ ಸಹಜ ಪ್ರವೃತ್ತಿಯಿಂದ ಸಾಧ್ಯವಿದ್ದಷ್ಟು ಚೇತನವನ್ನು ಹೀರಿಕೊಳ್ಳುತ್ತಾನೆ ಮತ್ತು ಆ ಚೇತನ ತನ್ನಲ್ಲಿದೆ ಎಂಬ ಭಾವನೆ ಅವನಿಗೆ ಬಂದಕೂಡಲೆ ಅದನ್ನು ತನ್ನ ವೈಯಕ್ತಿಕ ಉದ್ದೇಶಕ್ಕಾಗಿ, ತನ್ನದೇ ಸಂತೃಪ್ತಿಗಾಗಿ ಉಪಯೋಗ ಮಾಡುತ್ತಾನೆ.

ಇಲ್ಲಿರುವ ಎಲ್ಲ ದೈವೀ ಶಕ್ತಿ ಕುರಿತು ಯಾರು ಯೋಚಿಸುತ್ತಾರೆ, ಅದು ಅನಂತಪಟ್ಟು ಭವ್ಯವಾಗಿದೆ, ಹಣದ ಎಲ್ಲ ಶಕ್ತಿಗಿಂತ ಅನಂತಪಟ್ಟು ಭವ್ಯವಾಗಿದೆ, ಅದು ಇಲ್ಲಿದೆ ಮತ್ತು ಅದನ್ನು ಸದಾ ಪ್ರಜ್ಞಾಪೂರ್ವಕವಾಗಿ ಕೊಡಲಾಗುತ್ತಿದೆ, ಕೊನೆಯಿಲ್ಲದ ಪಟ್ಟುಹಿಡಿಯುವಿಕೆ ಹಾಗೂ ತಾಳ್ಮೆಯಿಂದ ಕೊಡಲಾಗುತ್ತಿದೆ, ಅದನ್ನು ಏಕೈಕ ಉದ್ದೇಶಕ್ಕಾಗಿ ಮಾಡಲಾಗುತ್ತಿದೆ, ಅದು ದೈವೀ ಕಾರ್ಯವನ್ನು

ಸಿದ್ಧಿಸಿಕೊಳ್ಳುವುದಕ್ಕಾಗಿ ಇದೆ – ಅದನ್ನು ವ್ಯರ್ಥಮಾಡಬಾರದೆಂದು ಯಾರು ಯೋಚಿಸುತ್ತಾರೆ? ಪ್ರಗತಿ ಸಾಧಿಸುವುದು, ಹೆಚ್ಚು ಒಳ್ಳೆಯ ರೀತಿಯಲ್ಲಿ ತಿಳಿದುಕೊಳ್ಳುವುದು, ಹಾಗೂ ಜೀವಿಸುವುದು ಪವಿತ್ರ ಕರ್ತವ್ಯ ಎಂದು ಯಾರು ಯೋಚಿಸುತ್ತಾರೆ? ಏಕೆಂದರೆ ಜನರು ದೈವೀ ಚೇತನದಿಂದ ದೈವೀ ಪ್ರಜ್ಞೆಯಿಂದ ಜೀವಿಸುತ್ತಾರೆ ಮತ್ತು ಅವುಗಳನ್ನು ತಮ್ಮ ವೈಯಕ್ತಿಕ ಹಾಗೂ ಸ್ವಾರ್ಥದ ಉದ್ದೇಶಕ್ಕಾಗಿ ಉಪಯೋಗಿಸುತ್ತಾರೆ.

**CWM, 6/156–57** **– ಶ್ರೀಮಾತೆ**

*



**"ಕೊಡುವುದಕ್ಕೆ ಭಗವಂತನಲ್ಲಿ ಅನೇಕ ರೀತಿಗಳಿವೆ"**

ಇದು ಸರಿಯಾದ ವಿಷಯ. ಮನುಷ್ಯ ಭಗವಂತನಿಗಲ್ಲದೆ ಬೇರೆ ಯಾರ ನಿರ್ಬಂಧಕ್ಕೂ ಒಳಗಾಗಬೇಕಿಲ್ಲ, ಈ ನಿರ್ಬಂಧ ಇಡಿಯಾದದ್ದು. ಯಾವ ಷರತ್ತೂ ಇರಿಸದೆ ಕಾಣಿಕೆಯೊಂದನ್ನು ಮಾಡಿದಾಗ, ಅದು ಭಗವಂತನಿಂದ ಬರುತ್ತದೆ ಎಂದು ತಿಳಿದುಕೊಳ್ಳಬೇಕು. ಮತ್ತು ಪ್ರತಿಯಾಗಿ ವಿನಿಮಯ ಇಲ್ಲವೆ ಪ್ರತ್ಯುತ್ತರ ನೀಡುವುದನ್ನು ಭಗವಂತನಿಗೆ ಬಿಟ್ಟುಕೊಡಬೇಕು.

**CWM, 15/51** **– ಶ್ರೀಮಾತೆ**

*

# ಹಣ ಮತ್ತು ದೈವೀ ಕಾರ್ಯ

## ದೈವೀ ಕಾರ್ಯಕ್ಕಾಗಿ ಹಣದ ಆವಶ್ಯಕತೆ

ದವಾಖಾನೆಯೊಂದನ್ನು ಕಟ್ಟಿಸುವುದು ಇಲ್ಲವೆ ಶಿಶುಧಾಮ ತೆರೆಯುವುದು ಗರಿಷ್ಠಮಟ್ಟದ ಸದಿಚ್ಛೆಯಿಂದಾಗಿರುತ್ತದೆ, ಇದು ತಿಳಿದುಕೊಂಡ ವಿಷಯ. ಈ ಎಲ್ಲ ಕಾರ್ಯಗಳನ್ನು ಜನರು ತಿಳಿದುಕೊಂಡಿರುತ್ತಾರೆ. ಆದರೆ ಮನುಷ್ಯರ ಪ್ರಜ್ಞೆಯನ್ನು ಬದಲಾಯಿಸುವುದಕ್ಕಾಗಿ, ಹೊಸ ಜಗತ್ತನ್ನು ಸೃಷ್ಟಿಸುವುದಕ್ಕಾಗಿ ನಮಗೆ ಹಣ ಬೇಕಾಗಿದೆ ಎಂದು ಹೇಳಿದರೆ ಓಹ್! ಅವರು ಮೊದಲು ಹೇಳುವುದೇನೆಂದರೆ "ಕ್ಷಮಿಸಿರಿ, ದೇವನನ್ನು ಕುರಿತು ಮಾತನಾಡುವುದು ಬೇಡ, ಕಾರ್ಯ ಕೈಕೊಳ್ಳುವವನು ದೇವನಾಗಿದ್ದರೆ ಸರಿ, ಅದಕ್ಕೆ ಅವನೇ ನಿಮಗೆ ಸಾಧನ ಒದಗಿಸುತ್ತಾನೆ, ನಿಮಗೆ ನಮ್ಮ ಸಹಾಯದ ಆವಶ್ಯಕತೆ ಇರುವುದಿಲ್ಲ." ಜನರು ಹೇಳುವುದನ್ನು ಕೇಳಿದ್ದೇನೆ: "ಪೃಥ್ವಿಯ ಮೇಲೆ ನೀವು ಭಗವಂತನನ್ನು ಪ್ರತಿನಿಧಿ–ಸುತ್ತಿದ್ದರೆ, ನೀವು ನಿಮಗಿಷ್ಟವಾದದ್ದನ್ನು ಕೈಕೊಳ್ಳಿರಿ, ನಾವು ನಿಮಗೆ ಏನನ್ನಾದರೂ ಕೊಡುವ ಆವಶ್ಯಕತೆ ಇಲ್ಲ." ಈ ಅನುಭವದ ಉಳಿಕೆಯ ನಂತರ ನಿಮ್ಮಲ್ಲಿ ಎಷ್ಟು ಜನ ಆ ವಿಚಾರದಿಂದ ಮುಕ್ತರಾಗಿದ್ದೀರಿ, ಭಗವಂತ ಸರ್ವಸಮರ್ಥನಾಗಿದ್ದಾನೆ, ಹಾಗಾಗಿ ಭಗವಂತ ತನಗಿಷ್ಟವಾದ ಏನನ್ನೂ ಕೈಕೊಳ್ಳಬಲ್ಲ.

ಅದು ಮೊದಲ ವಾದ, ಅದುವೇ ಸಿದ್ಧಾಂತ. ಭಗವಂತ ಸರ್ವಸಮರ್ಥ, ಅವನಿಗಿಷ್ಟವಾದ ಏನನ್ನೂ ಕೈಕೊಳ್ಳಬಲ್ಲ; ಹಾಗಾಗಿ ಅವನಿಗೆ ಬೇರೆಯವರ ಸಹಾಯ ಬೇಕಾಗಿಲ್ಲ. ನೀವು ನಿಮ್ಮ ವಿಚಾರವನ್ನು ಸಾಕಷ್ಟು ಮುಂದೂಡಿದರೆ, ನಿಮಗೆ ಕಂಡುಬರುವುದೇನೆಂದರೆ ಭಗವಂತ ಈ ಜಗತ್ತಿನಲ್ಲಿ ನಿಜವಾಗಿ ಸರ್ವಸಮರ್ಥನಾಗಿದ್ದರೆ ಮತ್ತು ಯಾವಾಗಲೂ ತಾನು ಬಯಸಿದ್ದನ್ನು ಕೈಕೊಳ್ಳುತ್ತಿದ್ದರೆ, ಸರಿ, ನಾನು ನಿಮಗೆ ಹೇಳುತ್ತೇನೆ, ಅವನು ವಿಶ್ವದಲ್ಲಿ ಅತ್ಯಂತ ದೊಡ್ಡ ದೈತ್ಯನಾಗಿದ್ದಾನೆ! ಏಕೆಂದರೆ ಸರ್ವಸಮರ್ಥನಾದ ಏಕೈಕನಾದವನು ಮತ್ತು ಜಗತ್ತನ್ನು ಅದಿದ್ದ ಹಾಗೆ ಮಾಡುವವನು, ವೇದನೆಗೊಳಗಾದ, ದುಃಸ್ಥಿತಿಯಲ್ಲಿದ್ದ ಜನರತ್ತ ಮುಗುಳ್ನಗುತ್ತ ನೋಡುತ್ತ, ಎಲ್ಲವೂ ಸರಿಯಾಗಿದೆ ಎಂದುಕೊಳ್ಳು–ವವನನ್ನು ನಾನು ದೈತ್ಯನೆಂದು ಕರೆಯುತ್ತೇನೆ. ನಾನು ಐದು ವರ್ಷದವಳಾಗಿದ್ದಾಗ ಈ

ಬಗೆಯಲ್ಲಿ ಯೋಚಿಸುತ್ತಿದ್ದೆ. ನನಗೆ ನಾನೇ ಹೇಳಿಕೊಳ್ಳುತ್ತಿದ್ದೆ: "ಅದು ಸಾಧ್ಯವಿಲ್ಲ, ಅಲ್ಲಿ ಕಲಿಸಿಕೊಟ್ಟದ್ದು ಸತ್ಯವಲ್ಲ." ಈಗ ನಿಮ್ಮಲ್ಲಿ ಸ್ವಲ್ಪ ತಾತ್ವಿಕ ಮನೋಭಾವ ಇರುವುದರಿಂದ ಈ ತೊಂದರೆಯಿಂದ ಹೇಗೆ ಹೊರಗೆ ಬರಬೇಕೆಂಬುದನ್ನು ಕಲಿಸಿಕೊಡುತ್ತೇನೆ. ಆದರೆ ಮೊಟ್ಟಮೊದಲಿಗೆ ಆ ವಿಚಾರ ಬಾಲಿಶವಾದದ್ದು ಎಂಬುದನ್ನು ನೀವು ತಿಳಿದುಕೊಳ್ಳಬೇಕು. ನಾನು ಕೇವಲ ನಿಮ್ಮ ಸಾಮಾನ್ಯ ಜ್ಞಾನಕ್ಕೆ ಕರೆ ಕೊಡುತ್ತೇನೆ. ನಿಮ್ಮ ಭಗವಂತನನ್ನು ಒಬ್ಬ ವ್ಯಕ್ತಿಯನ್ನಾಗಿ ಮಾಡಿರಿ. ಏಕೆಂದರೆ ಆ ರೀತಿಯಲ್ಲಿ ಅವನನ್ನು ಹೆಚ್ಚು ಒಳ್ಳೆಯ ರೀತಿಯಲ್ಲಿ ತಿಳಿದುಕೊಳ್ಳಬಲ್ಲಿರಿ. ಅವನನ್ನು ವ್ಯಕ್ತಿಯನ್ನಾಗಿ ಮಾಡಿರಿ. ಮತ್ತು ನಂತರ ಈ ವ್ಯಕ್ತಿ ಏನನ್ನೋ (ಪೃಥ್ವಿ ಬಹಳ ದೊಡ್ಡದಿದೆ, ಅದನ್ನು ತಿಳಿದುಕೊಳ್ಳುವುದು ಕಠಿಣ – ಬೇರೆ ಏನನ್ನಾದರೂ ತೆಗೆದುಕೊಳ್ಳಿರಿ) ಸಂಘಟಿಸಿದ್ದಾನೆ ಮತ್ತು ನಂತರ ಈ ವಸ್ತುವನ್ನು ಭಗವಂತ ತಾನು ಬೇಕಾದುದನ್ನು ಕೈಕೊಳ್ಳಲು ಪೂರ್ತಿ ಸಾಮರ್ಥ್ಯದಿಂದ ಸಂಘಟಿಸಿದ್ದಾನೆ – ಅಲ್ಲಿ ಅಜ್ಞಾನವಿದೆ, ಹೆಡ್ಡತನವಿದೆ, ದುಷ್ಟ ಸಂಕಲ್ಪವಿದೆ, ಭಯವಿದೆ, ಮಾತ್ಸರ್ಯವಿದೆ, ಗರ್ವವಿದೆ, ದುಷ್ಟತನವಿದೆ ಹಾಗೆಯೇ ವೇದನೆ, ರೋಗ, ದುಃಖ, ಎಲ್ಲ ನೋವುಗಳು ಇವೆ, ಒಂದು ಗುಂಪಿನ ಜನರು, ಅವರಿಗೆ ಇಡೀ ದಿನದಲ್ಲಿ ಕೆಲ ನಿಮಿಷಗಳಷ್ಟು ಕಾಲವಾದರೂ ಸಂತೋಷವಿದೆ ಎಂದು ಹೇಳಲಾರರು, ಉಳಿದದ್ದೆಲ್ಲ ತಟಸ್ಥ ಸ್ಥಿತಿಯಲ್ಲಿದೆ, ಮೃತವಾಗಿದೆಯೇನೋ ಎನ್ನುವಂತೆ ಸಾಗಿ ಹೋಗುತ್ತದೆ – ಮತ್ತು ನೀವು ಅದನ್ನು ಸೃಷ್ಟಿ ಎಂದು ಕರೆಯುತ್ತೀರಿ. ಅದು ನರಕದಂತಿರುವ ಏನೋ ಒಂದು! ಅದನ್ನು ಉದ್ದೇಶ ಪೂರ್ವಕವಾಗಿ ಕೈಕೊಳ್ಳುವವನು, ಕೇವಲ ಸೃಷ್ಟಿಸುವುದಷ್ಟೇ ಅಲ್ಲ, ಅದರತ್ತ ನೋಡಿ, "ಅಹಾ! ಅದು ಬಹಳ ಚೆನ್ನಾಗಿದೆ" ಎಂದು ಹೇಳುವವನು, ಹೀಗೆ ಕೆಲವು ಧಾರ್ಮಿಕ ಗ್ರಂಥಗಳಲ್ಲಿ ಹೇಳಲಾಗಿದೆ, ಮತ್ತು ಅದಿದ್ದ ಹಾಗಿರುವ ಜಗತ್ತನ್ನು ಮಾಡಿ ಏಳನೆಯ ದಿನ ಅದರತ್ತ ನೋಡಿದ ಮತ್ತು ಬಹಳಷ್ಟು ತೃಪ್ತಿಪಡೆದ ಹಾಗೂ ವಿಶ್ರಾಂತಿಯಲ್ಲಿದ್ದ. ಸರಿ ಅದೆಂದಿಗೂ ಅಲ್ಲ! ಅದನ್ನು ನಾನು ದೇವರೆಂದು ಕರೆಯುವುದಿಲ್ಲ. ...

**CWM, 5/161–62** **– ಶ್ರೀಮಾತೆ**

*

## ನಿಷ್ಕಪಟರಾಗಿರದ ಜನರಿಗೆ ಭಗವಂತ ವಸ್ತುಗಳನ್ನೇಕೆ ಕೊಡುತ್ತಾನೆ

**ಪ್ರಶ್ನೆ :** *ಈ ಜನರು ನಿಷ್ಕಪಟಿಗಳಲ್ಲವೆಂಬುದು ಭಗವಂತನಿಗೆ ತಿಳಿದಿದ್ದಾಗಲೂ ಕೂಡ ಅವರಿಗೆ ಅವನಿಂದ ಶಕ್ತಿ ಏಕೆ ದೊರಕುತ್ತದೆ?*

**ಶ್ರೀಮಾತೆ :** ಕಿವಿಗೊಟ್ಟು ಕೇಳು ಮಗು, ಭಗವಂತನ ತನ್ನ ಕಾರ್ಯಗಳನ್ನು ಮಾನವರ ವಿಚಾರದ ಪ್ರಕಾರ ಮಾಡುವುದಿಲ್ಲ. ಅದನ್ನು ನೀನು ಒಮ್ಮೆ ಮತ್ತು ಎಲ್ಲ ಕಾಲಕ್ಕೆ ತಲೆಯಲ್ಲಿ ತುಂಬಿಕೊಳ್ಳಬೇಕು. ಅವನು ಬಹುಶಃ ನಾವು ಕಾರಣಗಳೆಂದು ಕರೆಯುವುದರ ಮೂಲಕ ಕೈಕೊಳ್ಳುವುದಿಲ್ಲ. ಆದರೆ ಅದೇನೇ ಇರಲಿ, ಅವನಲ್ಲಿದ್ದ ಕಾರಣಗಳು ಮಾನವರ ಕಾರಣಗಳ ಹಾಗಿರುವುದಿಲ್ಲ, ಮತ್ತು ನಿಶ್ಚಿತವಾಗಿ ಅವನ ನ್ಯಾಯ ಸಮ್ಮತಿಯ ಅರ್ಥ ಮನುಷ್ಯರು ಅರ್ಥ ಮಾಡಿಕೊಂಡಿರುವ ಹಾಗೆ ಇರುವುದಿಲ್ಲ. ಉದಾಹರಣೆಗೆ ನೀವು ಸುಲಭವಾಗಿ ಕಲ್ಪನೆ ಮಾಡಿಕೊಳ್ಳಬಹು–ದಾದುದೆಂದರೆ ಸಂಪತ್ತನ್ನು ದೊರಕಿಸಲು ಹಾತೊರೆಯುತ್ತಿದ್ದ ಮನುಷ್ಯನೊಬ್ಬ ಜನರನ್ನು ಮೋಸಗೊಳಿಸಲು ಪ್ರಯತ್ನಿಸುತ್ತಾನೆ ಹಾಗೂ ಹಣವನ್ನು ಶೇಖರಿಸುತ್ತಾನೆ. ನ್ಯಾಯ ಕುರಿತು ನಿಮ್ಮ ವಿಚಾರದ ಪ್ರಕಾರ ಅವನ ಎಲ್ಲ ಹಣವನ್ನು ಕಿತ್ತುಕೊಳ್ಳಬೇಕು ಹಾಗೂ ಅವನು ಬಡವನಾಗುವಂತೆ ಮಾಡಬೇಕು. ಸಾಧಾರಣವಾಗಿ ತದ್ವಿರುದ್ಧ–ವಾದದ್ದನ್ನು ನಾವು ನೋಡುತ್ತೇವೆ. ಆದರೆ ಅದು, ಸಹಜವಾಗಿ, ತೋರಿಕೆಗೆ ಕಂಡುಬರುವ ವಿಷಯ. ತೋರಿಕೆಗಳ ಹಿಂದೆ ಬೇರೆ ಏನೋ ಒಂದಿದೆ. ಅವನು ಇತರ ಸಾಧ್ಯತೆಗಳೊಂದಿಗೆ ವಿನಿಮಯ ಮಾಡಿಕೊಳ್ಳುತ್ತಾನೆ. ಅವನಲ್ಲಿ ಹಣವಿರ–ಬಹುದು, ಆದರೆ ಇನ್ನು ಮುಂದೆ ಅವನಲ್ಲಿ ಪ್ರಜ್ಞೆ ಇರುವುದಿಲ್ಲ. ಮತ್ತು, ವಾಸ್ತವದಲ್ಲಿ, ಬಹುಮಟ್ಟಿಗೆ ಸಂಭವಿಸುವುದೇನೆಂದರೆ, ಅವನು ಬಯಸಿದ ಹಣ ಅವನಲ್ಲಿದ್ದಾಗ ಸಂತುಷ್ಟನಾಗಿರುವುದಿಲ್ಲ. ಅವನಲ್ಲಿ ಹಣ ಹೆಚ್ಚಾದ ಹಾಗೆ ಅವನು ಕಡಿಮೆ ಸಂತುಷ್ಟನಾಗಿರುತ್ತಾನೆ! ಅವನು ಗಳಿಸಿದ ಹಣದಿಂದ ಪೀಡೆಗೊಳಗಾಗುತ್ತಾನೆ. ವಿಷಯಗಳನ್ನು ನೀವು ಬಾಹ್ಯ ಯಶಸ್ಸಿನಿಂದ ಇಲ್ಲವೆ ಸೋಲಿಗೆ ಸದೃಶವಾದು–ದರಿಂದ ತೀರ್ಮಾನಕ್ಕೆ ಬರಬಾರದು. ನಾವು ಹೇಳಬಹುದು– ಸರ್ವಸಾಧಾರಣ–ವಾಗಿ ಬಹುಶಃ ಸಂಭವಿಸುವುದು ಇದೇ ಆಗಿರುತ್ತದೆ – ಮನುಷ್ಯ ಬಯಸಿದ್ದನ್ನು ಭಗವಂತ ಕೊಡುತ್ತಾನೆ ಮತ್ತು ಅವನು ಕಲಿಸಿಕೊಡುವ ಎಲ್ಲ ಪಾಠಗಳಲ್ಲಿ ಇದು ಅತ್ಯಂತ ಒಳ್ಳೆಯದು! ಏಕೆಂದರೆ ನಿಮ್ಮ ಆಸೆ ಅಪ್ರಜ್ಞೆಯದಾದರೆ, ಮಬ್ಬಾಗಿದ್ದರೆ,

ಅಹಂಮನ್ಯತೆಯಿಂದ ಕೂಡಿದ್ದರೆ ನೀವು ನಿಮ್ಮ ಅಪ್ರಜ್ಞೆಯನ್ನು ನಿಮ್ಮಂತರಂಗ–ದಲ್ಲಿರುವ ಅಂಧಕಾರವನ್ನು ಹಾಗೂ ಅಹಂಮನ್ಯತೆಯನ್ನು ಹೆಚ್ಚಾಗುವಂತೆ ಮಾಡುತ್ತೀರಿ, ಎಂದರೆ ಇದು ನಿಮ್ಮನ್ನು ಸತ್ಯದಿಂದ ಬಹಳ ದೂರ ಒಯ್ಯುತ್ತದೆ. ಭಗವಂತನಿಗೆ ಸ್ವಾಭಾವಿಕವಾಗಿ ಕೇವಲ ಒಂದು ವಿಷಯ ಸತ್ಯವಾದದ್ದಾಗಿರುತ್ತದೆ, ಅದು ದೈವೀ ಪ್ರಜ್ಞೆ ಮತ್ತು ಭಗವಂತನೊಡನೆ ಏಕತೆ. ನೀವು ಪ್ರಾಪಂಚಿಕ ವಿಷಯ–ಗಳನ್ನು ಮುಂದಿರಿಸಿದ ಪ್ರತಿಸಲ ನೀವು ಹೆಚ್ಚು ಹೆಚ್ಚಾಗಿ ಪ್ರಾಪಂಚಿಕರಾಗುತ್ತೀರಿ ಮತ್ತು ಯಶಸ್ಸಿನಿಂದ ಬಹಳ ದೂರ ಹೊರಟು ಹೋಗುತ್ತೀರಿ.

ದೈವೀ ಸತ್ಯದ ಹೊರತಾಗಿ ಇನ್ನಿತರ ಯಾವುದೇ ಯಶಸ್ಸು ಭಯಾನಕ ಸೋಲಾಗಿರುತ್ತದೆ. ನೀವು ಸತ್ಯವನ್ನು ಮಿಥ್ಯೆಯೊಂದಿಗೆ ವಿನಿಮಯ ಮಾಡಿರುತ್ತೀರಿ!

**CWM, 7/52** **– ಶ್ರೀಮಾತೆ**

*

ಜಿಪುಣನೊಬ್ಬನಿರುತ್ತಾನೆ, ಅವನು ತನ್ನ ಎದೆಯನ್ನು ಬಂಗಾರದ ತುಂಡು–ಗಳಿಂದ ತುಂಬಿಕೊಂಡಿರುತ್ತಾನೆ, ಅವುಗಳನ್ನು ಎಂದಿಗೂ ಉಪಯೋಗಿ–ಸುವುದಿಲ್ಲ. ಬಂಗಾರ ಕೊಳೆಯುವುದಿಲ್ಲ, ಆದರೆ ಅದು ನೈತಿಕತೆಯ ರೀತಿಯಲ್ಲಿ ಕೊಳೆಯುವುದಾಗಿರುತ್ತದೆ. ಏಕೆಂದರೆ ಚಲಾವಣೆಯಲ್ಲಿ ಇರದ ಏನೋ ಒಂದು ಬಹಳ ರೋಗ ಪೀಡಿತವಾಗಿರುತ್ತದೆ.

*

**ಭಕ್ತಿಯ ಸೋಗು**

**ಪ್ರಶ್ನೆ :** *ಶ್ರೀಮಾತೆಯವರೆ, ಇಲ್ಲಿಗೆ ಬರುವ ಜನರಿದ್ದಾರೆ, ಅವರಲ್ಲಿ ಹಣವಿದೆ ಮತ್ತು ಬಹಳ ಭಕ್ತಿವಂತರಾಗಿದ್ದಾರೆ. ತಮ್ಮ ಭಕ್ತಿಯನ್ನು ಪ್ರದರ್ಶಿಸುತ್ತಾರೆ, ಆದರೆ ಹಣದ ಪ್ರಶ್ನೆ ಬಂದರೆ ಚೌಕಾಸಿ ಮಾಡುತ್ತಾರೆ.*

*ಅವರು ಭಕ್ತಿವಂತರಾಗಿದ್ದಾರೆ, ಭಕ್ತಿಯ ಪ್ರದರ್ಶನ ಮಾಡುತ್ತಾರೆ.*

**ಶ್ರೀಮಾತೆ :** ಯಾವ ರೀತಿಯಲ್ಲಿ? ಭಗವಂತನಿಂದ ಬರುವುದನ್ನೆಲ್ಲ ಸ್ವೀಕರಿಸುವುದರ ಮೂಲಕ?

**ಪ್ರಶ್ನೆ :** *ಆದರೆ ಹಣದ ಪ್ರಶ್ನೆ ಬಂದಾಗ, ಅವರು ಚೌಕಾಸಿ ಮಾಡುತ್ತಾರೆ, ಲೆಕ್ಕಾಚಾರ ಮಾಡುತ್ತಾರೆ.*

**ಶ್ರೀಮಾತೆ :** ನಾನು ನಿಮಗೆ ಹೇಳುತ್ತೇನೆ. ನಾನು ಈಗಾಗಲೆ ಆ ಪ್ರಶ್ನೆಗೆ ಉತ್ತರ ನೀಡಿದ್ದೇನೆ. ಅದಿರುವುದು ಹಾಗೆ. ಅವರು ಭಗವಂತನಿಂದ ತೆಗೆದುಕೊಳ್ಳಲು ಸಾಧ್ಯವಿರುವ ಎಲ್ಲವನ್ನೂ ತೆಗೆದುಕೊಳ್ಳುವ ವಿಚಾರದಿಂದ ಬರುತ್ತಾರೆ: ಎಲ್ಲ ಗುಣಗಳು, ಕ್ಷಮತೆಗಳು, ಎಲ್ಲ ಅನುಕೂಲತೆಗಳನ್ನೂ ಕೂಡ, ಎಲ್ಲ ಸುಖ–ಸೌಲಭ್ಯಗಳನ್ನು, ಕೆಲವೊಮ್ಮೆ ಸಾಮರ್ಥ್ಯಗಳನ್ನೂ ಕೂಡ, ಹಾಗೂ ಇನ್ನುಳಿದಿದ್ದೆ–ಲ್ಲವನ್ನು ತೆಗೆದುಕೊಳ್ಳಲು ಬಯಸುತ್ತಾರೆ. ಅವರು ತೆಗೆದುಕೊಂಡು ಹೋಗಲು ಬರುತ್ತಾರೆ, ಕೊಡುವುದಕ್ಕಲ್ಲ. ಅವರ ಭಕ್ತಿಯ ಸೋಗು ಒಂದು ನಿಲುವಂಗಿಯ ಹಾಗಿರುತ್ತದೆ, ಅದನ್ನು ಅವರು ತೆಗೆದುಕೊಳ್ಳಲು ಅವರಲ್ಲಿರುವ ಬಯಕೆಯ ಮೇಲೆ ಚೆಲ್ಲಿಕೊಟ್ಟಿರುತ್ತಾರೆ. ಅದು ವಿಸ್ತಾರವಾದ ಕ್ಷೇತ್ರವನ್ನು ಆವರಿಸುತ್ತದೆ: ತಮ್ಮ ಆತ್ಮದ ರಕ್ಷಣೆ, ಆಧ್ಯಾತ್ಮಿಕ ಅನುಭವಗಳನ್ನು ಹೊಂದುವುದು, ಸಾಮರ್ಥ್ಯಗಳನ್ನು ದೊರಕಿ–ಸುವುದು ಇವುಗಳಿಂದ ಹಿಡಿದು ಬಹಳ ಶಾಂತ ರೀತಿಯಿಂದ ಜೀವನ ನಡೆಸುವುದು, ಹೆಚ್ಚು ಕಡಿಮೆ ಸುಖ–ಸೌಲಭ್ಯಗಳಿಂದ ಕೂಡಿರುವಂತಹದು ಚಿಂತೆ–ಗಳಿಲ್ಲದೆ ಇರುವುದು, ತೊಂದರೆಗಳಿಲ್ಲದೆ ಇರುವುದು, ಜೀವನದ ಕೊರಗುಗಳಿಂದ ದೂರವಿರುವುದು, ಇದೆಲ್ಲದರ ವರೆಗೆ ಆ ಕ್ಷೇತ್ರವಿರುತ್ತದೆ. ಅದಿರುವುದು ಹಾಗೆ. ಅದು ವಿಶಾಲ ವ್ಯಾಪ್ತಿಯನ್ನು ಆವರಿಸುತ್ತದೆ, ಆದರೆ ಅವರು ಕೊಟ್ಟಾಗ ಅದೊಂದು ಬಗೆಯ ಚೌಕಾಶಿ ಮಾಡುವುದಾಗಿರುತ್ತದೆ. ಇವುಗಳನ್ನು ದೊರಕಿಸುವುದಕ್ಕಾಗಿ ಏನಾದರೂ ಸ್ವಲ್ಪ ಮಾತ್ರದಷ್ಟು ಕೊಡುವುದರಿಂದ ಒಳ್ಳೆಯದಾಗುತ್ತದೆ, ಹಾಗಿಲ್ಲದಿದ್ದರೆ ಪ್ರತಿಯಾಗಿ ಅವರು ಏನನ್ನೂ ದೊರಕಿಸುವುದಿಲ್ಲ, ಹಾಗಾಗಿ ಬಹಳ ಭಕ್ತಿವಂತ–ರಾಗಿರುವ ಸೋಗನ್ನು ಅವರು ಮಾಡುತ್ತಾರೆ. ಆದರೆ ಅದು ಕೇವಲ ನಟನೆ, ಏಕೆಂದರೆ ಅದು ನಿಷ್ಕಪಟದ್ದಾಗಿರುವುದಿಲ್ಲ. ಅವರ ದುರ್ದೈವದಿಂದಾಗಿ ಅದು ಯಾರನ್ನೂ ಮೋಸಗೊಳಿಸುವುದಿಲ್ಲ, ಅದನ್ನು ಸಹಿಸಿಕೊಳ್ಳಬಹುದು, ಆದರೆ ಅದರರ್ಥ ಯಾರನ್ನಾದರೂ ಮೋಸಗೊಳಿಸಲಾಯಿತು ಎಂದಲ್ಲ. ಚೌಕಾಶಿ ಮಾಡುವುದು ಎಲ್ಲೆಡೆಯಲ್ಲೂ ಇರುತ್ತದೆ, ಸತ್ತೆಯ ಎಲ್ಲ ಭಾಗಗಳಲ್ಲೂ ಇರುತ್ತದೆ.

ಅದು ಯಾವಾಗಲೂ ಕೊಡು ಹಾಗೂ ತೆಗೆದುಕೋ ಎಂಬ ಹಾಗಿರುತ್ತದೆ. ಅತ್ಯುಚ್ಚ ಆಧ್ಯಾತ್ಮಿಕ ಅನುಭವಗಳಿಂದ ಹಿಡಿದು ಅತಿ ಚಿಕ್ಕ ಭೌತಿಕ ಆವಶ್ಯಕತೆಗಳ ವರೆಗೆ ಇರುತ್ತದೆ. ಸಾವಿರ ಮನುಷ್ಯರಲ್ಲಿ ಚೌಕಾಶಿ ಮಾಡದೆ ಕೊಡುವವರಾರೂ ಇರುವುದಿಲ್ಲ.

**CWM, 8/17** **– ಶ್ರೀಮಾತೆ**

*

**ಭಗವಂತನಿಗೆ ಹಣದ ಅರ್ಪಣೆ**

**ಪ್ರಶ್ನೆ :** *ಆದರೆ ಸರ್ವಸಾಧಾರಣ ಜೀವನದಲ್ಲಿ ಶ್ರೀಮಂತ ಮನುಷ್ಯರು ಭಗವಂತನಿಗೆ ತಮ್ಮ ಸಂಪತ್ತನ್ನು ಕೊಡಲು ಬಯಸಿದರೆ ಮತ್ತು ಭಗವಂತ ಅವರ ಎದುರಿಗೆ ಇರದೆ ಇದ್ದರೆ ಅವರು ಯಾರಿಗೆ ಹಣ ಸಲ್ಲಿಸಬೇಕು, ಎಲ್ಲಿ ಹಣ ಕೊಡ–ಬೇಕೆಂಬುದು ಅವರಿಗೆ ತಿಳಿದಿರುವುದಿಲ್ಲ!*

**ಶ್ರೀಮಾತೆ :** ಹೌದು. ಆಗ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಅಂತರಂಗದಲ್ಲಿ ಇಲ್ಲವೆ ಬಹಿರಂಗದಲ್ಲಿ ಭಗವಂತನನ್ನು ಅವರು ಭೇಟಿ ಮಾಡಿರದಿದ್ದರೆ ಆ ಪ್ರಶ್ನೆ ಎದುರಿಗೆ ಬರುವುದಿಲ್ಲ. ಅವರಿಗೆ ಪರಿಚಯವಿಲ್ಲದ ಜನರಿಗೆ ಹಣ ಕೊಡಿರೆಂದು ಅವರನ್ನು ಕೇಳಲಾಗಿರುವುದಿಲ್ಲ. ಅವರು ತಮ್ಮಂತರಂಗದಲ್ಲಿ ಭಗವಂತನನ್ನು ಕಂಡು–ಕೊಂಡಿದ್ದರೆ ಸರಿ, ಅವರಲ್ಲಿರುವ ಹಣದ ಉಪಯೋಗಕ್ಕಾಗಿ ಭಗವಂತನಿಂದ ಬಂದ ಸೂಚನೆಯನ್ನು ಅನುಸರಿಸಬೇಕು, ಮತ್ತು ಅವರು ದೊರಕಿಸುವ ಸೂಚನೆಗಳನ್ನು ಅವರು ಬಹಳ ನಿಷ್ಕಪಟರಾಗಿ ಮತ್ತು ನಿಖರವಾಗಿ ಅನುಸರಿಸ–ಬೇಕೆಂಬುದನ್ನು ಮಾತ್ರ ಅವರಿಂದ ಇದಿಷ್ಟನ್ನು ಮಾತ್ರ ಕೇಳಲಾಗಿರುತ್ತದೆ. ಅಲ್ಲಿಯವರೆಗೆ ಅವರಿಂದ ಏನನ್ನೂ ಕೇಳಲಾಗಿರುವುದಿಲ್ಲ. ಯಾರೋ ಒಬ್ಬರು "ನಾನಿಲ್ಲಿದ್ದೇನೆ, ನನ್ನ ಜೀವನವನ್ನು ಭಗವಂತನಿಗೆ ಮುಡುಪಾಗಿರಿಸಲು ಬಯಸು–ತ್ತೇನೆ" ಎಂದು ಹೇಳಿದಾಗ ಮನುಷ್ಯ ಪ್ರಶ್ನೆ ಕೇಳಲು ಪ್ರಾರಂಭಿಸುತ್ತಾನೆ. ಆಗ ಅದು ಸರಿಯಾಗಿರುತ್ತದೆ, ಅದು ಮನುಷ್ಯನೊಬ್ಬ ಕೇಳಲು ಪ್ರಾರಂಭಿಸಿದ ಕ್ಷಣದಿಂದ, ಅದಕ್ಕೂ ಮೊದಲಲ್ಲ. ಅದಕ್ಕಿಂತಲೂ ಮೊದಲು ನೀವು ಪ್ರಾಸಂಗಿಕವಾಗಿ ನಿಮ್ಮ ಜೇಬಿನಿಂದ ನಾಣ್ಯವೊಂದನ್ನು ಹೊರಗೆ ತೆಗೆದು ಅಲ್ಲಿರಿಸುತ್ತೀರಿ, ಅದು ಬಹಳ

ಒಳ್ಳೆಯದು, ನೀವು ಮಾಡಲೇಬೇಕಾದುದು ಎಂದುಕೊಂಡದ್ದನ್ನು ಮಾಡಿರುತ್ತೀರಿ, ಅದಷ್ಟೇ, ನಿಮ್ಮನ್ನು ಯಾವುದಕ್ಕಾಗಿ ಕೇಳಲಾಗಿರುವುದಿಲ್ಲ. ನಿಮ್ಮನ್ನು ಪರಿಗ್ರಹಿಸೆಂದು ಭಗವಂತನಿಗೆ ಕೇಳಿಕೊಳ್ಳುವುದು, ಮತ್ತು ನಿಮ್ಮ ಜೀವನದ ಮುನ್ನಡೆಯಲ್ಲಿ ಏನನ್ನೂ ಬದಲು ಮಾಡಲು ಉದ್ದೇಶವಿಟ್ಟುಕೊಂಡಿರದೆ ಸದಿಚ್ಛೆಯ ಸಂಜ್ಞೆಯನ್ನು ಮಾಡುವುದು ಇವುಗಳ ನಡುವೆ ದೊಡ್ಡ ವ್ಯತ್ಯಾಸವಿದೆ.

ಸರ್ವಸಾಧಾರಣ ಜೀವನವನ್ನು ಜೀವಿಸುವವರಿಗೆ, ಸರಿ ಅವರು ಸದಿಚ್ಛೆಯ ಸಂಜ್ಞೆಯನ್ನು ಮಾಡಿದರೆ, ಅದಿಷ್ಟು ಅವರಿಗೆ ಹೆಚ್ಚು ಒಳ್ಳೆಯದನ್ನು ಮಾಡುತ್ತದೆ. ಇದು ಅವರ ಮುಂದಿನ ಜನ್ಮಗಳಿಗೆ ಪೂರ್ವಭಾವಿಯಾದದ್ದನ್ನು ಸೃಷ್ಟಿಸುತ್ತದೆ. "ಅಲ್ಲಿ ಈಗ ನಾನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾದ ಒಂದು ವಿಷಯವಿದೆ, ಅದು ದೈವೀ ಜೀವನ, ಮತ್ತು ನಾನು ದೈವೀ ಜೀವನವನ್ನು ಜೀವಿಸಲು ಬಯಸುತ್ತೇನೆ." – ಆ ಕ್ಷಣದಿಂದ ಒಬ್ಬರು ನಿನ್ನನ್ನು ಕೇಳುತ್ತಾರೆ, ಅದಕ್ಕೂ ಮೊದಲಲ್ಲ.

**CWM, 8/16** **– ಶ್ರೀಮಾತೆ**

*

**ಸೂತ್ರಗಳು**

ನಿಮ್ಮಲ್ಲಿ ಸಂಪತ್ತನ್ನು ಇಟ್ಟುಕೊಳ್ಳುವುದಕ್ಕಿಂತ ಅದನ್ನು ಕೊಡುವುದರ ಮೂಲಕ ಹೆಚ್ಚು ಶ್ರೀಮಂತರಾಗುತ್ತೀರಿ.

*

ನಿಜವಾದ ಸಂಪತ್ತು ಅದನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡುವುದರಲ್ಲಿದೆ.

ನಿಮ್ಮ ಸಂಪತ್ತನ್ನು ಸಾಧ್ಯವಿದ್ದಷ್ಟು ಯುಕ್ತ ರೀತಿಯಲ್ಲಿ ಅಳವಡಿಸಿದಾಗ ನೀವು ನಿಜವಾಗಿ ಶ್ರೀಮಂತರಾಗುತ್ತೀರಿ.

*

ಸ್ವಾರ್ಥರಹಿತ ಸಂಪತ್ತು: ಸಂಪತ್ತನ್ನು ಸಮೃದ್ಧಿಯಿಂದ ದೊರಕಿಸುವವನು ತನ್ನಲ್ಲಿರುವ ಎಲ್ಲವನ್ನೂ ಕೊಟ್ಟುಬಿಡುವನು.

*

ಔದಾರ್ಯ ಕೊಟ್ಟುಬಿಡುತ್ತದೆ, ಚೌಕಾಶಿ ಮಾಡದೆ ಕೊಡುತ್ತದೆ.

*

ನಿಮ್ಮ ಯೋಚನೆಯಲ್ಲಿ ಆಧ್ಯಾತ್ಮಿಕ ಸಾಮರ್ಥ್ಯವನ್ನು ಮತ್ತು ಹಣವನ್ನು ಮಿಶ್ರಣಕ್ಕೊಳಪಡಿಸಬೇಡಿರಿ, ಏಕೆಂದರೆ ಅದು ನೇರವಾಗಿ ಅನಾಹುತದತ್ತ ಕರೆದೊಯ್ಯುತ್ತದೆ.

*

ಜಂಬದ ಮೂಲಕ ಕೊಡಲಾದ ಕಾಣಿಕೆ ಕೊಡುವವನಿಗೂ ಲಾಭದಾ–ಯಕವಲ್ಲ, ತೆಗೆದುಕೊಳ್ಳುವವನಿಗೂ ಲಾಭದಾಯಕವಲ್ಲ.

*

ಕಾಣಿಕೆಯಲ್ಲಿ ಯೋಚನೆ, ಭಾವನೆ ಮತ್ತು ಶಕ್ತಿ ಇವೆಲ್ಲ ಸ್ವತಃ ಕೊಟ್ಟ ವಸ್ತು–ವಿಗಿಂತ ಮಹತ್ವದ್ದಾಗಿರುತ್ತವೆ, ಮೌಲ್ಯವುಳ್ಳವವಾಗಿರುತ್ತವೆ.

*

ಶ್ರೀಮಂತನಿಗೆ ದೇವ ಹಣವನ್ನು ಕೊಡುತ್ತಾನೆ, ಆದರೆ ಬಡ ಮನುಷ್ಯನಿಗೆ ತನ್ನನ್ನೇ ಕೊಡುತ್ತಾನೆ.

ಸಂಪತ್ತಿಗೆ ಹೆಚ್ಚು ಮೌಲ್ಯ ಕೊಡಬೇಕೋ ಇಲ್ಲವೆ ದೇವನಿಗೆ ಹೆಚ್ಚು ಬೆಲೆ ಕೊಡಬೇಕೋ ಎಂಬುದು ಬಡವರ ಮೇಲೆ ಅವಲಂಬಿಸಿರುತ್ತದೆ.

**ಅಗಸ್ಟ 22, 1964** **– ಶ್ರೀಮಾತೆ**

*

ಭವಿಷ್ಯತ್ತಿನೊಂದಿಗೆ ಸಹಕಾರ ನೀಡುವ ಸಾಧ್ಯತೆಯನ್ನು ಬಂಡವಾಳುಗಾರರಿಗೆ ಹಾಗೂ ವ್ಯಾಪಾರಸ್ಥರಿಗೆ ಕೊಡಲಾಗಿದೆ, ಆದರೆ ಅವರಲ್ಲಿ ಬಹಳಷ್ಟು ಜನರು ಭವಿಷ್ಯತ್ತಿಗಿಂತ ಹಣ ಹೆಚ್ಚು ಬಲಿಷ್ಠವಾಗಿದೆ ಎಂದು ಮನವರಿಕೆ ಮಾಡಿ–ಕೊಂಡಿದ್ದಾರೆ.

*

ಈ ಪ್ರಾಪಂಚಿಕ ಜಗತ್ತಿನಲ್ಲಿ 'ಮನುಷ್ಯರಿಗೆ ಹಣ' ದೈವೀ ಸಂಕಲ್ಪಕ್ಕಿಂತ ಹೆಚ್ಚು ಪವಿತ್ರವಾದದ್ದು.

**ಮಾರ್ಚ 12, 1965** **– ಶ್ರೀಮಾತೆ**

*

ಹಣಕ್ಕಾಗಿ ದುರಾಶೆ: ಮನುಷ್ಯನ ಪ್ರಜ್ಞೆಯನ್ನು ಕುಂದಿಸುವುದಕ್ಕೆ ಮತ್ತು ಸ್ವಭಾವವನ್ನು ಸಂಕುಚಿತಗೊಳಿಸುವುದಕ್ಕೆ ಅತ್ಯಂತ ನಿಶ್ಚಿತವಾದ ಮಾರ್ಗ.

*

ಹಣದ ಮೇಲೆ ಬಡ್ಡಿ ದೊರಕಿಸುವುದರ ಪರವಾಗಿ ನಾನಿಲ್ಲ.

*

**ಪ್ರಶ್ನೆ :** *ಸಾಲಪತ್ರದ ಹಣ (stocks) ಮತ್ತು ಸಟ್ಟಾ ವ್ಯವಹಾರ (speculations) ಇವುಗಳೊಡನಿರುವ ವ್ಯವಹಾರದಲ್ಲಿ ಸ್ವಲ್ಪ ಕಾಲ ಎರಚಾಡಿದ್ದೆ. ಅದು ನನ್ನ ಜೇಬಿನಲ್ಲಿ ದೊಡ್ಡ ತೂತನ್ನು ಉಂಟುಮಾಡಿತು. ನಾನದನ್ನು ಮಾಡದೆ ಇದ್ದರೆ ಒಳಿತಾಗುತ್ತಿತ್ತು. ನೀವು ಸಟ್ಟಾ ವ್ಯವಹಾರದ ವಿರುದ್ಧ ಇರುವಿರಲ್ಲವೆ?*

**ಶ್ರೀಮಾತೆ :** ಊಹೆ ಮಾಡಿಕೊಳ್ಳುವ ಎಲ್ಲ ವ್ಯವಹಾರವನ್ನು ನಾನು ಒಪ್ಪುವುದಿಲ್ಲ ಎಂಬುದನ್ನು ನೀನು ತಿಳಿದುಕೊಳ್ಳಬೇಕು – ಆದರೆ ಕೈಕೊಂಡದ್ದೆಲ್ಲ ಕೈಕೊಂಡಾಗಿದೆ.

**ಡಿಸೆಂಬರ 17, 1932** **– ಶ್ರೀಮಾತೆ**

*

**ಪ್ರಶ್ನೆ :** *ಪ್ರಜ್ಞೆ ಹೆಚ್ಚು ಒಳ್ಳೆಯದಾಗುವುದರೊಂದಿಗೆ ಮನುಷ್ಯನ ಆರ್ಥಿಕ ಸ್ಥಿತಿ ದೃಢವಾಗುವುದೆ?*

**ಶ್ರೀಮಾತೆ :** "ಹೆಚ್ಚು ಒಳ್ಳೆಯ ಪ್ರಜ್ಞೆ" ಇದರರ್ಥ ಹೆಚ್ಚಿಸಿಕೊಂಡ, ವಿಸ್ತಾರಗೊಂಡ ಪ್ರಜ್ಞೆ, ಹೆಚ್ಚು ಒಳ್ಳೆಯ ರೀತಿಯಲ್ಲಿ ಅದರ ಸಂಘಟನೆ ಎಂದಿದ್ದರೆ ಪರಿಣಾಮವಾಗಿ ಸ್ವಾಭಾವಿಕವಾದ ನಿಯಂತ್ರಣ ಬಾಹ್ಯ ವಿಷಯಗಳ ಮೇಲಿರಬೇಕು (ಆರ್ಥಿಕ

ಪರಿಸ್ಥಿತಿಯನ್ನು ಒಳಗೊಂಡು). ಆದರೆ ಹಾಗೆಯೇ, ಸ್ವಾಭಾವಿಕವಾಗಿ, ಮನುಷ್ಯನಲ್ಲಿ "ಹೆಚ್ಚು ಒಳ್ಳೆಯ ಪ್ರಜ್ಞೆ" ಇದ್ದಾಗ ಅವನು ಆರ್ಥಿಕ ಪರಿಸ್ಥಿತಿಯಂತಹ ವಿಷಯಗಳಲ್ಲಿ ಕಡಿಮೆ ರೀತಿಯಲ್ಲಿ ತೊಡಗಿಕೊಂಡಿರುತ್ತಾನೆ.

**CWM, 15/51–52** **– ಶ್ರೀಮಾತೆ**

*

ಧನವು ಕಣ್ಣಿಗೆ ಕಂಡುಬರುವ ವಿಶ್ವಂಭರ ಶಕ್ತಿಯ ಚಿಹ್ನೆ, ಪೃಥ್ವಿಯ ಮೇಲಿನ ಅದರ ಪ್ರಕಟಣೆಯಲ್ಲಿ ಮಾನಸಿಕ ಹಾಗೂ ಪ್ರಾಣಿಕ ಸ್ತರಗಳ ಮೇಲೆ ಅದು ಕಾರ್ಯ ಮಾಡುತ್ತದೆ ಹಾಗೂ ಬಾಹ್ಯ ಜೀವನ ಪೂರ್ತಿಗೊಳ್ಳುವುದಕ್ಕೆ ಅತ್ಯಗತ್ಯದ್ದಾಗಿದೆ. ಧನ, ಅದರ ಮೂಲದಲ್ಲಿ ಮತ್ತು ಅದರ ನಿಜವಾದ ಕಾರ್ಯದಲ್ಲಿ ಭಗವಂತನಿಗೆ ಸೇರಿದ್ದಾಗಿದೆ, ಆದರೆ ಭಗವಂತನ ಇತರ ಸಾಮರ್ಥ್ಯಗಳಿಗಾದ ಹಾಗೆ ಅದೂ ಕೂಡ ಅವನ ಪ್ರತಿನಿಧಿಯಾಗಿದೆ ಮತ್ತು ನಿಮ್ನ ಪ್ರಕೃತಿಯ ಅಜ್ಞಾನದಲ್ಲಿ ಅಹಂಕಾರದ ಉಪಯೋಗಗಳಿಗಾಗಿ ದುರಾಕ್ರಮಣಕ್ಕೆ ಒಳಗಾಗಿದೆ ಇಲ್ಲವೆ ರಾಕ್ಷಸೀ ಪ್ರಭಾವಗಳ ಹಿಡಿತಕ್ಕೊಳಗಾಗಿದೆ ಮತ್ತು ಅವುಗಳ ಉದ್ದೇಶಕ್ಕಾಗಿ ವಿಕೃತಗೊಳಿಸ–ಲಾಗಿದೆ. ಅಧಿಕಾರ, ಸಂಪತ್ತು ಹಾಗೂ ಲೈಂಗಿಕತೆ – ಈ ಮೂರು ಸಾಮರ್ಥ್ಯಗಳು, ನಿಜವಾಗಿ, ಮಾನವನ ಅಹಂಕಾರಕ್ಕೆ ಮತ್ತು ಅಸುರನಿಗೆ ಅತ್ಯಂತ ಬಲವಾದ ಆಕರ್ಷಣೆಯನ್ನುಂಟುಮಾಡುತ್ತವೆ. ಧನ ಅಥವಾ ಸಂಪತ್ತು ಅವುಗಳಲ್ಲೊಂದು. ಆ ಮೂರು ಸಾಮರ್ಥ್ಯಗಳನ್ನು ದೃಢವಾಗಿ ಮನಸ್ಸಿನಲ್ಲಿ ಇಟ್ಟುಕೊಂಡವರಿಂದ ಅವು ಹೆಚ್ಚು ಕೆಟ್ಟ ರೀತಿಯ ಹಿಡಿತಕ್ಕೆ ಮತ್ತು ದುರುಪಯೋಗಕ್ಕೆ ಒಳಗಾಗಿರುತ್ತವೆ. ಸಾಧಾರಣವಾಗಿ ಸಂಪತ್ತನ್ನು ಅರಸುವವರು ಹಾಗೂ ವಶದಲ್ಲಿ ಇಟ್ಟುಕೊಂಡವರು ಸಂಪತ್ತಿನ ಒಡೆಯರಾಗಿರುವುದಕ್ಕಿಂತ ಹೆಚ್ಚಾಗಿ ದಾಸರಾಗಿರುತ್ತಾರೆ. ಧನವು ಅಸುರನ ಕೈಗೆ ಬಹಳ ಕಾಲದಿಂದ ಸಿಕ್ಕಿಹಾಕಿಕೊಂಡಿರುವುದರಿಂದಾಗಿ ಹಾಗೂ ಅವನ ತಪ್ಪು ಬಳಕೆಯಿಂದಾಗಿ ಅದರ ಮೇಲೆ ಒಂದು ಮುದ್ರೆ ಬಿದ್ದಿದೆ, ಅದರ ವಿಕೃತಗೊಂಡ ಪ್ರಭಾವದಿಂದ ಕೆಲವೇ ಜನರು ಪಾರಾಗಬಲ್ಲರು. ಈ ಕಾರಣ–ದಿಂದಾಗಿ ಬಹಳಷ್ಟು ಆಧ್ಯಾತ್ಮಿಕ ಶಿಸ್ತುಪಾಲನೆಗಳು ಸಂಪೂರ್ಣ ಸ್ವ–ನಿಯಂತ್ರಣ, ಸಂಪತ್ತಿನ ಬಂಧನಕ್ಕೆ ಒಳಗಾಗುವುದರ ಬಗ್ಗೆ ನಿರ್ಲಿಪ್ತತೆ, ವೈರಾಗ್ಯ ಇವುಗಳನ್ನು

ಕುರಿತು ಮತ್ತು ಅದನ್ನು ವಶದಲ್ಲಿಟ್ಟುಕೊಳ್ಳಲು ವೈಯಕ್ತಿಕ, ಅಹಂಕಾರದ ಆಸೆಯನ್ನು ಹೊಂದಿರದೆ ಇರುವುದನ್ನು ಕುರಿತು ಒತ್ತಾಯ ತರುತ್ತವೆ. ಇನ್ನು ಕೆಲವು ಶಿಸ್ತುಪಾಲನೆಗಳು ಧನವನ್ನು ಹಾಗೂ ಸಂಪತ್ತನ್ನು ಬಹಿಷ್ಕರಿಸುತ್ತವೆ ಮತ್ತು ಜೀವನದಲ್ಲಿ ಬಡತನ ಹಾಗೂ ದಾರಿದ್ರ್ಯ ಆಧ್ಯಾತ್ಮಿಕತೆಗಾಗಿ ಇರುವ ಏಕೈಕ ನಿಬಂಧನೆ ಎಂದು ಕೂಡ ಸಾರುತ್ತವೆ. ಆದರೆ ಇದೊಂದು ತಪ್ಪು, ಹೀಗೆ ಮಾಡುವು–ದರಿಂದ ಸಾಮರ್ಥ್ಯವನ್ನು ವಿರೋಧಿ ಶಕ್ತಿಗಳ ಕೈಗಳಿಗೆ ಒಪ್ಪಿಸಿದಂತಾಗುತ್ತದೆ. ಭಗವಂತನದೇ ಆದ ಧನವನ್ನು ಅವನಿಗಾಗಿ ಮರಳಿ ಜಯಿಸಿ ದೊರಕಿಸುವುದು ಮತ್ತು ಅದನ್ನು ದೈವೀ ಜೀವನಕ್ಕಾಗಿ ದೈವಿಕವಾದ ರೀತಿಯಲ್ಲಿ ಉಪಯೋಗಿ–ಸುವುದು ಸಾಧಕನಿಗೆ ಅತಿಮಾನಸದ ರೀತಿ.

**CWSA, 25/12** – **ಶ್ರೀ ಅರವಿಂದರು**

*

## ಹಣ ಹಾಗೂ ಹೊಸ ಪ್ರಜ್ಞೆ

### ರಾಜಕೀಯ ಹಾಗೂ ಆರ್ಥಿಕ ಜಗತ್ತು ಬಲವತ್ತರವಾಗಿ ತಡೆ ಒಡ್ಡುತ್ತವೆ

ಈ ಎರಡು ಲಕ್ಷಣಗಳು ಅಲ್ಲಿವೆ ಅವು ಬಲವತ್ತರವಾಗಿ ವಿರೋಧಿಸುತ್ತವೆ – ರಾಜಕೀಯದಿಂದ ಕೈಕೊಳ್ಳಬಹುದಾದುದೆಲ್ಲ ಎಂಬುದು ಒಂದು, ಧನದಿಂದ ಕೈಕೊಳ್ಳಬೇಕಾದುದೆಲ್ಲ ಎಂಬುದು ಇನ್ನೊಂದು. ಇವೆರಡು ಲಕ್ಷಣಗಳ ಮೇಲಿರುವ ಮನುಷ್ಯರ ಮನೋಭಾವವನ್ನು ಬದಲು ಮಾಡುವುದು ಅತ್ಯಂತ ಕಠಿಣವಾದದ್ದು. ತಾತ್ವಿಕವಾಗಿ ನಮಗೆ ರಾಜಕೀಯದಿಂದ ಏನೂ ಆಗಬೇಕಿಲ್ಲ ಎಂದು ಹೇಳಿದ್ದೇವೆ ಮತ್ತು ಸದ್ಯ ಪ್ರಯೋಗದಲ್ಲಿರುವ ರಾಜಕೀಯದಿಂದ ನಾವು ಕೈಕೊಳ್ಳಬೇಕಾದುದು ಏನೂ ಇಲ್ಲ ಎಂಬುದು ಸತ್ಯವಾದದ್ದು. ರಾಜಕೀಯವನ್ನು ನಿಜವಾದ ಅರ್ಥದಲ್ಲಿ ತೆಗೆದುಕೊಂಡರೆ ಎಂದರೆ ಮಾನವರ ಮೊತ್ತಗಳ ಸಂಘಟನೆ ಹಾಗೂ ಸರಕಾರದ ಹಾಗೂ ಸಾಮೂಹಿಕ ಜೀವನಕ್ಕಾಗಿ ವಿಧಿಸಿದ ನಿಯಮಗಳು (regulations) ಇತರ ಸಮಾಜಗಳೊಂದಿಗಿನ ಸಂಬಂಧ ಎಂದರೆ ಇತರ ರಾಷ್ಟ್ರಗಳು ಹಾಗೂ ದೇಶಗಳೊಡನಿರುವ ಸಂಬಂಧ ಇದೆಲ್ಲವನ್ನು ಗಣನೆಗೆ ತೆಗೆದುಕೊಂಡರೆ – ಅದು ಅವಶ್ಯವಾಗಿ ಪೃಥ್ವಿಯ ಮೇಲಿನ ಅತಿಮಾನಸ ಪರಿವರ್ತನೆಗೆ ಪ್ರವೇಶ

ಪಡೆಯಬೇಕು, ಏಕೆಂದರೆ ರಾಷ್ಟ್ರೀಯ ಜೀವನ ಮತ್ತು ದೇಶಗಳ ನಡುವಿರುವ ಸಂಬಂಧ, ಅವುಗಳಿರುವ ಹಾಗೆ ಉಳಿದುಕೊಂಡಿರುವವರೆಗೆ ಪೃಥ್ವಿಯ ಮೇಲೆ ಅತಿಮಾನಸ ಜೀವನವನ್ನು ಜೀವಿಸುವುದು ಬಹಳ ಅಸಾಧ್ಯವಾಗುತ್ತದೆ. ಹಾಗಾಗಿ ಅದು ಬದಲಾಗಲೇಬೇಕಾಗುತ್ತದೆ. ನಾವು ಅದರೊಂದಿಗೆಯೂ ಕೂಡ ವ್ಯವಹರಿ–ಸಬೇಕಾಗುತ್ತದೆ. ಆರ್ಥಿಕ ವಿಷಯಗಳನ್ನು ಕುರಿತು ಹೇಳುವುದಾದರೆ, ಅದು ವಿನಿಮಯಕ್ಕಾಗಿ ಹಾಗೂ ಉತ್ಪಾದನೆಗಾಗಿ ಒಂದು ಸಾಧನವನ್ನು ಕಂಡುಕೊಳ್ಳು–ವುದಾಗಿದೆ – "ಸರಳವಾದದ್ದು", ಸರಿ, ಅದು ಸರಳವಾಗಿರಬೇಕು, ಪ್ರಾಚೀನ ಕಾಲದ ಪದ್ಧತಿಗಿಂತ ಹೆಚ್ಚು ಸರಳವಾಗಿರಬೇಕು, ಆ ಪದ್ಧತಿಯಲ್ಲಿ ಒಂದು ವಸ್ತುವನ್ನು ಪಡೆಯಲು ಮನುಷ್ಯರು ತಮ್ಮ ವತಿಯಿಂದ ಒಂದು ವಸ್ತುವನ್ನು ಕೊಡಬೇಕಾಗುತ್ತಿತ್ತು, ಇದು ತಾತ್ವಿಕವಾಗಿ – ಅದು ತಾತ್ವಿಕವಾಗಿ ವಿಶ್ವದಾದ್ಯಂತ ಹರಡಿಕೊಂಡದ್ದು ಹಾಗೂ ವಿಶ್ವಂಭರವಾದದ್ದು, ಇದು ಒಟ್ಟಿನಲ್ಲಿ ಅತ್ಯಗತ್ಯವಾದದ್ದು, ಅದರಿಂದ ಜೀವನ ಸರಳವಾಗುತ್ತದೆ. ಈಗ ಮಾನವ ಸ್ವಭಾವದೊಂದಿಗೆ ಅದು ತದ್ವಿರುದ್ಧ ರೀತಿಯಲ್ಲಿ ಸಂಭವಿಸುತ್ತದೆ! ಪರಿಸ್ಥಿತಿ ಹೇಗಿದೆ ಎಂದರೆ, ಅದು ಬಹುಮಟ್ಟಿಗೆ ಅಸಹನೀಯವಾಗಿದೆ. ಇತರ ದೇಶಗಳೊಂದಿಗೆ ಕನಿಷ್ಠಮಟ್ಟದ ಸಂಬಂಧ ಹೊಂದಿರುವುದು ಬಹುಮಟ್ಟಿಗೆ ಅಸಾಧ್ಯವಾಗಿವೆ ಮತ್ತು ಬಹಳ ಬಡಾಯಿಕೊಚ್ಚಿಕೊಂಡಿದ್ದ ವಿನಿಮಯದ ಸಾಧನ, ಸರಳೀಕರಣಗೊಳಿಸುವುದರ ಬದಲಾಗಿ ಗೋಜಲು ಸ್ಥಿತಿಯನ್ನುಂಟುಮಾಡಿದೆ, ನಾವು ಬಿಕ್ಕಟ್ಟಿನ ಸ್ಥಿತಿಯನ್ನು ಸ್ವಲ್ಪ ಸಮಯದಲ್ಲಿಯೇ ತಲುಪಲಿದ್ದೇವೆ, ಏನನ್ನೂ ಕೈಕೊಳ್ಳಲಾರದ ಸ್ಥಿತಿಗೆ ಅತಿ ಹತ್ತಿರವಾಗಿದ್ದೇವೆ, ಪ್ರತಿಯೊಂದರಲ್ಲಿ ನಾವು ಕಟ್ಟಿಹಾಕಿಕೊಂಡಿದ್ದೇವೆ. ಸರಿ, ಇವೆರಡು ಲಕ್ಷಣಗಳು ಹೆಚ್ಚಿನ ರೀತಿಯಲ್ಲಿ ವಿರೋಧಿಸುತ್ತವೆ.

ಮಾನವ ಪ್ರಜ್ಞೆಯಲ್ಲಿ ಇದು ಅತ್ಯಂತ ಅಜ್ಞಾನದ, ಅಪ್ರಜ್ಞೆಯ, ಸರ್ವಸಾಧಾರಣವಾಗಿ ದುಷ್ಟ ಸಂಕಲ್ಪದ ಶಕ್ತಿಗಳಿಗೆ ಅಧೀನವಾಗಿದೆ. ಇದೇ ವಿಷಯ ಎಲ್ಲ ಪ್ರಗತಿಯನ್ನು, ಸತ್ಯದತ್ತ ಎಲ್ಲ ಮುನ್ನಡೆಯನ್ನು ನಿರಾಕರಿಸುತ್ತದೆ; ದುರ್ದೈವವಶಾತ್ ಇದೇ ವಿಷಯ ಪ್ರತಿಯೊಬ್ಬ ಮಾನವ ವ್ಯಕ್ತಿಯಲ್ಲಿ ತಡೆಯನ್ನುಂಟುಮಾಡುವ ಲಕ್ಷಣವಾಗಿದೆ. ಇದೇ ಲಕ್ಷಣ ಸಂಕುಚಿತ ಮನಸ್ಸಿನ

ಹೆಡ್ಡತನದಿಂದ ಉಳಿದುಕೊಳ್ಳುತ್ತದೆ ಮತ್ತು ರೂಢಿಯಲ್ಲಿರದ ಏನನ್ನೂ ತಿಳಿದುಕೊಳ್ಳುವುದನ್ನು ನಿರಾಕರಿಸುತ್ತದೆ. ಅಲ್ಲಿ ಈ ವಿಷಯಗಳನ್ನು ಕೈಗೆತ್ತಿಕೊಳ್ಳು–ವುದು ಹಾಗೂ ಪರಿವರ್ತನೆಗೆ ಒಳಪಡಿಸುವುದು ನಿಜವಾಗಿ ವೀರೋಚಿತ ಕ್ರಿಯೆ–ಯಾಗಿರುತ್ತದೆ. ಸರಿ, ನಾವು ಇದನ್ನು ಕೈಕೊಳ್ಳಲು ಪ್ರಯತ್ನಿಸುತ್ತಿದ್ದೇವೆ, ಇದನ್ನು ಕೈಕೊಳ್ಳದಿದ್ದರೆ ಪೃಥ್ವಿಯ ಮೇಲಿನ ಸ್ಥಿತಿಗಳನ್ನು ಬದಲಾಯಿಸುವುದು ಅಸಾಧ್ಯ–ವಾಗುತ್ತದೆ.

*

**ಅವಶ್ಯವಾದ ನೆಗೆತ**

ಅದು ಸಾಪೇಕ್ಷವಾಗಿ– ಬಹಳ ಸಾಪೇಕ್ಷವಾಗಿ – ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗಳನ್ನು ಬದಲಾಯಿಸುವುದು, ರಾಜಕೀಯ ಹಾಗೂ ಆಯವ್ಯಯದ ಸ್ಥಿತಿಗಳನ್ನು ಬದಲಾಯಿಸುವುದಕ್ಕಿಂತ ಹೆಚ್ಚು ಸುಲಭವಾದದ್ದು. ಕೆಲವೊಂದು ಸರ್ವಸಾಮಾನ್ಯ ವಿಶ್ವವ್ಯಾಪಕ ವಿಚಾರಗಳಿವೆ, ಅವು ಆಯವ್ಯಯದ ಹಾಗೂ ಸಾಮಾಜಿಕ ದೃಷ್ಟಿಕೋನದಿಂದ ಇವೆ, ಮಾನವ ಯೋಚನೆಗೆ ನಿಲುಕುವಂತಹವಿವೆ; ಕೆಲವೊಂದು ವಿಮೋಚನೆಗಳು, ಕೆಲಮಟ್ಟಿಗಿನ ವಿಸ್ತರಿಸಿಕೊಳ್ಳುವಿಕೆ, ಕೆಲವೊಂದು ಸಾಮೂಹಿಕ ಸಂಘಟನೆಗಳು ಇವೆಲ್ಲ ಇವೆ, ಅವು ಅರ್ಥರಹಿತವಾದವುಗಳು ಹಾಗೂ ಸಾಧಿಸ–ಲಾಗದಂತಹವು ಎಂದು ತೋರಿಬರುವುದಿಲ್ಲ. ಆದರೆ ಆ ಎರಡು ಪ್ರಶ್ನೆಗಳನ್ನು ಸ್ಪರ್ಶಿಸಿದ ಕೂಡಲೆ, ಅವು ಪ್ರಧಾನ ಮಹತ್ವವುಳ್ಳವಾಗಿದ್ದರೂ ಕೂಡ, ಅದರಲ್ಲಿಯೂ ವಿಶೇಷವಾಗಿ ರಾಜಕೀಯ ಪ್ರಶ್ನೆ, ಅದು ಬಹಳ ಭಿನ್ನವಾಗಿರುತ್ತದೆ. ಏಕೆಂದರೆ ಎಲ್ಲ ಆಯವ್ಯಯದ ಜಟಿಲತೆಯನ್ನು ತೊಡೆದು ಹಾಕಿದ ಜೀವನವನ್ನು ಕಲ್ಪಿಸಿಕೊಳ್ಳ–ಬಹುದು, – ಆದಾಗ್ಯೂ ಶಬ್ದಗಳ ಮೇಲೆ ಆಟವಾಡದೆ ಅದು ನಿಜ ಎನ್ನಬಹುದಾದ ಬಡತನವಾಗಿರುತ್ತದೆ. ಆಯವ್ಯಯದ ಸಾಧ್ಯತೆಗಳು ಹಾಗೂ ವಿಧಾನಗಳು ಏನನ್ನು ತರಬಲ್ಲವೋ ಅದರಲ್ಲಿ ಅಸಾಧಾರಣ ಸಂಪತ್ತು ಹಾಗೂ ಸಾಧ್ಯತೆಗಳಿರುತ್ತವೆ, ಏಕೆಂದರೆ ಅವುಗಳನ್ನು ಸರಿಯಾದ ರೀತಿಯಲ್ಲಿ, ನಿಜವಾದ ಮನೋಭಾವದಿಂದ ಉಪಯೋಗಿಸಿದರೆ ಅದು ಮಾನವ ಸಂಬಂಧಗಳನ್ನು ಕುರಿತು ಕೈಗೆತ್ತಿಕೊಳ್ಳು–ವಿಕೆಗಳನ್ನು ಬಹುಮಟ್ಟಿಗೆ ಸರಳಗೊಳಿಸುತ್ತದೆ, ಇತರ ಸ್ಥಿತಿಗಳಲ್ಲಿರುವುದಕ್ಕಿಂತ

ಜೀವನದ ಹೆಚ್ಚಿನ ಸಂಕೀರ್ಣತೆ ಸಾಧ್ಯವಾಗುವಂತೆ ಮಾಡುತ್ತದೆ, ಈ ಸಾಧ್ಯತೆ ಆ ಇತರ ಸ್ಥಿತಿಗಳಲ್ಲಿ ಕಠಿಣವಾಗಿರುತ್ತದೆ. ಏಕೆ ಎಂಬುದು ನನಗೆ ತಿಳಿಯದು– ಅತ್ಯಂತ ಕೆಟ್ಟದ್ದಾದುದು ಅತ್ಯಂತ ಒಳ್ಳೆಯದಕ್ಕಿಂತ ಮೊದಲು ಬರುತ್ತದೆ ಎಂಬುದರ ಹೊರತಾಗಿ– ಸರಳೀಕರಣದ ಮಾರ್ಗವನ್ನು ಅನುಸರಿಸುವುದರ ಬದಲಾಗಿ ಜನರು ಜಟಿಲತೆಯ ಮಾರ್ಗವನ್ನು ಅನುಸರಿಸಿದ್ದಾರೆ. ಅದೆಷ್ಟರ ಮಟ್ಟಿಗೆಂದರೆ ಜಗತ್ತಿನ ಒಂದು ತುದಿಯಿಂದ ಇನ್ನೊಂದು ತುದಿಗೆ ಎರಡೇ ದಿನಗಳಲ್ಲಿ ನಿಮ್ಮನ್ನು ಕೊಂಡೊಯ್ಯುವ ವಿಮಾನಗಳಿದ್ದಾಗ್ಯೂ, ಅವು ಜೀವನವನ್ನು 'ಚಿಕ್ಕ'ದನ್ನಾಗಿ, 'ಹತ್ತಿರ'ದ್ದನ್ನಾಗಿ ಮಾಡುತ್ತವೆ, ಅದೆಷ್ಟರ ಮಟ್ಟಿಗೆಂದರೆ ಪೃಥ್ವಿಯ ಸುತ್ತ 80 ದಿನಗಳು ಬೇಕಾಗಿಲ್ಲ, ಕೆಲವೇ ದಿನಗಳಲ್ಲಿ ಹೋಗಬಹುದಾಗಿದೆ, ಅದೆಲ್ಲ ಇದ್ದಾಗ್ಯೂ ವಿನಿಮಯದ ಜಟಿಲತೆಗಳು, ಉದಾಹರಣೆಗೆ, ಎಷ್ಟೊಂದು ಭವ್ಯವಾಗಿವೆ ಎಂದರೆ ಬಹಳಷ್ಟು ಜನರು ಮನೆಯಿಂದ ಹೊರಬೀಳಲಾರರು– ತಾವಿರುವ ದೇಶದಿಂದ ಇನ್ನೊಂದು ದೇಶಕ್ಕೆ ಹೋಗುವ ವಿಚಾರ ಕುರಿತು ನಾನು ಹೇಳುತ್ತಿದ್ದೇನೆ– ಏಕೆಂದರೆ ಬೇರೆ ದೇಶಕ್ಕೆ ಹೋಗಲು ಅವರ ಬಳಿ ಸಾಧನವಿರುವುದಿಲ್ಲ ಮತ್ತು ಅವರು ತಮಗೆ ಅವಶ್ಯವಿರುವಷ್ಟು ಹಣವನ್ನು ಕೇಳಿದಾಗ ಅವರಿಗೆ "ನೀವು ಅಲ್ಲಿಗೆ ಹೋಗುವುದು ಬಹಳ ಮಹತ್ವದ್ದಾಗಿದೆಯೆ? ಬಹುಶಃ ನೀವು ಸ್ವಲ್ಪ ಕಾಲ ಕಾದುಕೊಂಡಿರಬೇಕಾಗುವುದು, ಏಕೆಂದರೆ ಸದ್ಯದ ಕ್ಷಣದಲ್ಲಿ ಅದು ನಮಗೆ ಬಹಳ ಕಠಿಣವಾಗಿದೆ." ನಾನು ತಮಾಷೆ ಮಾಡುತ್ತಿಲ್ಲ, ಅದು ಬಹಳ ಗಂಭೀರವಾದ ವಿಷಯ, ಇದು ಸಂಭವಿಸುತ್ತಲೇ ಇರುತ್ತದೆ. ಇದರರ್ಥ ನಾವು ಜನ್ಮತಾಳಿದ ಸ್ಥಳಕ್ಕೆ ಹೆಚ್ಚು ಚೆಚ್ಚಾಗಿ ಸೆರೆಯಾಳುಗಳಾಗುತ್ತಿದ್ದೇವೆ, ಅದು ಹಾಗಿರುವಾಗ ಎಲ್ಲ ವೈಜ್ಞಾನಿಕ ಪ್ರವೃತ್ತಿಗಳು ದೇಶಗಳ ನಡುವೆ ಹೆಚ್ಚಿನ ಸಾಮೀಪ್ಯ ತರುವತ್ತ ಇವೆ, ಅದರಿಂದಾಗಿ ಬಹಳ ಸರಳವಾಗಿ ವಿಶ್ವಕ್ಕೆ, ಅದೇನೇ ಇರಲಿ, ಇಡೀ ಜಗತ್ತಿಗೆ ಸರಳವಾಗಿ ಸೇರಿದವರಾಗಿರುತ್ತೇವೆ.

**CWM, 9/167–69** **– ಶ್ರೀಮಾತೆ**

*

ಧನ ಧನವನ್ನು ಗಳಿಸುವುದಕ್ಕಾಗಿ ಇದೆ ಎಂಬ ಅರ್ಥ ಹೊಂದಿಲ್ಲ, ಹೊಸ ಸೃಷ್ಟಿಯ ಆಗಮನಕ್ಕಾಗಿ ಪೃಥ್ವಿ ತಯಾರಾಗುವಂತೆ ಮಾಡುವುದಕ್ಕಾಗಿ ಧನವಿದೆ.

*

ಧನ ಒಂದು ಶಕ್ತಿ, ಅದು ವ್ಯಕ್ತಿಯ ವಶದಲ್ಲಿರಬಾರದು, ಗಾಳಿ, ನೀರು ಹಾಗೂ ಅಗ್ನಿಗಳ ಹಾಗೆ ಇರಬೇಕು.

ಆಯವ್ಯಯದ ಸಾಮರ್ಥ್ಯ ಪ್ರಾಣಿಕ ಶಕ್ತಿಯೊಂದು ಭೌತಿಕ ರೂಪ ತಾಳುವುದರಿಂದ ಬಂದಿದೆ, ಅದು ಕ್ರಿಯೆಯ ಅತ್ಯಂತ ಶ್ರೇಷ್ಠ ಸಾಮರ್ಥ್ಯವಾಗು–ವಂತೆ ಅದಕ್ಕೆ ತಿರುವನ್ನು ಕೊಡಲಾಗಿದೆ. ಅದಕ್ಕೆ ಆಕರ್ಷಿಸುವ, ದೊರಕಿಸುವ ಮತ್ತು ಉಪಯೋಗವಾಗುವ ಸಾಮರ್ಥ್ಯವಿದೆ. ಎಲ್ಲ ಸಾಮರ್ಥ್ಯಗಳ ಹಾಗೆ ಅದನ್ನು ಭಗವಂತನ ಸೇವೆಗಾಗಿ ಇರಿಸಬೇಕು.

**1958 ದಿನಾಂಕ ಸಮೂದಿಸದೆ ಇದ್ದದ್ದು** **– ಶ್ರೀಮಾತೆ**

*

**ಧನ ಸಾಮೂಹಿಕ ಒಡೆತನಕ್ಕೆ ಸೇರಿದುದಾಗಿದೆ**

ಧನ ಯಾರಿಗೂ ಸೇರಿದುದಲ್ಲ, ಅದು ಸಾಮೂಹಿಕ ಒಡೆತನಕ್ಕೆ ಸೇರಿದುದಾಗಿದೆ. ಯಾರಲ್ಲಿ ಸಮಗ್ರ, ಸರ್ವಸಾಧಾರಣ ಹಾಗೂ ವಿಶ್ವಂಭರ ದೃಷ್ಟಿ ಇರುತ್ತದೆಯೋ ಅಂತಹರು ಮಾತ್ರ ಅದನ್ನು ಉಪಯೋಗಿಸಬೇಕು. ನಾನು ಅಧಿಕವಾಗಿ ಸೇರಿಸಿ ಹೇಳುವುದೇನೆಂದರೆ ದೃಷ್ಟಿ ಸಮಗ್ರ ಹಾಗೂ ಸಾರ್ವತ್ರಿಕವಾಗಿ ಇರಬೇಕಷ್ಟೇ ಅಲ್ಲ, ಆದರೆ ಅವಶ್ಯವಾಗಿ ದೈವೀ ಸತ್ಯದ್ದಾಗಿರಬೇಕು, ಅದರರ್ಥ ನೀವು ವಿಶ್ವದ ಪ್ರಗತಿಗೆ ಅನುರೂಪವಾದ ರೀತಿಯಲ್ಲಿ ಉಪಯೋಗಿಸುವುದು ಮತ್ತು ಚಪಲತೆಗೆ ಅನುಗುಣವಾಗಿ ಉಪಯೋಗಿಸುವುದು ಇವೆರಡರಲ್ಲಿ ಭಿನ್ನತೆ ಕಂಡುಕೊಳ್ಳುತ್ತೀರಿ. ಆದರೆ ಅವು ವಿವರಗಳು, ಏಕೆಂದರೆ ದೋಷಗಳು ಕೂಡ ಒಂದು ದೃಷ್ಟಿಕೋನದಿಂದ ಹಾಳುಮಾಡುವ ರೀತಿಯಲ್ಲಿ ಇರುವವುಗಳು ಕೂಡ – ಸಾರ್ವತ್ರಿಕ ಪ್ರಗತಿಗೆ ಸಹಾಯ ಮಾಡುತ್ತವೆ, ಅವು ವಿರುದ್ಧ ದಿಶೆಯಲ್ಲಿ ಕಲಿಸಿಕೊಡುವ ಪಾಠಗಳು.

ಥಿಯೋನ್ ಏನು ಹೇಳಿದ್ದ ಎಂಬುದು ಇನ್ನೂ ನನ್ನ ನೆನಪಿನಲ್ಲಿದೆ. (ಥಿಯೋನ್ ಲೋಕೋಪಕಾರ(philonthrophy)ದ ವಿರುದ್ಧವಾಗಿದ್ದ) ಅವನು ಹೇಳುತ್ತಿದ್ದ "ಲೋಕೋಪಕಾರ ಮಾನವ ದುಃಖವನ್ನು ಹೆಚ್ಚಿಸುತ್ತದೆ, ಏಕೆಂದರೆ ಮಾನವರ ದುಃಖವಿಲ್ಲದೆ ಅದು ತನ್ನ ಮೂಲೋದ್ದೇಶವನ್ನು ಕಳೆದುಕೊಳ್ಳುತ್ತದೆ." ಆ ಶ್ರೇಷ್ಠ ಲೋಕೋಪಕಾರಿಯ ಬಗ್ಗೆ ನಿಮಗೆ ತಿಳಿದಿದೆಯೆ, ... ಅವನ ಹೆಸರೇನಿತ್ತು? ಅವನು ಮಾರ್ಘುರಿನ್‌ನ ಕಾಲದಲ್ಲಿದ್ದ, 'ದಾನಶೀಲತೆಯ ಚಿಕ್ಕ ಸಹೋದರಿಯರು' (Little Sisters of Charity) ಸಂಸ್ಥೆಯನ್ನು ಹುಟ್ಟುಹಾಕಿದ.

ವಿನ್ಸೆಂಟ ದ ಪೌಲ್ (Vincent de Paul)

ಅದೇ ಅದು. ಒಮ್ಮೆ ಮಾರ್ಘುರಿನ್ ಅವನಿಗೆ ಹೇಳಿದ: "ನೀನು ಜನರ ಬಗ್ಗೆ ಕಾಳಜಿ ವಹಿಸಲು ಪ್ರಾರಂಭಿಸಿದಂದಿನಿಂದ ಇರುವಷ್ಟು ಬಡ ಜನರು ಈ ಹಿಂದೆ ಎಂದಿಗೂ ಇರಲಿಲ್ಲ."

**ಅನುಯಾಯಿಯೊಂದಿಗೆ ಮಾತುಕತೆ: ಏಪ್ರಿಲ್ 10, 1968 – ಶ್ರೀಮಾತೆ**

*

**ಅರೋವಿಲೆಯಲ್ಲಿ ನಗದು ಹಣರಹಿತ ಆರ್ಥಿಕ ವ್ಯವಸ್ಥೆಯ ಒಂದು ಪ್ರಯೋಗ[1]**

... ಅಲ್ಲಿ ನಗದು ಹಣವಿರಲಿಲ್ಲ: ಗೋಡೆಗಳ ಮಧ್ಯೆ ಹಣವಿರಲಿಲ್ಲ; ಅನೇಕ ಪ್ರವೇಶ ದ್ವಾರಗಳ ಬಳಿ (ಹೊರಗಿನಿಂದ ಬಂದ ಜನರು) ಬ್ಯಾಂಕುಗಳನ್ನು, ವಹಿವಾಟನ್ನು ನಡೆಸುವ ಮೇಜುಗಳು ಇದ್ದವು, ಅಲ್ಲಿ ಅವರು ಹಣವನ್ನು ಜಮಾ ಮಾಡುತ್ತಿದ್ದರು, ಪ್ರತಿಯಾಗಿ ಟಿಕೀಟುಗಳನ್ನು ಪಡೆಯುತ್ತಿದ್ದರು, ಆ ಟಿಕೀಟುಗಳ ಮೂಲಕ ವಸತಿ ಸ್ಥಳ, ಊಟ, ಅದು ಇದು ಎಂಬುದನ್ನೆಲ್ಲ ಪಡೆಯುತ್ತಿದ್ದರು, ಆದರೆ ಹಣವಿರುತ್ತಿರಲಿಲ್ಲ. ಮತ್ತು ಒಳಗೆ ಯಾರಲ್ಲಿಯೂ ಹಣವಿರುತ್ತಿರಲಿಲ್ಲ,

1. ಅರೋವಿಲ್‌ಗೆ ಸಂಬಂಧಿಸಿದ್ದನ್ನು ಕುರಿತು ಶ್ರೀಮಾತೆಯವರು ಕಂಡ ದರ್ಶನ–ದಲ್ಲಿದ್ದುದನ್ನು ಹೇಳುತ್ತಾರೆ.

ಟಿಕೀಟುಗಳು ದರ್ಶನಕ್ಕಾಗಿ ಬಂದವರಿಗಾಗಿ ಇರುತ್ತಿದ್ದವು, ಅವರು ಪರವಾನಿಗೆ ಪಡೆದು ಒಳಗೆ ಬರುತ್ತಿದ್ದರು. ಅದು ಅತ್ಯದ್ಭುತ ಸಂಘಟನೆಯಾಗಿತ್ತು. ಹಣವಿರಲಿಲ್ಲ ... ನನಗೆ ಹಣ ಬೇಕಾಗಿರಲಿಲ್ಲ!

**ಜೂನ್ 23, 1965** **– ಶ್ರೀಮಾತೆ**

*

**ಸಾಮೂಹಿಕವಾಗಿ ಭಾಗವಹಿಸುವಿಕೆ, ಆದರೆ ತೆರಿಗೆಗಳಿರುವುದಿಲ್ಲ**

"ಅಲ್ಲಿ ಜೀವಿಸುವವರೆಲ್ಲರೂ ಅದರ ಜೀವನದಲ್ಲಿ ಹಾಗೂ ಅಭಿವೃದ್ಧಿಯಲ್ಲಿ ಭಾಗವಹಿಸುವರು."

... ಅವರ ಕ್ಷಮತೆಗಳ ಪ್ರಕಾರ ಹಾಗೂ ಸಾಧನೆಗಳಿಗನುಗುಣವಾಗಿ, ಯಾಂತ್ರಿಕ ರೀತಿಯಲ್ಲಲ್ಲ, "ಪ್ರತಿಯೊಬ್ಬನಿಗೆ ಇಷ್ಟು ಎಂದು." ಇರುವ ವಿಷಯ ಅದೇ. ಅದು ಜೀವಂತವಿರುವ ಹಾಗೂ ನಿಜವಾದ ಏನೋ ಒಂದು, ಯಾಂತ್ರಿಕವಾದದ್ದಲ್ಲ. ಮತ್ತು "ಅವರ ಕ್ಷಮತೆಗಳಿಗನುಗುಣವಾಗಿ" ಎಂದರೆ ಕಾರ್ಖಾನೆ(factory)ಯಂತಹ ಭೌತಿಕ ಸಾಧನವಿರುವ ಮನುಷ್ಯ ಕೊಡುತ್ತಾನೆ, ತನ್ನ ಉತ್ಪಾದನೆಗನುಗುಣವಾಗಿ ಕೊಡುತ್ತಾನೆ. ವ್ಯಕ್ತಿಗಿಷ್ಟು ಎಂದಾಗಲಿ, ತಲಾ ಇಷ್ಟೆಂದಾಗಲಿ ಅಲ್ಲ. ...

"ತೆರಿಗೆ ವಸೂಲು ಮಾಡುವುದಿರುವುದಿಲ್ಲ, ಆದರೆ ಪ್ರತಿಯೊಬ್ಬನೂ ಸಾಮೂಹಿಕ ಯೋಗಕ್ಷೇಮಕ್ಕಾಗಿ ಕಾರ್ಯದಲ್ಲಿ ತನ್ನ ಭಾಗವನ್ನು ಒದಗಿಸುತ್ತಾನೆ, ಅದು (ವಸ್ತು ಇತ್ಯಾದಿ) ಒಂದು ಬಗೆಯದಾಗಿರಬಹುದು ಇಲ್ಲವೆ ಹಣವಾಗಿರ–ಬಹುದು."

ಹಾಗಾಗಿ ಅದು ಸ್ಪಷ್ಟವಾಗಿದೆ: ಯಾವುದೇ ಬಗೆಯ ತೆರಿಗೆಗಳಿರುವುದಿಲ್ಲ, ಆದರೆ ಪ್ರತಿಯೊಬ್ಬನೂ ಕಾರ್ಯ ಕೈಕೊಳ್ಳುವುದರ ಮೂಲಕ ಸಾಮೂಹಿಕ ಯೋಗಕ್ಷೇಮಕ್ಕಾಗಿ ಅದು ಒಂದು ಬಗೆಯದಾಗಿರಬಹುದು, ಇಲ್ಲವೆ ಹಣದ ರೂಪದಲ್ಲಿರಬಹುದು. ಯಾರಲ್ಲಿ ಹಣದ ಹೊರತಾಗಿ ಬೇರೆ ಏನೋ ಇರುವುದಿಲ್ಲವೋ ಅವರು ಹಣ ನೀಡುತ್ತಾರೆ. ಆದರೆ ಸತ್ಯ ಹೇಳುವುದಾದರೆ ಆ

“ಕಾರ್ಯ” ಆಂತರಿಕ ಕಾರ್ಯವಾಗಿರಬಹುದು (ಆದರೆ ಅದನ್ನು ಕುರಿತು ಹೇಳಲಾಗದು, ಏಕೆಂದರೆ ಜನರು ಸಾಕಷ್ಟು ಪ್ರಾಮಾಣಿಕರಾಗಿಲ್ಲ). ಕಾರ್ಯ ರಹಸ್ಯವಾದದ್ದು ಆಗಿರಬಹುದು, ಸಂಪೂರ್ಣವಾಗಿ ಆಂತರಿಕ ಕಾರ್ಯ, ಆದರೆ ಸಹಜವಾಗಿ ಹಾಗಿರುವುದಕ್ಕಾಗಿ ಅದು ಸಂಪೂರ್ಣವಾಗಿ ನಿಷ್ಕಪಟವಾಗಿರಬೇಕು, ನಿಜವಾದದ್ದಿರಬೇಕು, ಮತ್ತು ಕ್ಷಮತೆಯೊಂದಿಗೆ ಕೂಡಿಕೊಂಡಿರಬೇಕು: ನಟನೆ ಇರಬಾರದು. ಆದರೆ ಅದು ಅವಶ್ಯವಾಗಿ ಭೌತಿಕ ರೂಪದ ಕಾರ್ಯವಾಗಿರಲಿಕ್ಕಿಲ್ಲ.

**ಅನುಯಾಯಿಯೊಂದಿಗೆ ಮಾತುಕತೆ: ಡಿಸೆಂಬರ 1967 – ಶ್ರೀಮಾತೆ**

*

ನಿಜವಾದ ಭಾಗವೆಂದರೆ ಇದು: ಪ್ರತಿಯೊಂದು ಮಾನವ ಸತ್ತೆಗೆ ಭೌತಿಕ ಹಕ್ಕಿರುತ್ತದೆ ಆದರೆ ಅದು ಒಂದು ಹಕ್ಕಲ್ಲ. ಸಂಘಟನೆ ಹೇಗಿರಬೇಕು, ಯಾವ ರೀತಿಯಲ್ಲಿ ಅದು ವ್ಯವಸ್ಥೆಗೆ ಒಳಪಟ್ಟಿರಬೇಕು ಎಂದರೆ ಪ್ರತಿಯೊಬ್ಬನ ಭೌತಿಕ ಆವಶ್ಯಕತೆಯನ್ನು ಪೂರೈಸುವಂತಿರಬೇಕು, ಹಕ್ಕು ಮತ್ತು ಸಮತೆ ಇವುಗಳನ್ನು ಕುರಿತು ಇರುವ ವಿಚಾರಗಳ ಪ್ರಕಾರವಲ್ಲ, ಆದರೆ, ಅತ್ಯಂತ ಮೂಲಭೂತ ಆವಶ್ಯಕತೆಗಳನ್ನು ಕುರಿತಾಗಿರಬೇಕು; ಆಗ ಒಮ್ಮೆ ಅದು ಸ್ಥಾಪಿತಗೊಂಡಾಗ, ಪ್ರತಿಯೊಬ್ಬನೂ ತನ್ನ ಜೀವನವನ್ನು ಸಂಘಟಿಸಲು ಮುಕ್ತನಾಗಿರಬೇಕು, ಅವನ ಆರ್ಥಿಕ ಸಾಧನದ ಮೂಲಕ ಅಲ್ಲ, ಆದರೆ ಅವನ ಆಂತರಿಕ ಕ್ಷಮತೆಗಳ ಮೂಲಕ ಆ ಸಂಘಟನೆ ಇರಬೇಕು.

**ಅನುಯಾಯಿಯೊಂದಿಗೆ ಮಾತುಕತೆ: ಡಿಸೆಂಬರ 30, 1967 – ಶ್ರೀಮಾತೆ**

*

**ಹೊಸ ವ್ಯವಸ್ಥೆಯೊಂದರ ಬೀಜಗಳು**

ವಸ್ತು–ವಿಷಯಗಳನ್ನು ಕುರಿತು ಅವುಗಳ ಬೆಲೆ ಕಟ್ಟುವುದರಲ್ಲಿ ತೊಂದರೆಯಿದೆ. ಅದಕ್ಕೆ ಬಹಳ ವಿಶಾಲ ದೃಷ್ಟಿ ಬೇಕಾಗುತ್ತದೆ. ಹಣ ಯಾಂತ್ರಿಕವಾದುದರಿಂದ ಅದರ ಅನುಕೂಲತೆ ಇತ್ತು. ಆದರೆ ಈ ಹೊಸ ಪದ್ಧತಿಯಲ್ಲಿ ಯಾಂತ್ರಿಕತೆ ಬಹಳಷ್ಟಿ–ರುವುದಿಲ್ಲ. ಉದಾಹರಣೆಗೆ ವಿಚಾರವೊಂದಿದೆ: ಅರೋವಿಲೆಯಲ್ಲಿ ಜೀವಿಸುವ

ಯಾರಲ್ಲಿಯೂ ಹಣವಿರುವುದಿಲ್ಲ. – ಹಣದ ಚಲಾವಣೆ ಇರುವುದಿಲ್ಲ, ಆದರೆ ಆಹಾರ ಸೇವಿಸುವುದಕ್ಕಾಗಿ ಪ್ರತಿಯೊಬ್ಬನಿಗೂ ಹಕ್ಕಿರುತ್ತದೆ, ಅದು ಸ್ವಾಭಾವಿಕ–ವಾದದ್ದು. ಬಹಳ ಕಾರ್ಯರೂಪದ ಮಟ್ಟದಲ್ಲಿ ನಾವು ಆಹಾರ ಕುರಿತು ಎಲ್ಲ ಸಾಧ್ಯತೆಗಳ ಕಲ್ಪನೆ ಮಾಡಿಕೊಂಡಿದ್ದೆವು, ಅದು ಪ್ರತಿಯೊಬ್ಬನ ರುಚಿಗೆ, ಆವಶ್ಯಕತೆಗೆ ಅನುಗುಣವಾಗಿರಬೇಕಿತ್ತು (ಉದಾಹರಣೆಗೆ ಸಸ್ಯಾಹಾರದ ಅಡುಗೆ, ಮಾಂಸಾಹಾರದ ಅಡುಗೆ, ಪಥ್ಯದ ಅಡುಗೆ ಇತ್ಯಾದಿ.) ಮತ್ತು ಅಲ್ಲಿಂದ ಆಹಾರ ಪಡೆಯಲು ಇಚ್ಛಿಸುವವರು ಅದಕ್ಕೆ ಪ್ರತಿಯಾಗಿ ಯಾವುದೊಂದು ಕಾರ್ಯ ಕೈಕೊಳ್ಳಬೇಕು. ಕಾರ್ಯ ರೂಪದಲ್ಲಿ ಅದನ್ನು ಸಂಘಟಿಸುವುದು ಕಠಿಣವಾದದ್ದು, ಅದು ವ್ಯಾವಹಾರಿಕ ಮಟ್ಟದಲ್ಲಿರಬೇಕಾಗುತ್ತದೆ. ಅರೋವಿಲೆ ಪಟ್ಟಣದ ಸುತ್ತ ಇರುವ ಕೃಷಿ ಭೂಮಿಯನ್ನು ಕೊಳ್ಳಲು ಯೋಜನೆ ರೂಪಿಸಿದ್ದೆವು. ಅದರಲ್ಲಿ ಪಟ್ಟಣದ ಬಳಕೆಗೆ ಬೇಕಾಗುವ ಕೃಷಿ ಉತ್ಪನ್ನಗಳನ್ನು ದೊರಕಿಸುವಂತಾಗತ್ತಿತ್ತು. ಆದರೆ ಆ ಭೂಮಿಯಲ್ಲಿ ಒಕ್ಕಲುತನ ನಡೆಸಲು ನಮಗೆ ಹಣದ ಆವಶ್ಯಕತೆ ಇದೆ, ಇಲ್ಲವೆ ಅದಕ್ಕೆ ಬೇಕಾದ ಭೌತಿಕ ವಸ್ತುಗಳನ್ನು ದೊರಕಿಸುವುದಿದೆ. ಎಲ್ಲ ವಿವರಗಳಲ್ಲಿ ನಾನು ಈಗ ಇಡೀ ಸಮಸ್ಯೆಯನ್ನು ಎದುರಿಸಬೇಕಾಗಿದೆ, ಮತ್ತು ಅದು ಸುಲಭವಾಗಿಲ್ಲ.

ಅರ್ಥ ಮಾಡಿಕೊಳ್ಳುವ ಕೆಲವು ಜನರಿದ್ದಾರೆ.

ಇರುವ ವಿಚಾರವೆಂದರೆ ಅರೋವಿಲೆಯಲ್ಲಿ ಸುಂಕವಿರುವುದಿಲ್ಲ, ತೆರಿಗೆ–ಗಳಿರುವುದಿಲ್ಲ. ಅರೋವಿಲೆಯನ್‌ರಿಗೆ ವೈಯಕ್ತಿಕ ಆಸ್ತಿ ಇರುವುದಿಲ್ಲ. ಆ ರೀತಿಯಾಗಿ ಹಾಳೆಗಳ ಮೇಲೆ ಬರೆದಿರುವುದಿಲ್ಲ, ಅದು ಬಹಳ ಮನೋಹರ–ವಾದದ್ದು, ಆದರೆ ಅದನ್ನು ಕಾರ್ಯ ರೂಪದಲ್ಲಿ ತರುವಾಗ . . .

ಸಮಸ್ಯೆ ಯಾವಾಗಲೂ ಅದೇ ಆಗಿರುತ್ತದೆ. ಜವಾಬ್ದಾರಿ ಹೊತ್ತುಕೊಂಡವರು ವಿಶ್ವಂಭರ ಪ್ರಜ್ಞೆಯುಳ್ಳ ಜನರಾಗಿರಬೇಕು, ಹಾಗಿಲ್ಲದಿದ್ದರೆ ... ವೈಯಕ್ತಿಕ ಪ್ರಜ್ಞೆ ಇದ್ದ ಎಲ್ಲೆಡೆಯಲ್ಲಿ ಅದರರ್ಥ ಆಳಿಕೆ ನಡೆಸಲು ಸಮರ್ಥರಾಗಿರದೆ ಇದ್ದ ಒಬ್ಬರಿರುತ್ತಾರೆ. – ಸರಕಾರಗಳು ಹೇಗಿವೆ ಎಂಬುದನ್ನು ನೋಡುತ್ತೇವೆ, ಅದು ಭಯಾನಕವಾಗಿದೆ.

**ಅನುಯಾಯಿಯೊಂದಿಗೆ ಮಾತುಕತೆ: ಫೆ. 14, 1968** **– ಶ್ರೀಮಾತೆ**

*

**ಮೂರು ವಿಷಯಗಳ ವಿರುದ್ಧ ಎಚ್ಚರಿಕೆ ವಹಿಸಬೇಕು**

ಈ ಎಲ್ಲ ಅಹಂಕಾರದ ಪ್ರತಿಕ್ರಿಯೆಗಳು, ಮಹತ್ವಾಕಾಂಕ್ಷೆಯ ಪ್ರತಿಕ್ರಿಯೆಗಳು, ಸ್ವ–ಪ್ರತಿಷ್ಠೆಯ ಪ್ರತಿಕ್ರಿಯೆಗಳು ಇಲ್ಲದಿದ್ದಾಗ– ಮೋಸಗೊಳಿಸುವಂತಹ ಪ್ರತಿಕ್ರಿಯೆಗಳ ಬಗ್ಗೆ ಮಾತನಾಡುವುದೇ ಬೇಡ (ಕೆಳಗೆ ಕೈ ಮಾಡಿ ತೋರಿಸುವ ಸಂಕೇತ) – ವಿಷಯಗಳು ಸರಳ ಹಾಗೂ ಸುಲಭವಾಗುತ್ತಿದ್ದವು. ಹೌದು ಈ ಮೂರು ವಿಷಯಗಳಿವೆ: ಮಹತ್ವಾಕಾಂಕ್ಷೆ, ಅದಕ್ಕೆ ಸೊಗಸಾಗಿ ಕಾಣುವಂತೆ ಪ್ರದರ್ಶಿಸಿ–ಕೊಳ್ಳುವ, ಪ್ರಾಬಲ್ಯ ಮೆರೆಸುವ ಆವಶ್ಯಕತೆ ಇರುತ್ತದೆ; ಸ್ವ–ಪ್ರತಿಷ್ಠೆ ಇಲ್ಲವೆ ಜಂಬ (ನಿಮ್ಮನ್ನು ಕುರಿತು ನಿಮ್ಮ ಮೌಲ್ಯಕ್ಕನುಗುಣವಾಗಿ ಮೆಚ್ಚುಗೆ ವ್ಯಕ್ತಪಡಿಸದೆ ಇದ್ದಾಗ, ನೀವು ಸಿಟ್ಟಿಗೇಳುತ್ತೀರಿ, ಜಗಳಾಡುತ್ತೀರಿ, ಅಲ್ಲಿ ಕಿರಿಕಿರಿ ಹಾಗೂ ಘರ್ಷಣೆಗಳಿ–ರುತ್ತವೆ,) ಮತ್ತು ಕೊನೆಯದಾಗಿ ಹಣಕ್ಕಾಗಿ ಹಸಿವು, ದುರಾಸೆ, ವಶಪಡಿಸಿ–ಕೊಳ್ಳುವುದಕ್ಕೆ ಆಸೆ, ಲೋಭಗಳಿರುತ್ತವೆ: ಸಂದರ್ಭವಿದ್ದಾಗ "ಅತಿ ಹೆಚ್ಚಿನದನ್ನು ಸಾಧಿಸುವುದು" ನಿಮಗೆ ಬೇಕಾಗಿರುತ್ತದೆ.– "ನನಗೆ ಲಾಭ ಬೇಕಾಗಿದೆ..." ಈ ಮೂರು ವಿಷಯಗಳೊಂದಿಗೆ ಪ್ರತಿಯೊಂದೂ ಗೊಂದಲ ಹುಟ್ಟಿಸುತ್ತದೆ.

*


**ಹಣದ ಆಳಿಕೆ ಅದರ ಕೊನೆಯ ದಿನಗಳತ್ತ ಎಳೆತಕ್ಕೊಳಗಾಗಿದೆ**

ನಾವು ಹಣದ ಆಳಿಕೆ ಎಂದು ಕರೆಯಬಹುದಾದದ್ದು ಅದರ ಕೊನೆಯ ದಿನಗಳತ್ತ ಎಳೆತಕ್ಕೊಳಗಾಗಿದೆ.

ಜಗತ್ತಿನಲ್ಲಿ ಇಲ್ಲಿಯವರೆಗೆ ಅಸ್ತಿತ್ವದಲ್ಲಿದ್ದ ವ್ಯವಸ್ಥೆ ಮತ್ತು ಬರಲಿರುವ ವ್ಯವಸ್ಥೆ (ಉದಾಹರಣೆಗೆ ನೂರು ವರ್ಷಗಳ ಕಾಲಾವಧಿಯಲ್ಲಿ) ಇವುಗಳ ನಡುವಿನ ಸಂಕ್ರಮಣದ ಕಾಲ ಬಹಳ ಕಠಿಣವಾಗಿದೆ.

**ಅನುಯಾಯಿಯೊಂದಿಗೆ ಮಾತುಕತೆ: ಫೆ. 14, 1964** **– ಶ್ರೀಮಾತೆ**

*



ಧನದ ಸಾಮರ್ಥ್ಯ ನಿಮಗೆ ಒದಗಿಸುವ ಸಾಧನಗಳಿಂದ, ತರುವ ವಸ್ತುಗಳಿಂದ ವಿರಾಗಿಯ ಹಾಗೆ ಮುದುಡಿಕೊಳ್ಳಬಾರದು, ಹಾಗೆಯೆ ಅದು ಸಾಧ್ಯವಾಗಿಸುವ ತೃಪ್ತಿಗಳಲ್ಲಿ ರಾಜಸಿಕ ಆಸಕ್ತಿಯಿಂದ ಲೋಲರಾಗುವ ದಾಸ್ಯಕ್ಕೆ ಒಳಗಾಗಬಾರದು. ಸಂಪತ್ತನ್ನು ಶ್ರೀಮಾತೆಯವರಿಗಾಗಿ ಮರಳಿ ಜಯಿಸಿ ತರಬೇಕಾದ ಹಾಗೂ ಅವರ ಸೇವೆಗಾಗಿ ಇರಿಸಬೇಕಾದ ಸಾಮರ್ಥ್ಯವೆಂದು ಪರಿಗಣಿಸಿರಿ.

ಎಲ್ಲ ಸಂಪತ್ತು ಭಗವಂತನಿಗೆ ಸೇರಿದ್ದಾಗಿದೆ, ಅದನ್ನು ತಮ್ಮಲ್ಲಿ ಇಟ್ಟು–ಕೊಂಡವರು ಧರ್ಮದರ್ಶಿಗಳಾಗಿರುತ್ತಾರಲ್ಲದೆ ಅದರ ಒಡೆಯರಾಗಿರುವುದಿಲ್ಲ. ಅದು ಇಂದು ಅವರಲ್ಲಿದ್ದರೆ ನಾಳೆ ಬೇರೆಲ್ಲೋ ಇರಬಹುದು. ಆ ಸಂಪತ್ತು ಅವರಲ್ಲಿದ್ದಾಗ ಅದನ್ನು ಉಪಯೋಗಿಸುವ ಉದ್ದೇಶದಲ್ಲಿ ಯಾವ ಮನೋಧರ್ಮ ಹಾಗೂ ಪ್ರಜ್ಞೆಗಳಿಂದ ತಮ್ಮ ನ್ಯಾಸ ವಿಶ್ವಾಸವನ್ನು ಪಾಲಿಸಿಕೊಂಡು ಹೋಗುತ್ತಾರೆ ಎಂಬುದರ ಮೇಲೆ ಎಲ್ಲವೂ ಅವಲಂಬಿಸಿದೆ.

**CWSA, 32/10** **– ಶ್ರೀ ಅರವಿಂದರು**

*

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 26/01/2017ರಂದು ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಅಜಿತ್ ಸಬ್ನೀಸ್ ಧ್ವಜಾರೋಹಣ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶಾಲಾ ವಿದ್ಯಾರ್ಥಿ ವೃಂದ ದೇಶಭಕ್ತಿಗೀತೆ ಮತ್ತು ಗಣರಾಜ್ಯದ ಮಹತ್ವದ ಕುರಿತು ಭಾಷಣ ಮಾಡಿದರು. ನಂತರ ಅಧ್ಯಕ್ಷರು ವಿದ್ಯಾರ್ಥಿಗಳ ಕರ್ತವ್ಯದ ಕುರಿತು ಕಿವಿಮಾತು ಹೇಳಿದರು. ಸಂಸ್ಥೆಯ ಆಡಳಿತಾಧಿಕಾರಿ, ಪ್ರಾಂಶುಪಾಲರು, ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ವಂದೇಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ದಿನಾಂಕ 31/01/2017ರಂದು ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ದ.ರಾ. ಬೇಂದ್ರೆಯವರ ಹುಟ್ಟು ಹಬ್ಬವನ್ನು ಆಚರಿಸಲಾಯಿತು. ಬೇಂದ್ರೆಯವರ ಭಾವಚಿತ್ರಕ್ಕೆ ಶಾಲಾ ಪ್ರಾಂಶುಪಾಲರು ಪುಷ್ಪನಮನ ಸಲ್ಲಿಸುವುದ–ರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಬೇಂದ್ರೆಯವರ ಕವನಕ್ಕೆ ಶಾಲಾ ವಿದ್ಯಾರ್ಥಿಗಳು ನೃತ್ಯ ಮಾಡಿದರು.

ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್–ಮತ್ತು ಬೇಂದ್ರೆಯವರ ಒಡನಾಟದ ಬಗ್ಗೆ ಕಿರು ಪರಿಚಯ ಮಾಡಿಕೊಡಲಾಯಿತು. ಶಾಲಾ ಗಾಯನ ವೃಂದದ ವಿದ್ಯಾರ್ಥಿಗಳು ಬೇಂದ್ರೆಯವರ ಕವನಗಳನ್ನು ಹಾಡಿದರು.

ದಿನಾಂಕ 21ನೇ ಫೆಬ್ರವರಿ 2017ರ ಮಂಗಳವಾರದಂದು ಶ್ರೀ ಅರವಿಂದ ಸಂಕೀರ್ಣ ಟ್ರಸ್ಟ್ ವತಿಯಿಂದ ಶ್ರೀಮಾತೆಯವರ ಜನ್ಮದಿನವನ್ನಾಗಿ ಆಚರಿಸ–ಲಾಯಿತು. ಬೆಳಿಗ್ಗೆ 7.00 ರಿಂದ 7.30ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರ ಮತ್ತು ಪ್ರಸಾದವನ್ನು ವಿತರಿಸಲಾಯಿತು. ತತ್ಸಂಬಂಧ 21ನೇ ಫೆಬ್ರವರಿಯಿಂದ 20ನೇ ಏಪ್ರಿಲ್ 2017ರವರೆಗೂ "Towards Perfect Health" ಎಂಬ ವಿಷಯದ ಬಗ್ಗೆ ವಸ್ತು–ಪ್ರದರ್ಶನವನ್ನು ಆಯೋಜಿಸಲಾಗಿದೆ.

## STATEMENT ABOUT OWNERSHIP AND OTHER PARTICULARS ABOUT NEWSPAPER AKHIL BHARAT PATRIKA

**FORM IV**

| | | |
|---|---|---|
| 1. Place of Publication | : | Bangalore |
| 2. Periodicity of its Publication | : | Monthly |
| 3. Printer's Name | : | Ajit Sabnis |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |
| 4. Publisher's Name | : | Ajit Sabnis |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |
| 5. Editor's Name | : | Dr. K.S. Amur |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |

6. Names and addresses of individuals who own the newspaper and partners or shareholders holding More than one per cent of the total capital.

| | | |
|---|---|---|
| Name | : | Sri Aurobindo Society |
| Nationality | : | |
| Address | : | No. 11, Saint Martin Street, Puducherry - 605 001. |

I, Ajit Sabnis, hereby declare that the particulars given above are true to the best of my knowledge and belief.

Sd/-

Date : 28-02-2017

Ajit Sabnis



*Our body's cells must hold*
*the Immortal's flame.*

- Sri Aurobindo

**RNI No. 22511/1971**
No. of Pages **60 + 4 (Cov. Page)**
KAR Reg No : RNP/KA/BGS/368/2015-2017
Date of Publication on 7th of Every Month
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.